ಮಂಗಳವಾರ, ಅಕ್ಟೋಬರ್ 1, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 273 | ಪುಟ 16
• www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಹಗುರಾಗಲಿ
ಹೃದಯ
ಹಸನಾಗಲಿ
ಬದುಕು



ಸೆನ್ಸೆಕ್ಸ್	ನಿಫ್ಟಿ	₹/$
84,299	25,810	83.79

ಮುಡಾ ಹಗರಣ: ಮುಖ್ಯಮಂತ್ರಿ ವಿರುದ್ಧ ಇಸಿಐಆರ್ ದಾಖಲಿಸಿದ ಜಾರಿ ನಿರ್ದೇಶನಾಲಯ

ಸಿದ್ದರಾಮಯ್ಯಗೆ ಇ.ಡಿ. ಬಲೆ

ಪ್ರಜಾವಾಣಿ ವಾರ್ತೆ



ಸಿದ್ದರಾಮಯ್ಯ

ನವದೆಹಲಿ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಬದಲಿ ನಿವೇಶನಗಳ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಕ್ಕೆ ಸಂಬಂಧಿಸಿದಂತೆ ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಇತರರ ವಿರುದ್ಧ ಜಾರಿ ನಿರ್ದೇಶನಾಲಯವು (ಇ.ಡಿ) ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಸೋಮವಾರ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿದೆ.

‘ಸಿದ್ದರಾಮಯ್ಯ ಕುಟುಂಬವು ಅಧಿಕಾರ ದುರುಪಯೋಗಪಡಿಸಿಕೊಂಡು ಮುಡಾದಿಂದ ಅಕ್ರಮವಾಗಿ ನಿವೇಶನಗಳನ್ನು ಪಡೆದಿದ್ದು, ಈ ಬಗ್ಗೆ ತನಿಖೆಗೆ ಆದೇಶಿಸಬೇಕು’ ಎಂದು ಕೋರಿ ಮೈಸೂರಿನ ಸ್ನೇಹಮಯಿ ಕೃಷ್ಣ ಎಂಬವರು ಖಾಸಗಿ ದೂರು ಸಲ್ಲಿಸಿದ್ದರು. ಸಿದ್ದರಾಮಯ್ಯ ಮತ್ತು ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುವಂತೆ ಜನಪ್ರತಿನಿಧಿಗಳ ಪ್ರಕರಣಗಳ ವಿಶೇಷ ನ್ಯಾಯಾಲಯ ಆದೇಶ ಹೊರಡಿಸಿತ್ತು.

ಲೋಕಾಯುಕ್ತದ ಮೈಸೂರು ಜಿಲ್ಲಾ ಘಟಕದ ಪೊಲೀಸರು ನ್ಯಾಯಾಲಯದ ಆದೇಶದಂತೆ ಶನಿವಾರ ಎಫ್‌ಐಆರ್ ದಾಖಲಿಸಿದ್ದರು. ಅದನ್ನು ಆಧಾರವಾಗಿಟ್ಟುಕೊಂಡು ಇ.ಡಿ ಬೆಂಗಳೂರು ಪ್ರಾದೇಶಿಕ ಕಚೇರಿಯ ಅಧಿಕಾರಿಗಳು ‘ಜಾರಿ ನಿರ್ದೇಶನಾಲಯದ ಪ್ರಕರಣದ ಮಾಹಿತಿ ವರದಿ‘ (ಇಸಿಐಆರ್) ದಾಖಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪೊಲೀಸ್ ಠಾಣೆಗಳು ಮತ್ತು ಪೊಲೀಸ್ ಇಲಾಖೆಯ ವ್ಯಾಪ್ತಿಯಲ್ಲಿರುವ ತನಿಖಾ ಸಂಸ್ಥೆಗಳು ಅಪರಾಧ ಪ್ರಕರಣಗಳ ತನಿಖೆಗೂ ಮುನ್ನ ಎಫ್‌ಐಆರ್ ದಾಖಲಿಸಲಾಗುತ್ತದೆ. ಅದೇ ಮಾದರಿಯಲ್ಲಿ ಇ.ಡಿ ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ತನಿಖೆ ನಡೆಸುವಾಗ ಇಸಿಐಆರ್ ದಾಖಲಿಸಿ, ಮುಂದುವರಿಯುತ್ತದೆ.

8ನೇ ಪುಟ ನೋಡಿ

ಮುಂದೇನಾಗಬಹುದು?

- ಸಿದ್ದರಾಮಯ್ಯ ಹಾಗೂ ಇತರ ಆರೋಪಿಗಳಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಸಾಕ್ಷ್ಯ ಸಂಗ್ರಹಕ್ಕೆ ಶೋಧ ಕಾರ್ಯಾಚರಣೆ ನಡೆಸಬಹುದು
- ತನಿಖೆಗೆ ಹಾಜರಾಗುವಂತೆ ಸಿದ್ದರಾಮಯ್ಯ ಹಾಗೂ ಇತರ ಆರೋಪಿಗಳಿಗೆ ಇ.ಡಿ. ನೋಟಿಸ್ ಜಾರಿಗೊಳಿಸಬಹುದು
- ವಿಚಾರಣೆಗೆ ಹಾಜರಾಗಲು ಆರೋಪಿಗಳು ಕಾಲಾವಕಾಶ ನೀಡುವಂತೆ ಇ.ಡಿ.ಗೆ ಮನವಿ ಸಲ್ಲಿಸಬಹುದು
- ಪ್ರಕರಣ ಪ್ರಶ್ನಿಸಿ ಆರೋಪಿಗಳು ನ್ಯಾಯಾಲಯದ ಮೊರೆ ಹೋಗಬಹುದು
- ಪ್ರಬಲ ಪುರಾವೆ ಸಿಕ್ಕರೆ ಮುಖ್ಯಮಂತ್ರಿ ಬಂಧನವೂ ಆಗಬಹುದು

‘ಘೋರ ತಿರಸ್ಕಾರಕ್ಕೆ ಮೋದಿ ಪ್ರತೀಕಾರ’

ಕರ್ನಾಟಕದ ಜನರು ಅವರನ್ನು (ಪ್ರಧಾನಿ ನರೇಂದ್ರ ಮೋದಿ) 2023ರ ಮಾರ್ಚ್‌ನಲ್ಲಿ ಘೋರವಾಗಿ ತಿರಸ್ಕರಿಸಿದರು. ಅವರು ಆ ಅವಮಾನವನ್ನು ಮರೆತಿಲ್ಲ. ತನಿಖಾ ಸಂಸ್ಥೆಯು ರಾಜಕೀಯ ವಿರೋಧಿಗಳ ವಿರುದ್ಧ ಕಿರುಕುಳ, ಸೇಡು ತೀರಿಸಿಕೊಳ್ಳುವ ಸಂಸ್ಥೆಯಾಗಿ ಬದಲಾಗಿರುವುದು ರಹಸ್ಯವಲ್ಲ. ಪ್ರಧಾನಿ ಹಾಗೂ ಇ.ಡಿ. ಬಣ್ಣ ಶೀಘ್ರದಲ್ಲಿ ಬಯಲಾಗಲಿದೆ. ನಾವು ಭಯ ಪಡಬೇಕಿಲ್ಲ. ಈ ಪ್ರಕ್ರಿಯೆಯಲ್ಲಿ ಸಿದ್ದರಾಮಯ್ಯ ದೋಷಮುಕ್ತರಾಗಿ ಹೊರಬರಲಿದ್ದಾರೆ.

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ)

14 ನಿವೇಶನ ವಾಪಸ್: ಸಿ.ಎಂ ಪತ್ನಿ ಪತ್ರ

ಬೆಂಗಳೂರು: ಮುಡಾ ಆಯುಕ್ತರಿಗೆ ಪತ್ರ ಬರೆದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ. ಪಾರ್ವತಿ ಅವರು, ತಮಗೆ ಮಂಜೂರಾದ 14 ನಿವೇಶನಗಳನ್ನು ಹಿಂತಿರುಗಿಸುವುದಾಗಿ ತಿಳಿಸಿದ್ದಾರೆ.
‘ಮೈಸೂರು ತಾಲ್ಲೂಕು ಕೆಸರೆ ಗ್ರಾಮದ 3 ಎಕರೆ 16 ಗುಂಟೆ ವಿಸ್ತೀರ್ಣದ ನನ್ನ ಜಮೀನನ್ನು ಪ್ರಾಧಿಕಾರವು ಭೂಸ್ವಾಧೀನವಿಲ್ಲದೆ ಉಪಯೋಗಿಸಿಕೊಂಡಿದ್ದರ ಪರಿಹಾರವಾಗಿ ವಿಜಯನಗರ 3 ಮತ್ತು 4 ನೇ ಹಂತದಲ್ಲಿ ವಿವಿಧ ಅಳತೆಯ 14 ನಿವೇಶನಗಳನ್ನು ಮಂಜೂರು ಮಾಡಿತ್ತು. ಈ ಸಂಬಂಧ ಕ್ರಯಪತ್ರಗಳನ್ನು ರದ್ದುಗೊಳಿಸುವ ಮೂಲಕ ನಾನು ಪರಿಹಾರದ ನಿವೇಶನಗಳನ್ನು ಹಿಂತಿರುಗಿಸಲು ಬಯಸುತ್ತೇನೆ.ಆದಷ್ಟು ಬೇಗ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಅವರು ಮನವಿ ಮಾಡಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಮಿಥುನ್ ಚಕ್ರವರ್ತಿಗೆ ಫಾಲ್ಕೆ ಗರಿ



ಮಿಥುನ್ ಚಕ್ರವರ್ತಿ

ನವದೆಹಲಿ/ಕೋಲ್ಕತ್ತ (ಪಿಟಿಐ): ಹಿರಿಯ ನಟ ಮಿಥುನ್ ಚಕ್ರವರ್ತಿ (74) ಅವರಿಗೆ ಪ್ರತಿಷ್ಠಿತ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಕೇಂದ್ರ ಸರ್ಕಾರ ಸೋಮವಾರ ಘೋಷಿಸಿದೆ.

ಸಿನಿಮಾ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದವರಿಗೆ ಸರ್ಕಾರ ನೀಡುವ ಅತ್ಯುನ್ನತ ಪ್ರಶಸ್ತಿ ಇದಾಗಿದೆ. ಭಾರತೀಯ ಸಿನಿಮಾದ ಪಿತಾಮಹ ದಾದಾಸಾಹೇಬ್ ಫಾಲ್ಕೆ ಹೆಸರಿನಲ್ಲಿ ಈ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ.

‘ಮೃಗಯಾ’, ‘ಡಿಸ್ಕೊ ಡಾನ್ಸರ್’ ಸೇರಿದಂತೆ ಹಲವು ಸಿನಿಮಾಗಳಲ್ಲಿ ನಟಿಸಿರುವ ಮಿಥುನ್ ಚಕ್ರವರ್ತಿ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಿರುವ ವಿಷಯವನ್ನು ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್ ‘ಎಕ್ಸ್’ನಲ್ಲಿ ಪ್ರಕಟಿಸಿದ್ದಾರೆ.

ಆಡಳಿತಾರೂಢ ಬಿಜೆಪಿ ನಾಯಕರೂ ಆಗಿರುವ ಮಿಥುನ್ ಅವರಿಗೆ ಕೆಲ ತಿಂಗಳ ಹಿಂದೆಯಷ್ಟೇ ದೇಶದ ಮೂರನೇ ಅತ್ಯುನ್ನತ ನಾಗರಿಕ ಗೌರವವಾದ ಪದ್ಮಭೂಷಣ ಪ್ರದಾನ ಮಾಡಲಾಗಿತ್ತು.

ಫುಟ್‌ಪಾತ್‌ನಿಂದ ಫಾಲ್ಕೆ ಗರಿಯವರೆಗೆ 9

‘ಪತ್ನಿ ತೀರ್ಮಾನ ಆಶ್ಚರ್ಯ ತಂದಿದೆ’

ಪ್ರಜಾವಾಣಿ ವಾರ್ತೆ

ಮೈಸೂರು: ‘ ನನ್ನ ವಿರುದ್ಧ ನಡೆಯುತ್ತಿರುವ ರಾಜಕೀಯ ಷಡ್ಯಂತ್ರದಿಂದ ನೊಂದಿರುವ ನನ್ನ ಪತ್ನಿ ನಿವೇಶನಗಳನ್ನು ಹಿಂದಿರುಗಿಸುವ ನಿರ್ಧಾರ ಕೈಗೊಂಡು, ನನಗೂ ಆಶ್ಚರ್ಯ ಉಂಟು ಮಾಡಿದ್ದಾರೆ. ಹೀಗಿದ್ದರೂ ನಿವೇಶನಗಳನ್ನು ಹಿಂದಿರುಗಿಸಿದ ನಿರ್ಧಾರವನ್ನು ಗೌರವಿಸುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ.

ಮುಡಾದಿಂದ ಪಡೆದ 14 ನಿವೇಶನಗಳನ್ನು ವಾಪಸ್ ನೀಡುವುದಾಗಿ ಸಿದ್ದರಾಮಯ್ಯರ ಪತ್ನಿ ಬಿ.ಎಂ. ಪಾರ್ವತಿ ಮುಡಾ ಆಯುಕ್ತರಿಗೆ ಪತ್ರ ಬರೆದಿರುವ ಕುರಿತು ತಮ್ಮ ಎಕ್ಸ್ ಖಾತೆಯಲ್ಲಿ ಪ್ರತಿಕ್ರಿಯೆ ನೀಡಿರುವ ಮುಖ್ಯಮಂತ್ರಿ ‘ಮೈಸೂರಿನ ಮುಡಾ ಭೂಸ್ವಾಧೀನ ನಡೆಸದೆ ವಶಕ್ಕೆ ಪಡೆದಿದ್ದ ಜಮೀನಿಗೆ ಪರಿಹಾರ ರೂಪದಲ್ಲಿ ನೀಡಿದ್ದ ನಿವೇಶನಗಳನ್ನು ನನ್ನ ಪತ್ನಿ ಪಾರ್ವತಿ ಹಿಂದಿರುಗಿಸಿದ್ದಾರೆ. ನನ್ನ ವಿರುದ್ಧ ರಾಜಕೀಯ ದ್ವೇಷ ಸಾಧನೆಗಾಗಿ ವಿರೋಧ ಪಕ್ಷಗಳು ಸುಳ್ಳು ದೂರನ್ನು ಸೃಷ್ಟಿಸಿ ನನ್ನ ಕುಟುಂಬವನ್ನು ವಿವಾದಕ್ಕೆ ಎಳೆದು ತಂದಿರುವುದು ರಾಜ್ಯದ ಜನತೆಗೂ ತಿಳಿದಿದೆ’ ಎಂದಿದ್ದಾರೆ.

‘ನನ್ನ ನಾಲ್ಕು ದಶಕಗಳ ಸುದೀರ್ಘ ರಾಜಕಾರಣದಲ್ಲಿ ಎಂದೂ ಕೂಡಾ ಮಧ್ಯೆ ಪ್ರವೇಶಿಸದೆ ಕುಟುಂಬಕ್ಕಷ್ಟೆ ಸೀಮಿತವಾಗಿದ್ದ ನನ್ನ ಪತ್ನಿ ನನ್ನ ವಿರುದ್ಧದ ದ್ವೇಷದ ರಾಜಕಾರಣಕ್ಕೆ ಬಲಿಯಾಗಿ ಮಾನಸಿಕವಾಗಿ ಹಿಂಸೆ ಅನುಭವಿಸುವಂತಾಗಿರುವುದಕ್ಕೆ ನನಗೆ ವಿಷಾದ ಇದೆ’ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಕಿದ್ವಾಯಿಗೆ ಎಲ್‌ಐಸಿಯಿಂದ ₹ 1 ಕೋಟಿ ಪ್ರೋತ್ಸಾಹಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಅಸ್ತಿಮಜ್ಜೆ ಕಸಿ ಘಟಕದ (ಬೋನ್‌ಮ್ಯಾರೋ ಟ್ರಾನ್ಸ್ ಪ್ಲಾಂಟ್) ಸಾಧನೆಯನ್ನು ಗುರುತಿಸಿ ಭಾರತೀಯ ಜೀವ ವಿಮಾ ನಿಗಮ, ಬೆಂಗಳೂರು ವಲಯ-2 'ಎಲ್‌ಐಸಿ ಸುವರ್ಣ ಮಹೋತ್ಸವ ಫೌಂಡೇಷನ್' ₹ 1 ಕೋಟಿ ಪ್ರೋತ್ಸಾಹಧನ ನೀಡಿದೆ.

ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸೆ ನೀಡುವ ಸಂಸ್ಥೆಯಲ್ಲಿರುವ ಅಸ್ತಿಮಜ್ಜೆ ಕಸಿ ಘಟಕವು 100 ಯಶಸ್ವಿ ಅಸ್ತಿಮಜ್ಜೆ ಕಸಿ ಚಿಕಿತ್ಸೆ ನಡೆಸಿದೆ. ಇದಕ್ಕಾಗಿ ಎಲ್‌ಐಸಿ ಪ್ರೋತ್ಸಾಹಧನ ನೀಡುತ್ತಿದೆ. ಸಂಸ್ಥೆಯ ಆಡಳಿತಾಧಿಕಾರಿ ಡಾ.ವೈ. ನವೀನ್ ಭಟ್, ಎಲ್‌ಐಸಿ ಹೈದರಾಬಾದ್ ದಕ್ಷಿಣ ಕೇಂದ್ರ ವಲಯದ ಪ್ರಾದೇಶಿಕ ವ್ಯವಸ್ಥಾಪಕ ಜಿ.ವಿ. ರಾಮಯ್ಯ ಅವರು ಪ್ರೋತ್ಸಾಹದ ಪತ್ರಕ್ಕೆ ಪರಸ್ಪರ ಸಹಿ ಹಾಕಿದರು. ಎಲ್‌ಐಸಿ ಬೆಂಗಳೂರು ದಕ್ಷಿಣ ಕೇಂದ್ರ ವಲಯದ ಪ್ರಾದೇಶಿಕ ವ್ಯವಸ್ಥಾಪಕ (ಮಾರುಕಟ್ಟೆ ವಿಭಾಗ) ರವಿಕುಮಾರ್, ದಕ್ಷಿಣ ಕೇಂದ್ರ ವಿಭಾಗದ ವಲಯ ವ್ಯವಸ್ಥಾಪಕ ಪುನೀತ್ ಕುಮಾರ್, ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಟಿ. ನವೀನ್, ಗಂಥಿ ವಿಜ್ಞಾನ ವಿಭಾಗದದ ಮುಖ್ಯಸ್ಥ ಡಾ.ಸುರೇಶ್ ಬಾಬು ಉಪಸ್ಥಿತರಿದ್ದರು.

ಎಫ್‌ಐಆರ್ ದಾಖಲಿಸಲು ಕಾನೂನು ತಜ್ಞರ ಮೊರೆ ಹೋದ ಪೊಲೀಸರು

ಸರ್ಕಾರ ಪತನಕ್ಕೆ ಹಣ ಸಂಗ್ರಹ: ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವನ್ನು ಪತನಗೊಳಿಸಲು ಅಕ್ರಮವಾಗಿ ಸಂಗ್ರಹಿಸಿರುವ ₹1 ಸಾವಿರ ಕೋಟಿಯನ್ನು ಜಪ್ತಿ ಮಾಡಿಕೊಂಡು, ಹಣ ಸಂಗ್ರಹಿಸಿಟ್ಟವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕು' ಎಂದು ಕೋರಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ(ಕೆಪಿಸಿಸಿ) ಉಪಾಧ್ಯಕ್ಷ ವಿ.ಎಸ್.ಉಗ್ರಪ್ಪ ನೇತೃತ್ವದ ನಿಯೋಗವು ಹೈಗ್ರೌಂಡ್ಸ್ ಠಾಣೆ ಪೊಲೀಸರಿಗೆ ಸೋಮವಾರ ರಾತ್ರಿ ದೂರು ಸಲ್ಲಿಸಿದೆ.

'ಕೆಪಿಸಿಸಿ ಸಲ್ಲಿಸಿರುವ ದೂರನ್ನು ಸ್ವೀಕರಿಸಲಾಗಿದೆ. ಸದ್ಯ ಯಾರ ವಿರುದ್ಧವೂ ಎಫ್‌ಐಆರ್ ದಾಖಲಾಗಿಲ್ಲ. ಕಾನೂನು ತಜ್ಞರ ಸಲಹೆ ಪಡೆದು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ದೂರಿನಲ್ಲಿ ಏನಿದೆ?: 'ಬಿಜೆಪಿ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ಬಿ.ಪಿ. ಹರೀಶ್ ಹಾಗೂ ಮಾಜಿ ಸಂಸದರಾದ ಜಿ.ಎಂ.ಸಿದ್ದೇಶ್ವರ, ಪ್ರತಾಪ ಸಿಂಹ ಸೇರಿದಂತೆ ಹಲವರು ದಾವಣಗೆರೆಯ ಜಿಎಂಐಟಿಯಲ್ಲಿ ಸಭೆ ನಡೆಸಿದ್ದರು. ಸಭೆ ಬಳಿಕ ನಡೆದ ಪತ್ರಿಕಾಗೋಷ್ಠಿಯಲ್ಲಿ,



ಪೊಲೀಸರಿಗೆ ದೂರು ನೀಡಿದ ವಿ.ಎಸ್.ಉಗ್ರಪ್ಪ ನೇತೃತ್ವದ ಕಾಂಗ್ರೆಸ್ ನಿಯೋಗ

'ರಾಜ್ಯದ ನಮ್ಮ ಪಕ್ಷದ ನಾಯಕರು ₹1 ಸಾವಿರ ಕೋಟಿಯನ್ನು ಸಂಗ್ರಹಿಸಿ ಇಟ್ಟುಕೊಂಡಿದ್ದಾರೆ. ಆ ಹಣ ಬಳಸಿ ರಾಜ್ಯ ಸರ್ಕಾರವನ್ನು ಪತನಗೊಳಿಸಿ, ತಾವು ಮುಖ್ಯಮಂತ್ರಿ ಆಗಲು ಹೊರಟಿದ್ದಾರೆ. ಆ ಹಣವನ್ನು ಬಳಸಿ ಕಾಂಗ್ರೆಸ್ ಶಾಸಕರನ್ನು ಖರೀದಿಸಲು ಸಂಚು ರೂಪಿಸಿದ್ದಾರೆ. ಅಲ್ಲದೇ ಡಿಸೆಂಬರ್‌ನಲ್ಲಿ ರಾಜಕೀಯ ಕ್ರಾಂತಿ ಆಗಲಿದೆ ಎಂದೂ ಹೇಳಿಕೆ ಕೊಟ್ಟಿದ್ದಾರೆ. ಹಣ ಸಂಗ್ರಹಿಸಿರುವ ನಾಯಕರ ಮನೆಯಲ್ಲಿ ನೋಟು ಎಣಿಕೆ ಯಂತ್ರವೂ ಪತ್ತೆಯಾಗಿತ್ತು' ಎಂದು ಬಸವನಗೌಡ ಪಾಟೀಲ ಯತ್ನಾಳ ಹೇಳಿದ್ದಾರೆ. ಸಭೆಯಲ್ಲಿ ಇದ್ದವರಿಗೆ ಈ ಬಗ್ಗೆ ಖಚಿತ ಮಾಹಿತಿ ಇದ್ದುದ್ದರಿಂದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

'ಜನರು ಕಾಂಗ್ರೆಸ್‌ಗೆ 135 ಸ್ಥಾನ ನೀಡಿ 5 ವರ್ಷ ಸರ್ಕಾರ ನಡೆಸಲು ಜನಾದೇಶ ಕೊಟ್ಟಿದ್ದಾರೆ. ಕಾಂಗ್ರೆಸ್ ಸರ್ಕಾರವು ಜನಪರ ಆಡಳಿತ ನಡೆಸುತ್ತಿದೆ. ಅಧಿಕಾರವಿಲ್ಲದೇ ಹತಾಶೆಗೊಂಡಿರುವ ಬಿಜೆಪಿಯ ಕೆಲವು ನಾಯಕರು, ಭ್ರಷ್ಟಾಚಾರದ ಮೂಲಕ ಹಣ ಸಂಗ್ರಹಿಸಿದ್ದಾರೆ. ರಾಜ್ಯ ಸರ್ಕಾರವನ್ನು ಪತನಗೊಳಿಸಲು ಸಂಚು ರೂಪಿಸಿರುವುದು ಯತ್ನಾಳ ಅವರ ಹೇಳಿಕೆಯಿಂದ ಸ್ಪಷ್ಟವಾಗಿದೆ. ಸಂಚು ರೂಪಿಸಿದ ಮುಖಂಡರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು' ಎಂದು ಕೋರಲಾಗಿದೆ.

'ಯತ್ನಾಳ ಹೇಳಿಕೆ ಬಿಜೆಪಿ ಒಪ್ಪುವುದಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರವನ್ನು ರಚಿಸುವುದು ಹಣದ ಆಧಾರದಲ್ಲಿ ಎಂಬ ನಂಬಿಕೆ ನಮ್ಮದಲ್ಲ. ಇಲ್ಲಿನ ತನಕ ನಾವು ಸರ್ಕಾರ ರಚಿಸಿದ್ದು, ಶಾಸಕರ ಬೆಂಬಲದಿಂದಲೇ ವಿನಾ ಹಣಕಾಸಿನ ಬೆಂಬಲದಿಂದಲ್ಲ. ಬಸನಗೌಡ ಪಾಟೀಲ ಯತ್ನಾಳ ಅವರ ಹೇಳಿಕೆಯನ್ನು ಬಿಜೆಪಿ ಒಪ್ಪುವುದಿಲ್ಲ' ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಸುನಿಲ್‌ಕುಮಾರ್ ಹೇಳಿದರು.

'ಮಹಾನ್ ನಾಯಕರೊಬ್ಬರು ಮುಖ್ಯಮಂತ್ರಿಯಾಗಲು ₹1,000 ಕೋಟಿ ಇಟ್ಟುಕೊಂಡಿದ್ದಾರೆ. ಸರ್ಕಾರ ಉರುಳಿಸಲು ಪ್ರಯತ್ನ ನಡೆದಿದೆ' ಎಂಬ ಯತ್ನಾಳ ಅವರ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಅವರು, 'ಆ ರೀತಿಯ ಹೇಳಿಕೆ ಅವರ ವೈಯಕ್ತಿಕವಾದುದು. ಇದನ್ನು ಬಿಜೆಪಿ ಒಪ್ಪಲು ಸಾಧ್ಯವಿಲ್ಲ' ಎಂದು ಹೇಳಿದರು.

'ಇದನ್ನು ಪಕ್ಷದ ವರಿಷ್ಠರು ಖಂಡಿತವಾಗಿ ಗಮನಿಸುತ್ತಾರೆ' ಎಂದು ಹೇಳಿದ ಅವರು, 'ಯಾವ ಕಾರಣದಿಂದ ಅವರು ಇದನ್ನು ಹೇಳಿದ್ದಾರೆ ಎಂಬ ವರದಿ ತರಿಸಿ ಕೊಂಡು ಮುಂದಿನ ದಿನಗಳಲ್ಲಿ ಅದಕ್ಕೆ ಉತ್ತರ ನೀಡುತ್ತೇವೆ' ಎಂದು ಸುನಿಲ್ ಹೇಳಿದರು.



ವಿ.ಸುನಿಲ್ ಕುಮಾರ್

'ಪದೇ ಪದೇ ಈ ರೀತಿ ಮಾಡುವುದು ಸರಿಯಲ್ಲ ಎಂಬ ಅಭಿಪ್ರಾಯ ಕಾರ್ಯಕರ್ತರು, ಪಕ್ಷದ ವಲಯದಲ್ಲಿದೆ. ದೊಡ್ಡ ಪ್ರಮಾಣದಲ್ಲಿ ಸದಸ್ಯತ್ವ ನೋಂದಣಿ ಅಭಿಯಾನ ಮತ್ತು ಉಳಿದ ಕಾರ್ಯಕ್ರಮಗಳು ನಡೆಯುವ ಸಂದರ್ಭದಲ್ಲಿ ಈ ರೀತಿಯ ಚಟುವಟಿಕೆಗಳ ಮೂಲಕ ಪಕ್ಷಕ್ಕೆ ಮುಜುಗರ ತರುವುದು ಒಳ್ಳೆಯದಲ್ಲ ಎಂಬ ಅಭಿಪ್ರಾಯ ನಮ್ಮದು' ಎಂದರು.

ತಪ್ಪು ಒಪ್ಪಿಕೊಂಡ ಸಿ.ಎಂ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂಡಾ ಹಗರಣದಲ್ಲಿ ಕಾನೂನಿನ ಕುಣಿಕೆ ಬಿಗಿಯಾಗುತ್ತಿದ್ದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಪತ್ನಿ ಹೆಸರಿನಲ್ಲಿ ಪಡೆದಿದ್ದ 14 ಸೈಟುಗಳನ್ನು ಹಿಂತಿರುಗಿಸುವ ನಿರ್ಧಾರ ಮಾಡಿದ್ದಾರೆ. ಇದು ನಮ್ಮ ಹೋರಾಟದ ಹಾದಿಯಲ್ಲಿ ಸಿಕ್ಕಿರುವ ಮತ್ತೊಂದು ಜಯ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದ್ದಾರೆ.



ಆರ್. ಅಶೋಕ

'ನಾನು ತಪ್ಪೇ ಮಾಡಿಲ್ಲ ಎನ್ನುತ್ತಿದ್ದವರು ಈಗ ತಪ್ಪನ್ನ ಒಪ್ಪಿಕೊಂಡು ಸತ್ಯಕ್ಕೆ ಶರಣಾಗಿದ್ದಾರೆ' ಎಂದು ಅವರು 'ಎಕ್ಸ್'ನಲ್ಲಿ ಪ್ರತಿಕ್ರಿಯಿಸಿದ್ದಾರೆ.

'ಕದ್ದ ಮಾಲನ್ನು ಹಿಂತಿರುಗಿಸಿದ ಕೂಡಲೇ ಕಳ್ಳ ನಿರಪರಾಧಿ ಆಗಿಬಿಡುತ್ತಾನೆಯೇ? ಕದ್ದ ಮಾಲನ್ನು ವಾಪಸ್ಸು ಕೊಟ್ಟ ತಕ್ಷಣ ಕಳ್ಳತನ ಮಾಫಿ ಆಗಿಬಿಡುತ್ತದೆಯೇ?. 'ಕೆಟ್ಟ ಮೇಲೆ ಬುದ್ಧಿ ಬಂತು' ಎಂಬಂತೆ ಈಗಲಾದರೂ ಸಿದ್ದರಾಮಯ್ಯನವರಿಗೆ ತಮ್ಮ ತಪ್ಪಿನ ಅರಿವಾಯಿತಲ್ಲ ಎನ್ನುವುದು ಸಮಾಧಾನಕರ ವಿಷಯ ಎಂದು ವ್ಯಂಗ್ಯವಾಡಿದ್ದಾರೆ.

'ನಕಲಿ ವೈದ್ಯರ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಿ'

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ಕುಂಬಳಗೋಡು ಪಂಚಾಯಿತಿ ವ್ಯಾಪ್ತಿಯಲ್ಲಿ ನಕಲಿ ವೈದ್ಯರು ಕಾರ್ಯ ನಿರ್ವಹಿಸುತ್ತಿದ್ದು, ಅಂಥವರ ವಿರುದ್ಧ ಸೂಕ್ತ ಕಾನೂನು ಕ್ರಮಗಳಾಗುತ್ತಿಲ್ಲ' ಎಂದು ಕುಂಬಳಗೋಡು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಚಿಕ್ಕರಾಜು ದೂರಿದರು.

ಕುಂಬಳಗೋಡು ಗ್ರಾಮ ಪಂಚಾಯಿತಿ ವತಿಯಿಂದ ಆಯೋಜಿಸಲಾಗಿದ್ದ ಮೊದಲನೆ ಸುತ್ತಿನ ಗ್ರಾಮ ಸಭೆಯಲ್ಲಿ ಅವರು ಮಾತನಾಡಿದರು.

ವೈದ್ಯಕೀಯ ಶಿಕ್ಷಣ ಪಡೆಯದೆ ಅಲೋಪತಿ ಪದ್ಧತಿ ಆಧಾರಿತ ಔಷಧ ನೀಡುತ್ತಿರುವ ಆಯುರ್ವೇದ ವೈದ್ಯರು ಸೇರಿದಂತೆ, ಸೂಕ್ತ ಶಿಕ್ಷಣ ಪಡೆಯದೆ ಮೆಡಿಕಲ್ ಸ್ಟೋರ್, ಲ್ಯಾಬ್‌ಗಳನ್ನು ನಡೆಸುತ್ತಿರುವ ಪ್ರಕರಣಗಳು ಪಂಚಾಯಿತಿ ವ್ಯಾಪ್ತಿಯಲ್ಲಿ ವ್ಯಾಪಕವಾಗಿವೆ. ಔಷಧ ಅಂಗಡಿಗಳಲ್ಲೇ



ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚುಅಂಕ ಪಡೆದ ಪಂಚಾಯಿತಿ ವ್ಯಾಪ್ತಿಯ ಬಾಲಕಿಯರಿಗೆ ಪ್ರೋತ್ಸಾಹ ಧನ ನೀಡಲಾಯಿತು

ಗಾಂಜಾ ಮಾರಾಟದಂತಹ ಗಂಭೀರ ಪ್ರಕರಣಗಳು ಪಂಚಾಯಿತಿ ವ್ಯಾಪ್ತಿಯಲ್ಲಿ ದಾಖಲಾಗಿವೆ. ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು, ತಾಲೂಕು ವೈದ್ಯಾಧಿಕಾರಿಗಳಿಗೆ ಮಾಹಿತಿ ನೀಡಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿದರು.

'ಜಲಂಡಳಿಯ ಕಾಮಗಾರಿಗಾಗಿ ಅಗೆದ ರಸ್ತೆಗಳನ್ನು ಹಾಗೆ ಬಿಡಲಾಗಿದೆ. ಈಗಲೂ ಡಾಂಬರು ಹಾಕಿಲ್ಲ. ಗುಂಡಿಗಳಿಗೆ ಬಿದ್ದು ಹಲವಾರು ಮಂದಿ ಗಾಯಗೊಂಡಿದ್ದಾರೆ' ಎಂದು ಕಾರುಬೆಲೆ ನಿವಾಸಿಗಳು ಅಲವತ್ತುಕೊಂಡರು.

'ಬೀದಿಯ ಎಲ್ಲರ ಮನೆಗೂ ನೀರು ಬರುತ್ತಿದೆ. ನಮ್ಮ ಮನೆಗೆ ಮಾತ್ರ ನೀರು ಬಾರದಿರಲು ಕಾರಣವೇನು' ಎಂದು ಕುಂಬಳಗೋಡು ನಿವಾಸಿ ರಮೇಶ್ ಪ್ರಶ್ನಿಸಿದರು.

'ಬಸವಗಂಗೋತ್ರಿ ಬಡಾವಣೆಯ ನೀರಿನ ಸಮಸ್ಯೆ, ಬೀದಿ ದೀಪದ ಸಮಸ್ಯೆಗೆ ವರ್ಷ ಕಳೆದರೂ ಪರಿಹಾರ ದೊರೆತಿಲ್ಲ' ಎಂದು ವೃದ್ದರೊಬ್ಬರು ಬೇಸರ ವ್ಯಕ್ತಪಡಿಸಿದರು.

ಗ್ರಾಪಂ ಅಧ್ಯಕ್ಷ ಎನ್.ದೇವರಾಜ್, 'ನೀರಿನ ಕೊರತೆ ಸರಿಪಡಿಸಲು ಈಗಾಗಲೇ 23 ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಅಂತರ್ಜಲದ ಕೊರತೆಯಿಂದ ನೀರಿನ ಲಭ್ಯತೆ ಕಡಿಮೆಯಿದ್ದು, ಮಂಚನಬೆಲೆ ಕಾಮಗಾರಿ ಮುಗಿದ ಬಳಿಕ ಸಮಸ್ಯೆಗೆ ಶಾಶ್ವತ ಪರಿಹಾರ ದೊರಕಲಿದೆ' ಎಂದರು.

'ಅಪಾರ್ಟ್‌ಮೆಂಟ್ ಹಾಗೂ ವಾಣಿಜ್ಯ ಕಟ್ಟಡದ ಮಾಲೀಕರು ನೀರಿನ ಪೂರೈಕೆಗೆ ಸ್ವಂತ ಜಲಮೂಲಗಳನ್ನು ಹೊಂದಬೇಕು. ನೀರು ಪೂರೈಕೆಯಲ್ಲಿ ವಸತಿ ಉದ್ದೇಶಗಳಿಗೆ ಮೊದಲ ಪ್ರಾಶಸ್ತ್ಯ ದೊರಕಬೇಕು' ಎಂದರು.

ಮುಖಂಡರಾದ ಗೋಪಾಲಕೃಷ್ಣ, ನರಸಿಂಹಮೂರ್ತಿ, ರಾಮಕೃಷ್ಣ, ನಂಜೇಗೌಡ, ಅನೀಸ್, ನಂಜಪ್ಪ ಮತ್ತಿತರರು ಉಪಸ್ಥಿತರಿದ್ದರು.

ಹೋರಾಟಕ್ಕೆ ಸಂದ ಮೊದಲ ಜಯ: ಸ್ನೇಹಮಯಿ ಕೃಷ್ಣ

ಪ್ರಜಾವಾಣಿ ವಾರ್ತೆ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಅವರು ಮುಡಾದಿಂದ ಪಡೆದ 14 ನಿವೇಶನಗಳನ್ನು ವಾಪಸ್ ನೀಡುತ್ತಿರುವುದು ನಮ್ಮ ಹೋರಾಟಕ್ಕೆ ಸಂದ ಮೊದಲ ಜಯ ಎಂದು ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ಹೇಳಿದ್ದಾರೆ.

ಈ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿರುವ ಅವರು ' ಮಾಡಿದ ತಪ್ಪು ಅರಿವಾದ ಕಾರಣಕ್ಕೆ ಅವರು ನಿವೇಶನ ವಾಪಸ್ ನೀಡುತ್ತಿದ್ದಾರೆ. ಆದರೆ ತಪ್ಪಿತಸ್ಥರಿಗೆ ಶಿಕ್ಷೆ ಆಗುವವರೆಗೆ ಕಾನೂನಾತ್ಮಕವಾಗಿ ಹೋರಾಟ ಮುಂದುವರಿಸುತ್ತೇವೆ' ಎಂದಿದ್ದಾರೆ.

ಎಚ್‌ಡಿಕೆಗೆ ಅವಾಚ್ಯ ಪದ: ಖಂಡನೆ

ಬೆಂಗಳೂರು: ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಬಗ್ಗೆ ಐಪಿಎಸ್ ಅಧಿಕಾರಿ ಎಂ. ಚಂದ್ರಶೇಖರ್ ಅವಹೇಳನಕಾರಿ ಶಬ್ದ ಬಳಕೆ ಮಾಡಿರುವುದನ್ನು ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ, ಶ್ರವಣಬೆಳಗೊಳ ಶಾಸಕ ಸಿ.ಎನ್. ಬಾಲಕೃಷ್ಣ ಖಂಡಿಸಿದ್ದಾರೆ.

ಚುನಾಯಿತ ಪ್ರತಿನಿಧಿಯೊಬ್ಬರು ಸರ್ಕಾರದ ವಿರುದ್ಧ ಆರೋಪ ಮಾಡಿದಾಗ ಅದಕ್ಕೆ ಪ್ರತಿಕ್ರಿಯೆ ನೀಡಲು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರು ಇರುತ್ತಾರೆ. ಕಾರ್ಯಾಂಗದ ವ್ಯವಸ್ಥೆಯಲ್ಲಿ ಚುನಾಯಿತ ಪ್ರತಿನಿಧಿಗಳ ವಿರುದ್ಧ ಪ್ರತಿಕ್ರಿಯಿಸುವ ಅಧಿಕಾರವನ್ನು ಈ ಐಪಿಎಸ್ ಅಧಿಕಾರಿಗೆ ಯಾರು ಕೊಟ್ಟಿದ್ದಾರೆ ಎಂದು ಪ್ರಶ್ನಿಸಿದ್ದಾರೆ.

'ಎರಡು ಬಾರಿ ಮುಖ್ಯಮಂತ್ರಿಯಾಗಿದ್ದ ಹಾಲಿ ಕೇಂದ್ರ ಸಚಿವರ ಬಗ್ಗೆ ಲಘುವಾಗಿ ಪ್ರತಿಕ್ರಿಯಿಸಿರುವ ಅಧಿಕಾರಿ ಮೇಲೆ ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿದ್ದಾರೆ.

'ಪಾದಚಾರಿ ಮಾರ್ಗ ತೆರವುಗೊಳಿಸಿ'

ಬೆಂಗಳೂರು: 'ಜೆ.ಪಿ. ನಗರದ ಒಂದನೇ ಹಂತದ ಒಂಬತ್ತನೇ ಅಡ್ಡರಸ್ತೆಯ ಟುಲಿಪ್ ಅಪಾರ್ಟ್‌ಮೆಂಟ್ ಮುಂಭಾಗದ ಪಾದಚಾರಿ ಮಾರ್ಗವನ್ನು ಬೀದಿ ವ್ಯಾಪಾರಿಗಳು ಅತಿಕ್ರಮಿಸಿಕೊಂಡಿದ್ದಾರೆ. ಇದರಿಂದ, ಸಾರ್ವಜನಿಕರ ಓಡಾಟಕ್ಕೆ ಸಮಸ್ಯೆ ಆಗಿದೆ' ಎಂದು ಸ್ಥಳೀಯ ನಿವಾಸಿ ಪಿ. ಮುತ್ತುರಾಜು ದೂರಿದ್ದಾರೆ.

'ಪಾದಚಾರಿ ಮಾರ್ಗದಲ್ಲಿ ವ್ಯಾಪಾರ ನಡೆಸುತ್ತಿದ್ದು, ಇದರಿಂದ ಈ ಭಾಗದಲ್ಲಿ ಸಂಚಾರ ದಟ್ಟಣೆ ಆಗುತ್ತಿದ್ದು, ಅಪಘಾತಗಳು ಸಂಭವಿಸುವ ಸಾಧ್ಯತೆ ಇದೆ' ಎಂದು ಅವರು ಆತಂಕ ವ್ಯಕ್ತಪಡಿಸಿದ್ದಾರೆ.

'ಇಲ್ಲಿನ ವ್ಯಾಪಾರಿಗಳು ತ್ಯಾಜ್ಯವನ್ನು ಪಾದಚಾರಿ ಮಾರ್ಗದಲ್ಲಿ ಹಾಕುತ್ತಿದ್ದಾರೆ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಸುತ್ತಮುತ್ತಲಿನ ನಿವಾಸಿಗಳಲ್ಲಿ ಡೆಂಗಿ ಹರಡುವ ಭೀತಿ ಶುರುವಾಗಿದೆ' ಎಂದು ಆರೋಪಿಸಿದ್ದಾರೆ.

'ಬಿಬಿಎಂಪಿ ಸಿಬ್ಬಂದಿ ಹಾಗೂ ಸಂಚಾರ ಪೊಲೀಸರು ಅತಿಕ್ರಮಗೊಂಡ ಪಾದಚಾರಿ ಮಾರ್ಗವನ್ನು ತೆರವುಗೊಳಿಸಿ, ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು' ಎಂದು ಒತ್ತಾಯಿಸಿದ್ದಾರೆ.



ಟುಲಿಪ್ ಅಪಾರ್ಟ್‌ಮೆಂಟ್ ಮುಂಭಾಗದ ಪಾದಚಾರಿ ಮಾರ್ಗವನ್ನು ಆತಿಕ್ರಮಿಸಿಕೊಂಡಿರುವುದು

ಬ್ಯಾಸ್ಕೆಟ್‌ಬಾಲ್: ಪಿಪಿಸಿ, ಬೀಗಲ್ಸ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀಗಲ್ಸ್ ಬಿ.ಸಿ ಮತ್ತು ಪಿ.ಪಿ.ಸಿ ತಂಡಗಳು ರಾಜ್ಯ ಯೂತ್ (16 ವರ್ಷದೊಳಗಿನವರ) ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಬಾಲಕರ ವಿಭಾಗದ ಸೆಮಿಫೈನಲ್ ಲೀಗ್‌ನ ಮೊದಲ ಸುತ್ತಿನಲ್ಲಿ ಜಯ ಸಾಧಿಸಿದವು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಅಂಕಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಬೀಗಲ್ಸ್ ತಂಡವು 66-62ರಿಂದ ಬಿ.ಸಿ. ಬಿ.ಸಿ. ತಂಡವನ್ನು ಸೋಲಿಸಿದರೆ, ಪಿ.ಪಿ.ಸಿ. ತಂಡವು 79-47ರಿಂದ ಮೈಸೂರು ಜಿಲ್ಲಾ ತಂಡವನ್ನು ಮಣಿಸಿತು.

ಬಾಲಕಿಯರ ವಿಭಾಗದ ಸೆಮಿಫೈನಲ್ ಲೀಗ್‌ನ ಮೊದಲ ಪಂದ್ಯದಲ್ಲಿ ಮೌಂಟ್ಸ್ ಕ್ಲಬ್ ತಂಡವು 73-45ರಿಂದ ಯಂಗ್ ಓರಿಯನ್ಸ್ ಎಸ್.ಸಿ ತಂಡವನ್ನು; ಮತ್ತೊಂದು ಪಂದ್ಯದಲ್ಲಿ ಮೈಸೂರು ಜಿಲ್ಲಾ 'ಎ' ತಂಡವು 63-54ರಿಂದ ಬೀಗಲ್ಸ್ ಬಿ.ಸಿ ತಂಡವನ್ನು ಸೋಲಿಸಿತು.

ಸೆಮಿಫೈನಲ್ ಲೀಗ್‌ನ ಎರಡನೇ ಸುತ್ತಿನ ಪಂದ್ಯಗಳು ಮತ್ತು ಫೈನಲ್ ಹಣಾಹಣಿ ಮಂಗಳವಾರ ನಡೆಯಲಿದೆ.

ಜಲಮಂಡಳಿ: ಕಚೇರಿ ಬದಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೂಡ್ಲು ಜಿ.ಎಲ್. ಆರ್ ಕೇಂದ್ರ ಕಾರಾಗೃಹ ಮುಖ್ಯ ರಸ್ತೆಯ ಅಮೃತ ಕಾಲೇಜು ಹತ್ತಿರವಿದ್ದ ಜಲಂಡಳಿಯ ದಕ್ಷಿಣ ಉಪವಿಭಾಗ-2-2 ರ ಸಹಾಯಕ ಕಾರ್ಯನಿರ್ವಾಹಕ ಎಂಜನಿಯರ್ ಕಚೇರಿಯನ್ನು ಬೇಗೂರು ಸಮೀಪದ ಹೊಸ ಕಚೇರಿಗೆ ಸ್ಥಳಾಂತರಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಹೊಸ ಕಚೇರಿ ವಿಳಾಸ: ಸಹಾಯಕ ಕಾರ್ಯನಿರ್ವಾಹಕ ಎಂನಿಜಿಯರ್(-ದಕ್ಷಿಣ)-2-2, ಉಪವಿಭಾಗ ಕಚೇರಿ, ಮುತ್ತುರಾಯ ಸ್ವಾಮಿ ದೇವಸ್ಥಾನದ ಸಮೀಪ, ಬೇಗೂರು ಕೆರೆ ರಸ್ತೆ, ಬೇಗೂರು, ಬೆಂಗಳೂರು-560068.

ಅ.2ರಂದು ಮಾಂಸ ಮಾರಾಟ ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಾಂಧಿ ಜಯಂತಿ ಪ್ರಯುಕ್ತ ಬಿಬಿಎಂಪಿ ವ್ಯಾಪ್ತಿಯ ಕಸಾಯಿಖಾನೆಯಲ್ಲಿ ಪ್ರಾಣಿವಧೆ ಹಾಗೂ ಮಳಿಗೆಗಳಲ್ಲಿ ಮಾಂಸ ಮಾರಾಟವನ್ನು ಅಕ್ಟೋಬರ್ 2ರ ಬುಧವಾರದಂದು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದು ಪಶುಪಾಲನೆ ವಿಭಾಗದ ಜಂಟಿ ನಿರ್ದೇಶಕರು ತಿಳಿಸಿದ್ದಾರೆ.

ಮಯೂರ, ಸುಧಾ ಓದಿರಿ

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು
ಮುಂಬೈನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಬಾಲಿವುಡ್ ನಟಿ ಆಲಿಯಾ ಭಟ್ ಅವರು ಕಾಣಿಸಿಕೊಂಡಿದ್ದು ಹೀಗೆ...



ನಾಯ್ಡುಗೆ ಸುಪ್ರೀಂ ಕೋರ್ಟ್ ತರಾಟೆ 11
ಹಿಗ್ಗಿದ ವಿತ್ತೀಯ ಕೊರತೆ ಅಂತರ 10
ದರ್ಶನ್ ಜಾಮೀನು ಅರ್ಜಿ ವಿಚಾರಣೆ ಮುಂದೂಡಿಕೆ 8
ರಭಸದ ಮಳೆ: ವಿವಿಧೆಡೆ ಐವರ ಸಾವು 9

ಹೆಸರು ಬದಲಿಸಿಕೊಂಡು ಆರು ವರ್ಷಗಳಿಂದ ವಾಸವಿದ್ದ ಕುಟುಂಬ • ಪ್ಯಾನ್, ಆಧಾರ್ ವಶ

ಜಿಗಣಿ: ಪಾಕ್‌ನ ನಾಲ್ವರು ಸೆರೆ

ಪ್ರಜಾವಾಣಿ ವಾರ್ತೆ

ಆನೇಕಲ್: ಹೆಸರು ಬದಲಿಸಿಕೊಂಡು ಆರು ವರ್ಷಗಳಿಂದ ಜಿಗಣಿ ಬಳಿಯ ರಾಜಾಪುರದಲ್ಲಿ ನೆಲಸಿದ್ದ ಪಾಕಿಸ್ತಾನದ ಒಂದೇ ಕುಟುಂಬದ ನಾಲ್ವರನ್ನು ಜಿಗಣಿ ಪೊಲೀಸರು ಭಾನುವಾರ ರಾತ್ರಿ ಬಂಧಿಸಿದ್ದಾರೆ.

ಪಾಕಿಸ್ತಾನದ ಕರಾಚಿಯ ರಶೀದ್ ಅಲಿ ಸಿದ್ದಿಕಿ ಅಲಿಯಾಸ್ ಶಂಕರ್ ಶರ್ಮಾ (48), ಅಯೇಷಾ ಅಲಿಯಾಸ್ ಆಶಾ(38), ಹನೀಫ್ ಮೊಹಮ್ಮದ್ ಅಲಿಯಾಸ್ ರಾಮ್ ಬಾಬು ಶರ್ಮಾ(73), ರುಬಿನಾ ಅಲಿಯಾಸ್ ರಾಣಿ (61) ಬಂಧಿತರು.

ಈ ನಾಲ್ವರಿಗೆ ಸಹಕಾರ ನೀಡಿದ ಆರೋಪದ ಮೇಲೆ ಮುಂಬಯಿ ನಿವಾಸಿ ಫರ್ವೇಜ್ ಎಂಬವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದು, ಬಂಧನಕ್ಕೆ ಜಿಗಣಿ ಪೊಲೀಸರು ಬಲೆ ಬೀಸಿದ್ದಾರೆ.

ಕರಾಚಿ ಬಳಿಯ ಲಿಯಾ ಕತಾಬ್ ಗ್ರಾಮದ ರಷೀದ್ ಅಲಿಗೆ ಲಾಹೋರ್‌ನ ಆಯೇಷಾ 2011ರಲ್ಲಿ ಆನ್‌ಲೈನ್‌ನಲ್ಲಿ ಪರಿಚಯವಾಗಿದ್ದರು. ನಂತರ ಅವರು ಮದುವೆಯಾಗಿದ್ದರು.

ಮುಸ್ಲಿಂ ಧರ್ಮಗುರುಗಳ ದೌರ್ಜನ್ಯದಿಂದ ಬೇಸತ್ತು ಪಾಕಿಸ್ತಾನ ತೊರೆದು ಪತ್ನಿಯೊಂದಿಗೆ ಬಾಂಗ್ಲಾದೇಶಕ್ಕೆ ಹೋಗಿ ನೆಲೆಸಿದ್ದಾಗಿ ರಶೀದ್ ಪೊಲೀಸರಿಗೆ ತಿಳಿಸಿದ್ದಾನೆ.

ಮೆಹ್ದಿ ಫೌಂಡೇಷನ್‌ನಿಂದ ಹಣ ಪಡೆದು ದಂಪತಿ ಬಾಂಗ್ಲಾದೇಶದಲ್ಲಿ ಧರ್ಮ ಪ್ರಚಾರ ಮಾಡುತ್ತಿದ್ದರು. ಭಾರತದಲ್ಲಿಯೂ ಧರ್ಮಪ್ರಚಾರ ಮಾಡುವಂತೆ ಮೆಹ್ದಿ ಫೌಂಡೇಷನ್ ಸೂಚಿಸಿದ ನಂತರ ಪಶ್ಚಿಮ ಬಂಗಾಳದ ಮೂಲಕ ಭಾರತಕ್ಕೆ ನುಸುಳಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಭಾರತೀಯರ ಹೆಸರಿನಲ್ಲಿ ಆಧಾರ್, ಪಾಸ್‌ಪೋರ್ಟ್: ಆರೋಪಿಗಳು ಏಜೆಂಟ್‌ರಿಗೆ ಹಣ ನೀಡಿ ಆಧಾರ್ ಸೇರಿದಂತೆ ವಿವಿಧ ದಾಖಲೆ ಪಡೆದಿದ್ದರು. ಅವನ್ನು ಬಳಸಿ ದೆಹಲಿಯ ಫತ್ತೇಪುರದಲ್ಲಿ ಕೆಲ ಸಮಯ ವಾಸವಿದ್ದರು.

2018ರಲ್ಲಿ ಬೆಂಗಳೂರಿನ ವಾಸೀಂ ಮತ್ತು ಅಲ್ತಾಫ್ ಪರಿಚಯವಾಗಿದ್ದರು. ಅವರ ನೆರವು ಪಡೆದು ಅತ್ತೆ, ಮಾವನೊಂದಿಗೆ ಬೆಂಗಳೂರಿಗೆ ಬಂದ ರಶೀದ್ ದಂಪತಿ ಜಿಗಣಿ ಸಮೀಪದ ರಾಜಾಪುರದ ಅನಘ ಬಡಾವಣೆಯಲ್ಲಿ ಆರು ವರ್ಷದಿಂದ ವಾಸವಿದ್ದರು. ಬಂಧಿತರಿಂದ ಪೊಲೀಸರು ಆಧಾರ್, ಭಾರತದ ಪಾಸ್ ಪೋರ್ಟ್, ಪ್ಯಾನ್ ಕಾರ್ಡ್, ಡ್ರೈವಿಂಗ್ ಲೈಸೆನ್ಸ್ ವಶಪಡಿಸಿಕೊಂಡಿದ್ದಾರೆ.

ರಶೀದ್ ಅಲಿ ಸಿದ್ದಿಕಿಯು ಶಂಕರ್ ಶರ್ಮಾ, ಆತನ ಪತ್ನಿ ಆಯೇಷಾ, ಆಶಾ ಶರ್ಮಾ, ಅತ್ತೆ ರುಬಿನಾ, ರಾಣಿ ಶರ್ಮಾ ಮತ್ತು ಮಾವ ಮೊಹಮ್ಮದ್ ಯೂನಸ್, ರಾಮಬಾಬು ಶರ್ಮಾ ಹೆಸರಿನಲ್ಲಿ ಆಧಾರ್ ಹಾಗೂ ಇತರ ದಾಖಲೆ ಹೊಂದಿದ್ದರು.



ಆನೇಕಲ್ ತಾಲ್ಲೂಕಿನ ಜಿಗಣಿಯಲ್ಲಿ ಪಾಕಿಸ್ತಾನ ಪ್ರಜೆಗಳನ್ನು ಜಿಗಣಿ ಪೊಲೀಸರು ಬಂಧಿಸಿ ಕರೆದೊಯ್ದರು

‘10 ವರ್ಷದ ಹಿಂದೆಯೇ ಬಂದಿದ್ದರು’

ಬೆಂಗಳೂರು: ‘ಆನೇಕಲ್ ತಾಲ್ಲೂಕಿನ ಜಿಗಣಿಯಲ್ಲಿ ಬಂಧಿಸಿರುವ ಪಾಕಿಸ್ತಾನದ ನಾಲ್ವರು, ಹತ್ತು ವರ್ಷದ ಹಿಂದೆಯೇ ಭಾರತಕ್ಕೆ ಬಂದಿದ್ದರು ಎಂಬ ಮಾಹಿತಿ ಪೊಲೀಸರ ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ’ ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

‘ಜಿಗಣಿ ಪೊಲೀಸರು ಬಂಧಿತರನ್ನು ವಿಚಾರಣೆ ನಡೆಸುತ್ತಿದ್ದಾರೆ. ಯಾವ ಉದ್ದೇಶದಿಂದ ಬೆಂಗಳೂರಿನ ಗ್ರಾಮಾಂತರ ಭಾಗಕ್ಕೆ ಬಂದಿದ್ದರು ಎಂಬುದು ತನಿಖೆಯಿಂದ ಗೊತ್ತಾಗಲಿದೆ. ಬಂಧಿತರು ಪಾಸ್‌ಪೋರ್ಟ್ ಮಾಡಿಸಿಕೊಳ್ಳುವ ಮಟ್ಟಕ್ಕೆ ಹೋಗಿದ್ದರು. ಹೆಸರು ಸಹ ಬದಲಾವಣೆ ಮಾಡಿಕೊಂಡಿದ್ದರು. ತನಿಖೆಯಲ್ಲಿ ಏನೆಲ್ಲ ಮಾಹಿತಿಗಳು ಹೊರಬರುತ್ತವೆ ಎಂಬುದನ್ನು ನೋಡಿ, ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಪ್ರತಿಕ್ರಿಯಿಸಿದರು.

‘ರಾಜ್ಯಕ್ಕೂ ಬಹಳಷ್ಟು ಮಂದಿ ಬಾಂಗ್ಲಾದೇಶದಿಂದ ಅಕ್ರಮವಾಗಿ ಬಂದು ನೆಲಸಿದ್ದಾರೆ. ಅಕ್ರಮ ವಲಸಿಗರ ವಿರುದ್ಧ ಪ್ರತಿನಿತ್ಯ ಕಾರ್ಯಾಚರಣೆ ನಡೆಸಲಾಗುತ್ತಿದೆ. ಕೇಂದ್ರ ಸರ್ಕಾರದ ಗಮನಕ್ಕೂ ತರಲಾಗುತ್ತಿದೆ. ಆಗಾಗ್ಗೆ ಬಾಂಗ್ಲಾದೇಶದ ರಾಯಭಾರಿ ಕಚೇರಿಗೂ ಮಾಹಿತಿ ನೀಡುತ್ತಿದ್ದೇವೆ’ ಎಂದೂ ಹೇಳಿದರು.

ಸುಳಿವು ಸಿಕ್ಕಿದ್ದು ಹೇಗೆ?

ಬಂಧಿತರ ಸಂಬಂಧಿಕರು ಈಚೆಗೆ ಚೆನ್ನೈನಲ್ಲಿ ಪೊಲೀಸರಿಗೆ ಸೆರೆ ಸಿಕ್ಕಿದ್ದರು. ಅವರು ನೀಡಿದ ಮಾಹಿತಿ ಆಧರಿಸಿ ಗುಪ್ತಚರ ಇಲಾಖೆಯು ಜಿಗಣಿ ಪೊಲೀಸರಿಗೆ ಮಾಹಿತಿ ನೀಡಿತ್ತು.

ಈ ಮಾಹಿತಿ ಆಧರಿಸಿ ಭಾನುವಾರ ರಾತ್ರಿ ಅನಘ ಬಡಾವಣೆ ಮನೆ ಮೇಲೆ ದಾಳಿ ನಡೆಸಿದ ಜಿಗಣಿ ಪೊಲೀಸ್ ಸರ್ಕಲ್ ಇನ್‌ಸ್ಪೆಕ್ಟರ್ ಮಂಜುನಾಥ್ ನೇತೃತ್ವದ ತಂಡ ಆರೋಪಿಗಳನ್ನು ವಶಕ್ಕೆ ಪಡೆಯಿತು.

ಆರೋಪಿಗಳು ಎಲ್ಲಿಂದ ಮತ್ತು ಹೇಗೆ ದಾಖಲೆಗಳನ್ನು ಪಡೆದರು ಎಂಬ ಬಗ್ಗೆ ವಿಚಾರಣೆ ನಡೆಸಲಾಗುತ್ತಿದೆ. ಈ ಕುಟುಂಬ ಬೆಂಗಳೂರಿನಲ್ಲಿ ಯಾವ ಉದ್ದೇಶದಿಂದ ನೆಲಸಿತ್ತು. ಇಲ್ಲಿ ಏನು ಮಾಡುತ್ತಿತ್ತು ಎಂಬುದು ತನಿಖೆಯಿಂದ ಗೊತ್ತಾಗಬೇಕಿದೆ. ಮನೆಯನ್ನು ಸಂಪೂರ್ಣ ಜಾಲಾಡಿದಾಗ, ದಾಖಲೆಗಳಲ್ಲಿ ಹಿಂದೂ ಹೆಸರಿದ್ದರೂ ಮನೆಯ ಒಳಗೆ ಮುಸ್ಲಿಂ ಧರ್ಮಕ್ಕೆ ಸಂಬಂಧಿಸಿದ ಭಾವಚಿತ್ರ, ಪುಸ್ತಕ ಮತ್ತು ಬರಹ ಇದ್ದವು ಎಂದು ಕೇಂದ್ರ ವಲಯ ಐಜಿಪಿ ಲಾಭೂರಾಮ್ ಮಾಹಿತಿ ನೀಡಿದರು. ಆರೋಪಿಗಳ ವಿರುದ್ಧ ವಂಚನೆ, ನಕಲಿ ದಾಖಲೆ ಸೃಷ್ಟಿ, ಅಕ್ರಮ ಒಳ ನುಸುಳುವಿಕೆ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಜಿಗಣಿ ಕೈಗಾರಿಕ ಪ್ರದೇಶ ವ್ಯಾಪ್ತಿಯಲ್ಲಿ ಸೆ.26ರಂದು ಅಸ್ಸಾಂ ಶಂಕಿತ ಉಗ್ರನೊಬ್ಬನನ್ನು ಬಂಧಿಸಲಾಗಿತ್ತು.

ಬಿಬಿಎಂಪಿ ಇ–ಖಾತಾ ವ್ಯವಸ್ಥೆ: ಪರೀಕ್ಷಾರ್ಥ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫೇಸ್‌ಲೆಸ್, ಸಂಪರ್ಕ ರಹಿತ ಹಾಗೂ ಆನ್‌ಲೈನ್ ಮೂಲಕ ಬಿಬಿಎಂಪಿ ಇ-ಖಾತಾ ವಿತರಣಾ ವ್ಯವಸ್ಥೆಯನ್ನು ಪರೀಕ್ಷಾ-ರ್ಥವಾಗಿ ಅಕ್ಟೋಬರ್ 1ರಿಂದ ಆರಂಭಿಸಲಾಗುತ್ತಿದೆ.

ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ನಿರ್ದೇಶನದಲ್ಲಿ ಇ-ಖಾತಾ ವ್ಯವಸ್ಥೆಯನ್ನು ಪ್ರಾರಂಭಿ ಸಲಾಗುತ್ತಿದೆ. ಬಿಬಿಎಂಪಿಯಲ್ಲಿ ಲಭ್ಯವಿರುವ ದಾಖಲೆಗಳ ಆಧಾರ ದಲ್ಲಿ ಕರಡು ಇ-ಖಾತಾವನ್ನು ಆನ್‌ಲೈನ್ www.bbmpeaasthi.karnataka.gov.inನಲ್ಲಿ ರಚಿಸಿ, ಇರಿಸಲಾಗಿದೆ.ನಾಗರಿಕರು ತಮ್ಮ ಸ್ವತ್ತಿನ ಕರಡು ಇ-ಖಾತಾವನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದಾರೆ

ಅಂತಿಮ ಇ-ಖಾತಾವನ್ನು ಪಡೆಯಲು ಆಧಾರ್ ಇ-ಕೆವೈಸಿ, ಸ್ವತ್ತಿನ ಜಿಪಿಎಸ್ ದತ್ತಾಂಶ, ಛಾಯಾಚಿತ್ರ, ಸ್ವತ್ತಿನ ನೋಂದಾಯಿತ ದಸ್ತಾವೇಜು, 2004ರ ಏಪ್ರಿಲ್ 1ರಿಂದ ಈವರೆಗಿನ ಋಣಭಾರ ಪ್ರಮಾಣಪತ್ರ (ಇ.ಸಿ), ಬೆಸ್ಕಾಂ ಮೀಟರ್ ಸಂಖ್ಯೆ, ಎ-ಖಾತಾ ಎಂದು ದೃಢೀಕರಿಸುವ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕು.

ನೇಪಾಳ: ಸಾವಿನ ಸಂಖ್ಯೆ 200ಕ್ಕೆ ಏರಿಕೆ

ಕಠ್ಮಂಡು (ಪಿಟಿಐ): ನೇಪಾಳದಾದ್ಯಂತ ಸಂಭವಿಸಿದ ಪ್ರವಾಹ ಮತ್ತು ಭೂಕುಸಿತದಲ್ಲಿ ಸಿಲುಕಿ ಮೃತಪಟ್ಟವರ ಸಂಖ್ಯೆ ಸುಮಾರು 200ಕ್ಕೆ ಏರಿಕೆಯಾಗಿದೆ. ಕನಿಷ್ಠ 30 ಮಂದಿ ಇನ್ನೂ ನಾಪತ್ತೆಯಾಗಿದ್ದಾರೆ.

10



ಬಾಪು ಹಬ್ಬ... ಗಾಂಧಿ ಜಯಂತಿ ಅಂಗವಾಗಿ ಕಾರ್ಮಿಕರೊಬ್ಬರು ಗಾಂಧಿ ಭವನದ ಆವರಣದಲ್ಲಿರುವ ಗಾಂಧೀಜಿ ಅವರ ಪ್ರತಿಮೆಯನ್ನು ಸೋಮವಾರ ಸ್ವಚ್ಛಗೊಳಿಸಿದರು ಪ್ರಜಾವಾಣಿ ಚಿತ್ರ: ರಂಜು ಪಿ.

ಬೇರೆ ಅರ್ಥ ಕಲ್ಪಿಸುವ ಅಗತ್ಯ ಇಲ್ಲ: ಜಿ. ಪರಮೇಶ್ವರ

‘ಎತ್ತಿನಹೊಳೆ: ಡಿಸಿಎಂ ಜೊತೆ ಚರ್ಚೆ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಎತ್ತಿನಹೊಳೆ ಯೋಜನೆ ಅನುಷ್ಠಾನ ನಿಧಾನಗತಿಯಲ್ಲಿ ಸಾಗುತ್ತಿದ್ದು, ಈ ವಿಚಾರವಾಗಿ ಚರ್ಚಿಸಲು ಜಲಸಂಪನ್ಮೂಲ ಖಾತೆಯನ್ನೂ ಹೊಂದಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನನ್ನ ಮನೆಗೆ ಬಂದಿದ್ದರು. ಇದಕ್ಕೆ ಬೇರೆ ಅರ್ಥ ಕಲ್ಪಿಸುವ ಅಗತ್ಯ ಇಲ್ಲ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸದಾಶಿವನಗರದ ತಮ್ಮ ನಿವಾಸದಲ್ಲಿ ಡಿ.ಕೆ. ಶಿವಕುಮಾರ್ ಜೊತೆ ಕೆಲಹೊತ್ತು ಚರ್ಚಿಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಪರಮೇಶ್ವರ, ‘ಎತ್ತಿನ ಹೊಳೆ ಯೋಜನೆಯ ಹಣ ಬಿಡುಗಡೆ ಆಗಬೇಕಿದೆ. ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ನೀರು ಸಂಗ್ರಹಕ್ಕೆ ಐದು ಸಾವಿರ ಎಕರೆ ಭೂಮಿ ಪ್ರಸ್ತಾಪಿಸಲಾಗಿತ್ತು. ಅದರಲ್ಲಿ 2,500 ಎಕರೆ ಭೂಮಿ ನನ್ನ ಕ್ಷೇತ್ರ (ಕೊರಟಗೆರೆ) ವ್ಯಾಪ್ತಿಗೆ ಬರುತ್ತದೆ. ಈ ಬಗ್ಗೆ ಚರ್ಚೆ ನಡೆಸಿದ್ದೇವೆ’ ಎಂದರು.

‘ಗುಬ್ಬಿಯಿಂದ ಕುಣಿಗಲ್‌ವರೆಗೆ ಎಕ್ಸ್‌ಪ್ರೆಸ್ ಕಾಲುವೆ ಮಾಡಲು ಅನುಮತಿ ಸಿಕ್ಕಿದೆ. ಕೆಲಸ ಆರಂಭಿಸುವಾಗ ಸ್ಥಳೀಯರು ಅಡ್ಡಿಪಡಿಸಿದ್ದಾರೆ. ಈ ಬಗ್ಗೆ ಯೂ ಚರ್ಚಿಸಿದ್ದೇವೆ. ಡಿ.ಕೆ. ಶಿವಕುಮಾರ್ ಅವರು ತಾಂತ್ರಿಕ ಸಮಿತಿ ರಚಿಸಿದ್ದು, ಈ ಸಮಿತಿ ವರದಿ ಕೊಟ್ಟ ಬಳಿಕ ಈ ಕೆಲಸ ಮುಂದುವರಿಯಲಿದೆ’ ಎಂದರು.

‘2025ಕ್ಕೆ ತುಮಕೂರಿಗೆ ಎತ್ತಿನಹೊಳೆ ನೀರು’



ಶಿವಕುಮಾರ್

‘ತುಮಕೂರಿಗೆ 2025ರ ವೇಳೆಗೆ ಎತ್ತಿನಹೊಳೆ ನೀರು ಹರಿಸಲು ಪ್ರಯತ್ನಿಸಲಾಗುವುದು. ಯೋಜನೆಗೆ ತುಮಕೂರು ಮತ್ತು ಹಾಸನ ಜಿಲ್ಲೆಯಲ್ಲಿ ಅರಣ್ಯ ಭೂಮಿ ಗುರುತಿಸಲಾಗಿದ್ದು, ಅದನ್ನು ನೀರಾವರಿ ಇಲಾಖೆಗೆ ಹಸ್ತಾಂತರಿಸಬೇಕಿದೆ. ಈ ವಿಚಾರವಾಗಿ ಪ್ರತ್ಯೇಕ ಸಭೆ ನಡೆಸುವುದಾಗಿ ಮುಖ್ಯಮಂತ್ರಿ ತಿಳಿಸಿದ್ದಾರೆ. ಅರಣ್ಯ ಸಚಿವರ ಜೊತೆಗೂ ಸಮಾಲೋಚನೆ ನಡೆಸಲಾಗುವುದು’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಕೊರಟಗೆರೆ ಬಳಿ ಬೈರಗೊಂಡ್ಲು ಜಲಾಶಯದ ನಿರ್ಮಾಣ ಯೋಜನೆಯನ್ನು ಬಿಜೆಪಿ ಅವಧಿಯಲ್ಲಿ ಬದಲಿಸಲಾಗಿತ್ತು. ಈ ಕಾರಣಕ್ಕೆ ಸ್ಥಳ ವೀಕ್ಷಣೆ ಮಾಡಬೇಕಿದೆ. ಇಲ್ಲಿ ದೊಡ್ಡಬಳ್ಳಾಪುರದ ಸ್ವಲ್ಪ ಭಾಗವೂ ಸೇರಿಕೊಳ್ಳುತ್ತದೆ. ಇಲ್ಲಿ ಪರಿಹಾರ ವಿಚಾರದಲ್ಲಿ ವ್ಯಾಜ್ಯಗಳಿವೆ. ರೈತರು ಒಂದೇ ರೀತಿಯ ಪರಿಹಾರ ಕೊಡುವಂತೆ ಆಗ್ರಹಿಸಿದ್ದಾರೆ. ದಸರಾ ನಂತರ ಎತ್ತಿನಹೊಳೆಯಿಂದ ಬೈರಗೊಂಡ್ಲುವರೆಗೂ ಸ್ಥಳ ವೀಕ್ಷಣೆ ನಡೆಸಲಾಗುವುದು’ ಎಂದರು.

18 ತಾಸು ದುರಸ್ತಿ: ಕೆರೆಯಿಂದ ಚೆನ್ನೈಗೆ ಹಾರಿದ ಹೆಲಿಕಾಪ್ಟರ್

ಬಂಗಾರಪೇಟೆ: ತಾಂತ್ರಿಕ ದೋಷದಿಂದ ಭಾನುವಾರ ಸಂಜೆ ತಾಲ್ಲೂಕಿನ ಡಿ.ಕೆ ಹಳ್ಳಿಯ ಖಾಲಿ ಕೆರೆಯಲ್ಲಿ ಇಳಿದಿದ್ದ ಭಾರತೀಯ ವಾಯುಪಡೆಯ ಹೆಲಿಕಾಪ್ಟರ್ 18 ತಾಸು ದುರಸ್ತಿ ನಂತರ ಸೋಮವಾರ ಸಂಜೆ ಚೆನ್ನೈನ ತಾಂಬರಂ ವಾಯುನೆಲೆಯತ್ತ ಹಾರಿತು.

ಭಾನುವಾರ ಸಂಜೆಯೇ ಬೆಂಗಳೂರಿನಿಂದ ಮತ್ತೊಂದು ಹೆಲಿ ಕಾಪ್ಟರ್‌ನಲ್ಲಿ ಬಂದಿದ್ದ ವಾಯುಪಡೆಯ ತಾಂತ್ರಿಕ ತಂಡವೊಂದು ಹೆಲಿಕಾಪ್ಟರ್ ದುರಸ್ತಿ ಕಾರ್ಯ ಕೈಗೊಂಡಿತ್ತು.

ಭಾರತೀಯ ವಾಯುಪಡೆಯ ಮಹಿಳಾ ಪೈಲಟ್‌ಗಳು ಸೇರಿದಂತೆ ಆರು ಜನ ಸಿಬ್ಬಂದಿ ಮತ್ತು 10ಕ್ಕೂ ಹೆಚ್ಚು ಮಂದಿ ಯೋಧರು ಭಾನುವಾರ ರಾತ್ರಿ ಸ್ಥಳದಲ್ಲೇ ಬೀಡು ಬಿಟ್ಟಿದ್ದರು. ಹೆಲಿಕಾಪ್ಟರ್ ಇಳಿದ ಸ್ಥಳದಲ್ಲಿ ಬಂಗಾರಪೇಟೆ ಪೊಲೀಸರು ಭದ್ರತೆ ಒದಗಿಸಿದ್ದರು. ಸೋಮವಾರ ಬೆಳಗ್ಗೆ ತಾಂತ್ರಿಕ ದೋಷ ಸರಿಪಡಿಸಿದ ನಂತರ ಹೆಲಿಕಾಪ್ಟರ್‌ತಾಂಬರಂನತ್ತ ಹೊರಟಿತು.

ಸಂಸ್ಕೃತಿ ಪರಿಚಯಿಸುವ 'ಕಲಾ ಉತ್ಸವ'

ಪ್ರಜಾವಾಣಿ ವಾರ್ತೆ



ಕೇಂದ್ರೀಯ ವಿದ್ಯಾಲಯದಲ್ಲಿ ಏರ್ಪಡಿಸಿದ್ದ ಕಲಾ ಉತ್ಸವದಲ್ಲಿ ವಿದ್ಯಾರ್ಥಿಗಳು ಉತ್ತರಾಖಂಡ ರಾಜ್ಯದ ನೃತ್ಯ ಪ್ರದರ್ಶಿಸಿದರು

ಕೆ.ಆರ್.ಪುರ: 'ಶಾಲೆಯ ಮಕ್ಕಳಿಗೆ ನಮ್ಮ ದೇಶದ ಸಂಸ್ಕೃತಿಯನ್ನು ಪರಿಚಯಿಸುವ ಉದ್ದೇಶದಿಂದ 'ಏಕ್ ಭಾರತ್ ಶ್ರೇಷ್ಠ ಭಾರತ್- ಕಲಾ ಉತ್ಸವ' ಹಮ್ಮಿಕೊಳ್ಳಲಾಗಿದೆ' ಎಂದು ಡಿಆರ್‌ಡಿಒ ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲ ಎಚ್.ನಾರಾಯಣರಾವ್ ಹೇಳಿದರು.

ಕೆ.ಆರ್.ಪುರ ಸಮೀಪದ ನಾಗವಾರ ಪಾಳ್ಯದ ಡಿಆರ್‌ಡಿಒ ಕೇಂದ್ರೀಯ ವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ 'ಕೆವಿಎಸ್ ರಾಷ್ಟ್ರೀಯ ಏಕ್ತಾ ಪರ್ವ-2024-25, ಏಕ್ ಭಾರತ ಶ್ರೇಷ್ಠ ಭಾರತ್ ಕಲಾ ಉತ್ಸವ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

'ವಿವಿಧ ರಾಜ್ಯಗಳ ಭಾಷೆ, ಸಂಸ್ಕೃತಿ, ಕ್ರೀಡೆ, ಜನಪದ ಎಲ್ಲವೂ ಭಿನ್ನವಾಗಿ ರುತ್ತದೆ. ಇಂಥ ಸಂಸ್ಕೃತಿಯನ್ನು ನಗರ ದಲ್ಲಿರುವ ಕೇಂದ್ರೀಯ ವಿದ್ಯಾಲಯದ ಒಂಬತ್ತು ಶಾಖೆಗಳ ಮಕ್ಕಳಿಗೆ ಪರಿಚಯಿ ಸುವುದಕ್ಕಾಗಿ ಉತ್ತರಕಾಂಡ ರಾಜ್ಯದ ಸಂಸ್ಕೃತಿ ಬಿಂಬಿಸುವ ಹಲವು ಕಲಾ ಪ್ರದರ್ಶನಗಳನ್ನು ಉತ್ಸವದಲ್ಲಿ ಹಮ್ಮಿಕೊಳ್ಳಲಾಗಿದೆ' ಎಂದು ಹೇಳಿದರು.

ಕಲಾ ಉತ್ಸವದಲ್ಲಿ, ಕೆ.ಆರ್.ಪುರ ಕೇಂದ್ರೀಯ ವಿದ್ಯಾಲಯ, ಎನ್‌ಎಲ್‌ನ ಕೇಂದ್ರೀಯ ವಿದ್ಯಾಲಯ, ಯಲಹಂಕದ ಎಎಸ್‌ಸಿ ಕೇಂದ್ರದ ಕೇಂದ್ರೀಯ ವಿದ್ಯಾಲಯ, ಗೌರಿಬಿದನೂರು ಸೇರಿ ಒಂಬತ್ತು ಶಾಖೆಗಳಿಂದ 400 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲಾ ಉತ್ಸವದಲ್ಲಿ ಪಾಲ್ಗೊಂಡಿದ್ದರು.

ವಿದ್ಯಾರ್ಥಿಗಳಿಗಾಗಿ ರಾಷ್ಟ್ರೀಯ ಗುಂಪು ನೃತ್ಯ, ಏಕಾಭಿನಯ, ಗೀತಾ ಗಾಯನ, ವಾದ್ಯ ಸಂಗೀತ ಏರ್ಪಡಿ ಸಲಾಗಿತ್ತು.

ಕಾರ್ಯಕ್ರಮದಲ್ಲಿ ಡಿಆರ್‌ಡಿಒ ವಿಜ್ಞಾನಿ ಹಾಗೂ ಕೇಂದ್ರೀಯ ವಿದ್ಯಾಲಯಗಳ ಸಮಿತಿ ನಾಮನಿರ್ದೇಶಿತ ಅಧ್ಯಕ್ಷೆ ವರ್ಷಾ ಅಗರವಾಲ್, ಕಾರ್ಯಕ್ರಮ ಸಂಯೋಜಕ ಶ್ರೀಹರಿ ಭಾಗವಹಿಸಿದ್ದರು.

'ಮುನಿರತ್ನರನ್ನು ಅನರ್ಹಗೊಳಿಸಿ'

ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಸಮಿತಿಯಲ್ಲಿ ಮುಖಂಡರ ಆಗ್ರಹ

ಪ್ರಜಾವಾಣಿ ವಾರ್ತೆ


ಜಿಲ್ಲಾ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಪಾಲಿಕೆ ಮಾಜಿ ಸದಸ್ಯ ವೇಲು ನಾಯ್ಕರ್ ಮಾತನಾಡಿದರು. ಹನುಮಂತರಾಯಪ್ಪ, ಬಿ.ಆರ್. ಶಿವಮಾದಯ್ಯ, ರೋಹಿಣಿ ಸುರೇಶ್, ಪುಟ್ಟಣ್ಣ, ಲಗ್ಗೆರೆ ನಾರಾಯಣಸ್ವಾಮಿ ಮತ್ತಿತರರು ಭಾಗವಹಿಸಿದ್ದರು

ರಾಜರಾಜೇಶ್ವರಿನಗರ: ಒಕ್ಕಲಿಗ ಸಮುದಾಯದ ಮಹಿಳೆಯರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿ, ದಲಿತ ಸಮುದಾಯ ದವರನ್ನು ಹೀಯಾಳಿಸಿರುವ ಬಿಜೆಪಿ ಶಾಸಕ ಮುನಿರತ್ನ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಬೇಕು ಎಂದು ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ವಿವಿಧ ವಿಭಾಗಗಳು, ಪಾಲಿಕೆ ಮಾಜಿ ಸದಸ್ಯರು, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷರು, ಮಾಜಿ ಸದಸ್ಯರು ಹಕ್ಕೊತ್ತಾಯ ಮಂಡಿಸಿದರು.

ನಾಗರಬಾವಿಯಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದ ವಿವಿಧ ವಿಭಾಗಗಳ ಮುಖಂಡರು, 'ಬಿಜೆಪಿ, ಜೆಡಿಎಸ್‌ನ ನಾಯಕರು ಮುನಿರತ್ನ ವಿರುದ್ಧ ಧ್ವನಿ ಎತ್ತುವ ಮೂಲಕ, ಅವರನ್ನು ಪಕ್ಷದಿಂದ ಉಚ್ಚಾಟಿಸಿ ಸಮುದಾಯಗಳಿಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕು' ಎಂದು ಆಗ್ರಹಿಸಿದರು.

ವಿಧಾನಪರಿಷತ್ ಸದಸ್ಯ ಪುಟ್ಟಣ್ಣ, 'ಬಿಜೆಪಿಗೆ ಮಹಿಳೆಯರು, ದಲಿತರ ಮೇಲೆ ಸ್ವಲ್ಪವಾದರೂ ಗೌರವವಿದ್ದರೆ ಕೂಡಲೇ ಮುನಿರತ್ನ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಿ, ಶಾಸಕ ಸ್ಥಾನದಿಂದ ಅನರ್ಹಗೊಳಿಸಬೇಕು' ಎಂದು ಸವಾಲು ಹಾಕಿದರು.

ಬಿಬಿಎಂಪಿ ಮಾಜಿ ಸದಸ್ಯ ವೇಲು ನಾಯ್ಕರ್, 'ಹತ್ತು ವರ್ಷ ಮುನಿರತ್ನ ಜೊತೆಗಿದ್ದೆ. ಆತನ ದುಷ್ಕೃತ್ಯಗಳನ್ನು ನೋಡಿ, ಆತನ ವಿರುದ್ಧ ಹೋರಾಟ ಮಾಡಲು ತೀರ್ಮಾನಿಸಿ, ನೊಂದವರಿಗೆ ನ್ಯಾಯ ಕೊಡಿಸಲು ಮುಂದಾಗಿದ್ದೇನೆ' ಎಂದರು.

ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತರಾಯಪ್ಪ, 'ಸ್ವಾಭಿಮಾನಿ ಒಕ್ಕಲಿಗರು, ದಲಿತರು ಒಗ್ಗೂಡಿ ಮಂಗಳವಾರ (ಅ. 1)ದಂದು ಮುನಿರತ್ನ ವಿರುದ್ಧ ನಡೆಸಲಿರುವ ಪ್ರತಿಭಟನೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು' ಎಂದು ಮನವಿ ಮಾಡಿದರು.

ಪಾಲಿಕೆಯ ವಿರೋಧ ಪಕ್ಷದ ಮಾಜಿ ನಾಯಕ ಬಿ.ಆರ್. ನಂಜುಂಡಪ್ಪ, ಆಶಾ ಸುರೇಶ್, ಮಂಜುಳಾ ನಾರಾಯಣಸ್ವಾಮಿ, ಬಿ.ಆರ್. ಶಿವಮಾದಯ್ಯ, ರೋಹಿಣಿ ಸುರೇಶ್, ಒಕ್ಕಲಿಗರ ಸಂಘದ ಮಾಜಿ ಅಧ್ಯಕ್ಷ ಡಿ. ಹನುಮಂತಯ್ಯ, ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್, ಬ್ಲಾಕ್ ಅಧ್ಯಕ್ಷ ರಾಂಪುರ ನಾಗೇಶ್ ಉಪಸ್ಥಿತರಿದ್ದರು.







ಓಲಾ ಕ್ಯಾಬ್‌ನಲ್ಲಿ ಲೈಂಗಿಕ ಕಿರುಕುಳ • ಕಂಪನಿಯ ಆಂತರಿಕ ದೂರು ಸಮಿತಿ ವಿಚಾರಣೆಗೆ ಸೂಚನೆ

ಸಂತ್ರಸ್ತೆಗೆ ₹5 ಲಕ್ಷ ನೀಡಲು ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಓಲಾ ಕ್ಯಾಬ್‌ನಲ್ಲಿ ಪ್ರಯಾಣಿಸುವ ವೇಳೆ ಚಾಲಕನಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಯುವತಿಗೆ ಪರಿಹಾರ ರೂಪದಲ್ಲಿ ₹5 ಲಕ್ಷ ನೀಡುವಂತೆ ಓಲಾ ಕ್ಯಾಬ್ ಮಾತೃ ಸಂಸ್ಥೆ ಎಎನ್‌ಐ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್‌ಗೆ ಹೈಕೋರ್ಟ್ ನಿರ್ದೇಶಿಸಿದೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ನೀಡಿರುವ ದೂರಿನ ಕುರಿತು ತನಿಖೆ ನಡೆಸಲು ಕಂಪನಿಯ ಆಂತರಿಕ ದೂರು ಸಮಿತಿಗೆ ನಿರ್ದೇಶಿಸಬೇಕು' ಎಂದು ಕೋರಿ ಸಂತ್ರಸ್ತ ಯುವತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ಜಿ. ಎಸ್.ಕಮಲ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪ್ರಕಟಿಸಿದೆ.

'ಸಂತ್ರಸ್ತೆಗೆ ವ್ಯಾಜ್ಯ ವೆಚ್ಚವಾಗಿ ಹೆಚ್ಚುವರಿ ₹5 ಲಕ್ಷ ಮೊತ್ತವನ್ನು ಕಂಪನಿ ಪಾವತಿಸಬೇಕು. ಸಂತ್ರಸ್ತೆ ನೀಡಿದ ದೂರಿನ ಕುರಿತು ಕಂಪನಿಯ ಆಂತರಿಕ ದೂರುಗಳ ಸಮಿತಿ ವಿಚಾರಣೆ ನಡೆಸಬೇಕು. ಆ ವಿಚಾರಣಾ ಪ್ರಕ್ರಿಯೆಯನ್ನು 90 ದಿನಗಳಲ್ಲಿ ಪೂರ್ಣಗೊಳಿಸಬೇಕು. ಬೆಂಗಳೂರು ನಗರ ಜಿಲ್ಲಾಧಿಕಾರಿ ಸಮಿತಿಯ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು' ಎಂದು ನ್ಯಾಯಪೀಠ ಸೂಚಿಸಿದೆ.

ಪ್ರಕರಣವೇನು?: 'ನಾನು 2019ರಲ್ಲಿ ಓಲಾ ಕ್ಯಾಬ್‌ನಲ್ಲಿ ಪ್ರಯಾಣಿಸುವಾಗ ಚಾಲಕನಿಂದ ಲೈಂಗಿಕ ಕಿರುಕುಳಕ್ಕೆ ಒಳಗಾಗಿದ್ದೇನೆ. ಚಾಲಕನ ವಿರುದ್ಧ ಕ್ರಮ ಜರುಗಿಸಿ' ಎಂದು ಕೋರಿ ಸಂತ್ರಸ್ತೆಯು ಎಎನ್‌ಐ ಟೆಕ್ನಾಲಜೀಸ್‌ಗೆ ದೂರು ನೀಡಿದ್ದರು. 'ಆಂತರಿಕ ದೂರುಗಳ ಸಮಿತಿಯು ನಿಮ್ಮ ದೂರನ್ನು ಪರಿಗಣಿಸಿ ಅದರ ಬಗ್ಗೆ ವಿಚಾರಣೆ ನಡೆಸುವ ಅಧಿಕಾರ ಹೊಂದಿಲ್ಲ' ಎಂದು ಕಂಪನಿ ಸಂತ್ರಸ್ತೆಗೆ ತಿಳಿಸಿತ್ತು. ಇದನ್ನು ಪ್ರಶ್ನಿಸಿ ಸಂತ್ರಸ್ತೆ ಹೈಕೋರ್ಟ್ ಮೆಟ್ಟಿಲೇರಿದ್ದರು.

ಹರ್ಷ ಕೊಲೆ: ಎನ್‌ಐಎ ತನಿಖೆ ಪ್ರಶ್ನಿಸಿದ್ದ ಅರ್ಜಿ ವಜಾ

ಹೈಕೋರ್ಟ್ ಸುದ್ದಿ

ಬೆಂಗಳೂರು: ಶಿವಮೊಗ್ಗದ ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗದಳದ ಕಾರ್ಯಕರ್ತ ಹರ್ಷ ಕೊಲೆ ಪ್ರಕರಣದ ತನಿಖೆಯನ್ನು, ರಾಷ್ಟ್ರೀಯ ತನಿಖಾ ದಳಕ್ಕೆ (ಎನ್‌ಐಎ) ವಹಿ ಸಿದ್ದನ್ನು ಪ್ರಶ್ನಿಸಲಾದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಪ್ರಕರಣದ ಆರೋಪಿಯಾಗಿ ಸದ್ಯ ನ್ಯಾಯಾಂಗ ಬಂಧನದಲ್ಲಿರುವ ಶಿವಮೊಗ್ಗದ ಹೊಸಬೀದಿ ನಿವಾಸಿ ಎ.ರೋಷನ್ (27) ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಶ್ರೀನಿವಾಸ ಹರೀಶ್ ಕುಮಾರ್ ಮತ್ತು ನ್ಯಾಯಮೂರ್ತಿ ಜೆ.ಎಂ.ಖಾಜಿ ಅವರಿದ್ದ ವಿಭಾಗೀಯ ನ್ಯಾಯಪೀಠ ಇದೇ 20ರಂದು ಪ್ರಕಟಿಸಿದೆ.

ಪ್ರತಿವಾದಿ ಕೇಂದ್ರ ಗೃಹ ಸಚಿವಾಲಯದ ಪರ ಸುಪ್ರೀಂ ಕೋರ್ಟ್‌ನ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್. ವಿ.ರಾಜು ಮಂಡಿಸಿದ್ದ, 'ಕೊಲೆಯಾದ ಹರ್ಷ, ಗೋ ಸಂರಕ್ಷಣೆ ಹಾಗೂ ಭಜರಂಗದಳದ ಚಟುವಟಿಕೆಗಳಲ್ಲಿ ಸಕ್ರಿಯನಾಗಿದ್ದ. ಇದೇ ಕಾರಣಕ್ಕೆ ಆತನನ್ನು ಸಂಚು ರೂಪಿಸಿ ಹತ್ಯೆ ಮಾಡಲಾಗಿದೆ. ನಾಗರಿಕ ಸಮಾಜವನ್ನು ಭಯದ ಕೂಪಕ್ಕೆ ದೂಡುವಂತಹ ವಾತಾವರಣ ನಿರ್ಮಿಸುವುದು ಆರೋಪಿಗಳ ಉದ್ದೇಶವಾಗಿತ್ತು. ಇದೊಂದು ಭಯೋತ್ಪಾದಕ ಕೃತ್ಯ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಹಾಗಾಗಿ, ಎನ್‌ಐಎ ತನಿಖೆ ನಡೆಸಲು ಇದು ಯೋಗ್ಯವಾದ ಪ್ರಕರಣ' ಎಂಬ ವಾದವನ್ನು ನ್ಯಾಯಪೀಠ ಎತ್ತಿ ಹಿಡಿದಿದೆ. ಎನ್‌ಐಎ ಪರ ಪಿ.ಪ್ರಸನ್ನ ಕುಮಾರ್ ವಾದ ಮಂಡಿಸಿದ್ದರು.


ಶಿವಮೊಗ್ಗದಲ್ಲಿ 2022ರ ಮಾರ್ಚ್ 20ರಂದು ರಾತ್ರಿ ಹರ್ಷ ಕೊಲೆ ನಡೆದಿತ್ತು. ಈ ಪ್ರಕರಣದ ತನಿಖೆಯನ್ನು ಕೇಂದ್ರ ಸರ್ಕಾರ 2022ರ ಮಾರ್ಚ್ 21ರಂದು ಎನ್‌ಐಎಗೆ ವಹಿಸಿ ಆದೇಶಿಸಿತ್ತು.

ಶಾಂತ್ ತಿಮ್ಮಯ್ಯ ಮುಂದುವರಿಕೆಗೆ ಅಸ್ತು

ತಮ್ಮ ಅಧಿಕಾರವಧಿ ಮೊಟಕುಗೊಳಿಸಿದ ರಾಜ್ಯ ಸರ್ಕಾರದ ಕ್ರಮವನ್ನು ಪ್ರಶ್ನಿಸಿ, 'ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ' ಅಧ್ಯಕ್ಷ ಶಾಂತ್ ಎ. ತಿಮ್ಮಯ್ಯ ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಿರುವ ಹೈಕೋರ್ಟ್, ತಿಮ್ಮಯ್ಯ ತಮ್ಮ ಅಧಿಕಾರವಧಿ ಪೂರೈಸಲು ಹಸಿರು ನಿಶಾನೆ ತೋರಿದೆ.

ಈ ಸಂಬಂಧ ಶಾಂತ್ ಎ.ತಿಮ್ಮಯ್ಯ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ಮುಖ್ಯ ನ್ಯಾಯಮೂರ್ತಿ ಎನ್. ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ಪ್ರಕಟಿಸಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಎಂ.ಶಿವಕುಮಾರ್ ವಾದ ಮಂಡಿಸಿದ್ದರು.

ಸವಿನೆನಪು



ಶ್ರೀ ಕೆ. ಎನ್. ಗುರುಸ್ವಾಮಿ

ಸಂಸ್ಥಾಪಕರು: ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

1901- 1990

ಜನನ: 01-10-1901

ಕೆ ಎನ್ ತಿಲಕ್ ಕುಮಾರ್



ವಾಕಥಾನ್ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯು ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿ ಸೋಮವಾರ ಆಯೋಜಿಸಿದ್ದ 'ಹಾರ್ಟ್ ಫಾರ್ ಆ್ಯಕ್ಷನ್ ವಾಕಥಾನ್'ನಲ್ಲಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ

ಬಿಬಿಎಂಪಿ 'ಡಿ' ಗ್ರೂಪ್ ನೌಕರರ ಅರ್ಜಿ: ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಡಿ ಗ್ರೂಪ್ ನೌಕರರ ಬಡ್ತಿಗೆ ಸಂಬಂಧಿಸಿದ ಜ್ಯೇಷ್ಠತಾ ಪಟ್ಟಿ ಸಿದ್ಧಪಡಿಸುವುದನ್ನು ವಿಳಂಬ ಮಾಡಲಾಗುತ್ತಿದೆ' ಎಂದು ಆಕ್ಷೇಪಿಸಿದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ನಗರಾಭಿವೃದ್ಧಿ ಇಲಾಖೆ ಹಾಗೂ ಬಿಬಿಎಂಪಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಪಿ.ಸುದರ್ಶನ್ ಸೇರಿದಂತೆ ಪಾಲಿಕೆಯ ವಿವಿಧ ವಲಯಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕರ ಮತ್ತು ಕಂದಾಯ ನಿರೀಕ್ಷಕರಾದ ಒಟ್ಟು 58 ನೌಕರರು ಸಲ್ಲಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಆರ್.ನಟರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಅಂತೆಯೇ, 'ಪಾಲಿಕೆಯು ಕಂದಾಯ ನಿರೀಕ್ಷಕರು, ಎಫ್‌ಡಿಎ ಹಾಗೂ ಸ್ಟೆನೋಗ್ರಾಫರ್ ಹುದ್ದೆಗಳಿಗೆ ಬಡ್ತಿ ನೀಡಿ ಕೈಗೊಳ್ಳುವ ನಿರ್ಧಾರವು, ಅರ್ಜಿಯ ಅಂತಿಮ ಆದೇಶಕ್ಕೆ ಒಳಪಡಲಿದೆ' ಎಂದು ಸ್ಪಷ್ಟಪಡಿಸಿತು.

ಪ್ರತಿವಾದಿಗಳಾದ ರಾಜ್ಯ ಸರ್ಕಾರ, ಬಿಬಿಎಂಪಿ ಮುಖ್ಯ ಆಯುಕ್ತ, ವಿಶೇಷ ಆಯುಕ್ತ (ಆಡಳಿತ) ಉಪ ಆಯುಕ್ತರಿಗೆ (ಆಡಳಿತ) ನೋಟಿಸ್ ಜಾರಿಗೊಳಿಸಲು ಆದೇಶಿಸಲಾಗಿದೆ.

ಕೋರಿಕೆ ಏನು?: 'ಅರ್ಹತೆ ಇಲ್ಲದವರು ಮತ್ತು ಸೇವೆ ಕಾಯಂ ಆಗದವರಿಗೆ ಬಡ್ತಿ ನೀಡಲಾಗುತ್ತಿದೆ. ಆದ್ದರಿಂದ, ಜ್ಯೇಷ್ಠತಾ ಪಟ್ಟಿ ಪ್ರಕಟಿಸುವ ನಿಟ್ಟಿನಲ್ಲಿ ಅರ್ಜಿದಾರರು ಸಲ್ಲಿಸಿರುವ ಮನವಿಗಳನ್ನು ಪರಿಗಣಿಸಬೇಕು ಮತ್ತು ಅರ್ಜಿದಾರರಿಗೆ ಬಡ್ತಿ ನೀಡಲು ಅನುಕೂಲವಾಗುವಂತೆ ಕಾಲಮಿತಿಯೊಳಗೆ ಜ್ಯೇಷ್ಠತಾ ಪಟ್ಟಿ ಪ್ರಕಟಿಸುವಂತೆ ಬಿಬಿಎಂಪಿಗೆ ನಿರ್ದೇಶಿಬೇಕು' ಎಂದು ಅರ್ಜಿದಾರರು ಕೋರಿದ್ದಾರೆ. 'ಅಂತಿಮ ಜ್ಯೇಷ್ಠತಾ ಪಟ್ಟಿ ಪ್ರಕಟ ಆಗುವ ತನಕ ಬಡ್ತಿ ನೀಡದಂತೆ ಪಾಲಿಕೆಗೆ ನಿರ್ದೇಶಿಸಿಬೇಕು' ಎಂದು ಮಧ್ಯಂತರ ಮನವಿ ಮಾಡಿದ್ದಾರೆ.

ತೀರ್ಪು ಧಿಕ್ಕರಿಸಿದರೆ ಕ್ರಮ

5,8, 9ನೇ ತರಗತಿ ಬೋರ್ಡ್ ಪರೀಕ್ಷೆಗೆ 'ಸುಪ್ರೀಂ' ಅತೃಪ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯದಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ 5, 8 ಮತ್ತು 9ನೇ ತರಗತಿಗಳಿಗೆ ಬೋರ್ಡ್ ಪರೀಕ್ಷೆ ನಡೆಸುವ ಪ್ರಸ್ತಾವದ ಕುರಿತು ಅಸಮಾಧಾನ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, ನ್ಯಾಯಾಲಯದ ತೀರ್ಪನ್ನು ಧಿಕ್ಕರಿಸಿ ಏನನ್ನೂ ಮಾಡದಂತೆ ಸೋಮವಾರ ಎಚ್ಚರಿಸಿದೆ.

ಸುಪ್ರೀಂ ಕೋರ್ಟ್ ಎಚ್ಚರಿಕೆ ಬಂದ ಕೆಲ ಗಂಟೆಗಳಲ್ಲಿಯೇ, ಶಾಲಾ ಶಿಕ್ಷಣ ಇಲಾಖೆಯ ಕಲಬುರಗಿ ಜಿಲ್ಲೆಯ ಉಪ ನಿರ್ದೇಶಕರು ತಾವು ಹಿಂದೆ ಹೊರಡಿಸಿದ್ದ ಕೆಲ ಜ್ಞಾಪನಾ ಪತ್ರಗಳನ್ನು ಹಿಂಪಡೆದಿದ್ದಾರೆ.

8, 9 ಮತ್ತು 10ನೇ ತರಗತಿಗಳ ವಿದ್ಯಾರ್ಥಿಗಳಿಗೆ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆಗೆ ಸಂಬಂಧಿಸಿದಂತೆ ಕಲಬುರಗಿ ಜಿಲ್ಲೆಯ ಉಪ ನಿರ್ದೇಶಕರು ಸೆಪ್ಟೆಂಬರ್ 4 ಮತ್ತು 15ರಂದು ಜ್ಞಾಪನಾ ಪತ್ರಗಳನ್ನು ಹೊರಡಿಸಿದ್ದರು.

'ನ್ಯಾಯಾಲಯದ ಆದೇಶವನ್ನು ಧಿಕ್ಕರಿಸುವ ಯಾವುದನ್ನೂ ಮಾಡಬಾರದು. ಹೀಗಾದರೆ ಕಠಿಣ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ' ಎಂದು ನ್ಯಾಯಮೂರ್ತಿಗಳಾದ ಬೇಲಾ ಎಂ ತ್ರಿವೇದಿ ಮತ್ತು ಸತೀಶ್ ಚಂದ್ರ ಶರ್ಮಾ ಅವರ ಪೀಠ ಎಚ್ಚರಿಕೆ ನೀಡಿತು.

'ಈ ರೀತಿಯ ಪರೀಕ್ಷೆಗಳನ್ನು ನಡೆಸುವ ಸರ್ಕಾರದ ಪ್ರಸ್ತಾವವು ನ್ಯಾಯಾಲಯದ ಆದೇಶದ ಉಲ್ಲಂಘನೆಯಾಗುತ್ತದೆ' ಎಂದು ವಕೀಲ ಕೆ.ವಿ. ಧನಂಜಯ ಅವರು ಪ್ರತಿಪಾದಿಸಿದರು.

5, 8 ಮತ್ತು 9ನೇ ತರಗತಿಗಳಿಗೆ ಬೋರ್ಡ್ ಪರೀಕ್ಷೆಗಳನ್ನು ನಡೆಸುವ ಕರ್ನಾಟಕ ಸರ್ಕಾರದ ನಿರ್ಧಾರಕ್ಕೆ ಈಗಾಗಲೇ ನ್ಯಾಯಾಲಯ ಮಧ್ಯಂತರ ತಡೆಯಾಜ್ಞೆ ನೀಡಿದೆ ಎಂದು ಅರ್ಜಿದಾರರ ಪರ ವಕೀಲರು ತಿಳಿಸಿದರು.

ಈ ಸಂಬಂಧ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಲು ಅನುದಾನರಹಿತ ಮಾನ್ಯತೆ ಪಡೆದ ಶಾಲೆಗಳು ಮತ್ತು ರೆಗ್ (ನಮ್ಮ ಶಾಲೆಗಳು) ಸಂಸ್ಥೆಗೆ ಪೀಠ ಅವಕಾಶ ಮಾಡಿಕೊಟ್ಟಿತು. ಈ ವಿಷಯವನ್ನು ಮುಂದಿನ ವಾರ ಪರಿಗಣನೆಗೆ ತೆಗೆದುಕೊಳ್ಳುವುದಾಗಿ ಪೀಠ ಹೇಳಿದೆ.

5, 8 ಮತ್ತು 9ನೇ ತರಗತಿಗಳಿಗೆ ರಾಜ್ಯಮಟ್ಟದ ಬೋರ್ಡ್ ಪರೀಕ್ಷೆ ನಡೆಸಲು ಅನುಮತಿಸಿ ಹೈಕೋರ್ಟ್‌ನ ವಿಭಾಗೀಯ ಪೀಠ ನೀಡಿದ್ದ ಮಧ್ಯಂತರ ಆದೇಶವನ್ನು ಸುಪ್ರೀಂ ಕೋರ್ಟ್ 2024ರ ಮಾರ್ಚ್‌ನಲ್ಲಿ ರದ್ದುಪಡಿಸಿತ್ತು.

ಪಂಚಾಯಿತಿ ಚುನಾವಣೆ ತಡ: ಅರ್ಜಿ ವಿಚಾರಣೆ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಜಿ.ಪಂ ಹಾಗೂ ತಾ.ಪಂ.ಗಳಿಗೆ ಮೀಸಲಾತಿ ಅಂತಿಮಗೊಳಿಸುವ ಪ್ರಕ್ರಿಯೆ ವಿಳಂಬ ಮಾಡಲಾಗುತ್ತಿದೆ' ಎಂದು ಆರೋಪಿಸಿ ರಾಜ್ಯ ಸರ್ಕಾರದ ವಿರುದ್ಧ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿಯನ್ನು ಹೈಕೋರ್ಟ್ ಪುನಃ ನಾಲ್ಕು ವಾರ ಮುಂದೂಡಿದೆ.

ಈ ಸಂಬಂಧದ ಎರಡು ಪ್ರತ್ಯೇಕ ನ್ಯಾಯಾಂಗ ನಿಂದನೆ ಅರ್ಜಿಗಳು ಮುಖ್ಯ ನ್ಯಾಯಮೂರ್ತಿ ಎನ್. ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠದ ಮುಂದೆ ಸೋಮವಾರ ವಿಚಾರಣೆಗೆ ನಿಗದಿಯಾಗಿದ್ದವು. ಆದರೆ, ಸಮಯಾಭಾವದ ಕಾರಣ ಅರ್ಜಿ ವಿಚಾರಣೆ ಹಂತಕ್ಕೆ ತಲುಪಲಿಲ್ಲ.

'ನ್ಯಾಯಾಲಯಕ್ಕೆ ನೀಡಿದ ಭರವಸೆಯಂತೆ ನಿಗದಿತ ಅವಧಿಯಲ್ಲಿ ಜಿ.ಪಂ, ತಾ.ಪಂ. ಕ್ಷೇತ್ರ ಪುನರ್ ವಿಂಗಡಣೆ ಹಾಗೂ ಮೀಸಲಾತಿ ಪ್ರಕಟಿಸಲು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನದ ಮೀಸಲಾತಿ ಪ್ರಕಟಿಸುವಂತೆ ಏಕಸದಸ್ಯ ನ್ಯಾಯಪೀಠ ನೀಡಿದ್ದ ಆದೇಶ ಪಾಲಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ' ಎಂದು ಆರೋಪಿಸಿ ಆಯೋಗವು 2023ರಲ್ಲಿ ಈ ಅರ್ಜಿ ಸಲ್ಲಿಸಿತ್ತು.

ದೌರ್ಜನ್ಯ: ಅಪರಾಧಿಗೆ 10 ವರ್ಷ ಜೈಲು

ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪ ಸಾಬೀತಾಗಿದ್ದು, ಅಪರಾಧಿಗೆ 4ನೇ ತ್ವರಿತ ನ್ಯಾಯಾಲಯವು 10 ವರ್ಷ ಕಾರಾಗೃಹ ಶಿಕ್ಷೆ ಹಾಗೂ ₹1 ಲಕ್ಷ ದಂಡ ವಿಧಿಸಿ, ಆದೇಶಿಸಿದೆ.

ಮಹಾರಾಷ್ಟ್ರದ ಅಹ್ಮದ್ ನಗರದ 20 ವರ್ಷದ ಯುವಕ ಶಿಕ್ಷೆ ಒಳಗಾದವನು.

2020ರ ಅಕ್ಟೋಬರ್ 18ರಂದು ಶೇಷಾದ್ರಿಪುರ ಪೊಲೀಸ್ ಠಾಣೆ ವ್ಯಾಪ್ತಿಯ ಬಾಲಕಿಯೊಬ್ಬಳು ಗ್ರಂಥಾಲಯಕ್ಕೆ ಹೋಗಿ ಬರುವುದಾಗಿ ಪೋಷಕರಿಗೆ ತಿಳಿಸಿ ಮನೆಯಿಂದ ಹೋಗಿದ್ದಳು. ನಂತರ, ಮನೆಗೆ ವಾಪಸ್ ಆಗಿರಲಿಲ್ಲ. ಶೇಷಾದ್ರಿಪುರ ಠಾಣೆಯಲ್ಲಿ ಪೋಷಕರು ನಾಪತ್ತೆ ಪ್ರಕರಣ ದಾಖಲಿಸಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದಾಗ ಆರೋಪಿಯು, ಬಾಲಕಿಯನ್ನು ಅಪಹರಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದು ದೃಢ ಪಟ್ಟಿತ್ತು. ಆರೋಪಿ ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗಿತ್ತು.

ಪ್ರಕರಣದ ತನಿಖಾಧಿಕಾರಿಗಳಾದ ಎಂ.ಎಲ್.ಕೃಷ್ಣಮೂರ್ತಿ ಅವರು ತನಿಖೆ ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶ ಕೆ.ಎಂ. ಓಂಕಾರಮೂರ್ತಿ ಅವರು ಅಪರಾಧಿಗೆ ಶಿಕ್ಷೆ ವಿಧಿಸಿ ಆದೇಶಿಸಿದ್ದಾರೆ. ಸರ್ಕಾರಿ ವಕೀಲ ರವಿಚಂದ್ರ ಅವರು ಪ್ರಾಸಿಕ್ಯೂಷನ್ ಪರ ವಾದಿಸಿದ್ದರು.

ಮುಂಬಡ್ತಿ: ನಿಯಮ ಪರಿಷ್ಕರಣೆಗೆ ಸೂಚನೆ

ಬೆಂಗಳೂರು: ಎಲ್ಲ ಇಲಾಖೆಗಳಲ್ಲಿ ಐದು ವರ್ಷ ಕರ್ತವ್ಯ ಸಲ್ಲಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳು ಲಭ್ಯ ಇಲ್ಲದೇ ಇದ್ದರೆ, ಕನಿಷ್ಠ 3 ವರ್ಷ ಕರ್ತವ್ಯ ಸಲ್ಲಿಸಿದ ಅರ್ಹರನ್ನು ಮುಂಬಡ್ತಿಗೆ ಪರಿಗಣಿಸಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ತಿದ್ದುಪಡಿ ಮಾಡಿಕೊಳ್ಳಬೇಕೆಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ನೀಡಿದ್ದ ನಿರ್ದೇಶನವನ್ನು ಉಲ್ಲೇಖಿಸಿ ಸಮಾಜ ಕಲ್ಯಾಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಮುಂಬಡ್ತಿಗೆ 5 ವರ್ಷಗಳ ಅರ್ಹತಾದಾಯಕ ಕರ್ತವ್ಯ ಸಲ್ಲಿಸಿದ ಎಸ್‌ಸಿ, ಎಸ್‌ಟಿ ಅಭ್ಯರ್ಥಿಗಳು ಲಭ್ಯ ಇಲ್ಲದಿದ್ದರೆ ಕನಿಷ್ಠ 3 ವರ್ಷ ಕರ್ತವ್ಯ ಸಲ್ಲಿಸಿದವರನ್ನು ಪರಿಗಣಿಸುವ ಕುರಿತಂತೆ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ತಿದ್ದುಪಡಿ ತರುವಂತೆ ಎಲ್ಲ ಇಲಾಖೆಗಳಿಗೆ ಡಿಪಿಎಆರ್ 1982ರ ನ. 2ರಂದೇ ಸೂಚಿಸಿತ್ತು. ಈ ಆದೇಶವಾಗಿ 42 ವರ್ಷ ಕಳೆದರೂ ಕೆಲವು ಇಲಾಖೆಗಳು ಇನ್ನೂ ಈ ನಿಯಮವನ್ನು ಅಳವಡಿಸಿಕೊಂಡಿಲ್ಲ.

ಈ ತಿದ್ದುಪಡಿ ಅಳವಡಿಸಿಕೊಳ್ಳದ ಕಾರಣ ಮುಂಬಡ್ತಿಯಿಂದ ವಂಚಿತರಾಗುತ್ತಿರುವ ಬಗ್ಗೆ ಕೆಲವು ಅಧಿಕಾರಿ, ಸಿಬ್ಬಂದಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಗೆ ದೂರು ನೀಡಿದ್ದರು. ಜೂನ್ 20ರಂದು ನಡೆದ ಸಮಿತಿಯ ಸಭೆಯಲ್ಲಿ, ಈ ನಿಯಮವನ್ನು ಇನ್ನೂ ಅಳವಡಿಸಿಕೊಳ್ಳದ ಇಲಾಖೆಗಳು ಕಡ್ಡಾಯವಾಗಿ ಅಳವಡಿಸಿಕೊಳ್ಳುವಂತೆ ನಿರ್ದೇಶಿಸಿತ್ತು.

ಚಂಡಮಾರುತ: 600ಕ್ಕೂ ಹೆಚ್ಚು ಸಾವು

ವಾಷಿಂಗ್ಟನ್ (ರಾಯಿಟರ್ಸ್): ಫ್ಲಾರಿಡಾದ ಗಲ್ಫ್ ಕೋಸ್ಟ್‌ಗೆ ಗುರುವಾರ ರಾತ್ರಿ ಅಪ್ಪಳಿಸಿ ನಂತರ ಉತ್ತರದ ಕಡೆ ಸಾಗಿದ ಹೆಲೆನ್ ಚಂಡಮಾರುತದಿಂದ 600ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದಾರೆ ಎಂದು ಅಮೆರಿಕ ಗೃಹ ಇಲಾಖೆಯ ಸಲಹೆಗಾರ ಲಿಜ್ ಶರ್ವುಡ್ ರಾಂಡಲ್ ಸೋಮವಾರ ತಿಳಿಸಿದ್ದಾರೆ.

ಕ್ಯಾರೊಲಿನಸ್, ಜಾರ್ಜಿಯಾ, ಟೆನ್ನೆಸ್ಸಿ ಮತ್ತು ವರ್ಜೀನಿಯಾದಲ್ಲಿ ಈಗಾಗಲೇ ಸಾವಿನ ಸಂಖ್ಯೆ ಹೆಚ್ಚಿದೆ ಎಂದು ಮೂಲಗಳು ತಿಳಿಸಿವೆ.



ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಸ್‌ಇ. ಸುಧೀಂದ್ರ ಅವರು ಕಠ್ಮಂಡುವಿನಲ್ಲಿ ನೇಪಾಳದ ಹಂಗಾಮಿ ಪ್ರಧಾನಿ ಪ್ರಕಾಶ್ ಮಾನ್ ಸಿಂಗ್ ಅವರನ್ನು ಭೇಟಿ ಮಾಡಿ, ಜೈವಿಕ ಇಂಧನಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಚರ್ಚೆ ನಡೆಸಿದರು

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ದೇವಾಂಗ ನೌಕರರ ಸಂಘವು ಪ್ರತಿಭಾ ಪುರಸ್ಕಾರಕ್ಕಾಗಿ ತಮ್ಮ ಸಮುದಾಯದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ದೇವಾಂಗ ಸಮಾಜದ ವಿದ್ಯಾರ್ಥಿಗಳು 2023–24ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ, ಐಸಿಎಸ್‌ಇ– ಸಿಬಿಎಸ್‌ಇ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ ಶೇ 95ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿದ್ದರೆ, ಅಕ್ಟೋಬರ್ 20ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಅಧ್ಯಕ್ಷರು, ಕರ್ನಾಟಕ ರಾಜ್ಯ ದೇವಾಂಗ ನೌಕರರ ಸಂಘ, ದೇವಾಂಗ ಹಾಸ್ಟೆಲ್ ಕಟ್ಟಡ, ದೇವಾಂಗ ಹಾಸ್ಟೆಲ್ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು– 560 027. ಮಾಹಿತಿಗೆ: 94488 15390.

ಎಲೆಕ್ಟ್ರಿಕ್ ವಾಹನಗಳ ಚಾರ್ಜಿಂಗ್ ಕೇಂದ್ರಗಳ ಸಂಖ್ಯೆಯಲ್ಲಿ ಮೊದಲ ಸ್ಥಾನದಲ್ಲಿರುವ ಬೆಂಗಳೂರು

ಉದ್ಯಾನ ನಗರಿಗೆ 'ಇ.ವಿ ಚಾರ್ಜಿಂಗ್' ಗರಿ



• ಗಾಣಧಾಳು ಶ್ರೀಕಂಠ

ಬೆಂಗಳೂರು: ಐಟಿ-ಬಿಟಿ ನಗರ, ನವೋದ್ಯಮಗಳ ರಾಜಧಾನಿ ಎಂದೆಲ್ಲ ಹಿರಿಮೆ-ಗರಿಮೆಗಳಿಂದ ಕರೆಸಿಕೊಳ್ಳುತ್ತಿರುವ ಉದ್ಯಾನ ನಗರಿ ಬೆಂಗಳೂರಿನ ಮುಕುಟಕ್ಕೆ 'ಇವಿ ಚಾರ್ಜಿಂಗ್ ಹಬ್" ಎಂಬ ಹೊಸ ಗರಿಯೊಂದು ಸೇರ್ಪಡೆಯಾಗಿದೆ. ಕೇಂದ್ರ ಇಂಧನ ಸಚಿವಾಲಯದ ಬ್ಯೂರೊ ಆಫ್ ಎನರ್ಜಿ ಎಫಿಷಿಯನ್ಸಿ ಸಂಸ್ಥೆ ಇತ್ತೀಚೆಗೆ ಬಿಡುಗಡೆ ಮಾಡಿದ ವರದಿ ಪ್ರಕಾರ ಎಲೆಕ್ಟ್ರಿಕ್ ವಾಹನಗಳ(ಇವಿ) ಚಾರ್ಜಿಂಗ್ ಕೇಂದ್ರಗಳನ್ನು ಹೊಂದಿರುವ ನಗರಗಳಲ್ಲಿ ಬೆಂಗಳೂರು ಅಗ್ರ ಸ್ಥಾನದಲ್ಲಿದೆ. ರಾಜ್ಯದಲ್ಲಿ ಒಟ್ಟು 5,765 ಇವಿ ಚಾರ್ಜಿಂಗ್ ಕೇಂದ್ರಗಳಿದ್ದು, ಬೆಂಗಳೂರು ನಗರ ಜಿಲ್ಲೆಯಲ್ಲೇ 4,462 ಕೇಂದ್ರಗಳಿವೆ.

'ಇವಿ' ಕ್ಷೇತ್ರದಲ್ಲಿ ಸದಾ ಒಂದು ಹೆಜ್ಜೆ ಮುಂದಿರುವ ಕರ್ನಾಟಕ, 2017ರಲ್ಲಿ 'ಇವಿ ನೀತಿ' ಪರಿಚಯಿಸಿತು. 2021ರಲ್ಲಿ ಈ ನೀತಿಯನ್ನು ಪರಿಷ್ಕರಿಸಿತು. ಆನಂತರದಲ್ಲಿ ರಾಜ್ಯದಲ್ಲಿ 'ಇವಿ' ಬಳಕೆ ಹೆಚ್ಚಾಯಿತು. ಪೆಟ್ರೋಲ್ ಚಾಲಿತ ವಾಹನಗಳಿಂದ 'ವಿದ್ಯುತ್ ಚಾಲಿತ ವಾಹನಗಳ ಬಳಕೆಯತ್ತ ಆಸಕ್ತಿ ತೋರುವವರು ಹೆಚ್ಚಾದರು. ಈಗೀಗಂತೂ ಸ್ವಿಗ್ಗಿ, ಝೊಮ್ಯಾಟೊ ಸೇರಿದಂತೆ ಆಹಾರ ಡೆಲಿವರಿ ಉದ್ಯೋಗಿಗಳು, ಕೊರಿಯರ್ ವಿತರಕರಂಥ ನಿತ್ಯ ದ್ವಿಚಕ್ರ ವಾಹನ ಬಳಸುವವರೆಲ್ಲ 'ಇವಿ'ಗಳನ್ನೇ ಹೆಚ್ಚಾಗಿ ಬಳಸುತ್ತಿದ್ದಾರೆ. ವಿದ್ಯುತ್ ಚಾಲಿತ ವಾಹನಗಳ ಬಳಕೆ ಹೆಚ್ಚಾದಂತೆ, ಚಾರ್ಜಿಂಗ್ ಕೇಂದ್ರಗಳ ಸಂಖ್ಯೆಯೂ ಹೆಚ್ಚಾಗಿದೆ. ಬೆಸ್ಕಾಂ, ನಗರದಲ್ಲಿರುವ ತನ್ನ ಕಚೇರಿಗಳು, ಬಿಬಿಎಂಪಿ, ಟಿಟಿಎಂಸಿ, ಬಿಡಿಎನಂತಹ ಸರ್ಕಾರಿ ಕಚೇರಿಗಳ ಆವರಣದಲ್ಲಿ ಚಾರ್ಜಿಂಗ್ ಕೇಂದ್ರಗಳನ್ನು ಆರಂಭಿಸಿದೆ. ಹಲವು ಖಾಸಗಿ ಕಂಪನಿಗಳು ತಮ್ಮ ಕಂಪನಿಯ ವಾಹನಗಳ ಚಾರ್ಜಿಂಗ್ ಮಾಡಿಕೊಳ್ಳಲು ನಗರದ ಪ್ರಮುಖ ಸ್ಥಳಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸಿದೆ. ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲೂ ಪ್ರತ್ಯೇಕ ಚಾರ್ಜಿಂಗ್ ಕೇಂದ್ರಗಳನ್ನು ಆರಂಭಿಸಲಾಗಿದೆ.



'ಐದಾರು ವರ್ಷಗಳ ಹಿಂದೆ ಎಲೆಕ್ಟ್ರಿಕ್ ಸ್ಕೂಟರ್ ಖರೀದಿಸಿದಾಗ, ಬೆಂಗಳೂರಿನಲ್ಲಿ ಚಾರ್ಜಿಂಗ್ ಕೇಂದ್ರಗಳು ಕಡಿಮೆ ಇದ್ದವು. ಈಗ ಎಲ್ಲೆಡೆ ಕೇಂದ್ರಗಳು ಲಭ್ಯವಿವೆ. ನಾನು ಮನೆಯಿಂದ ಚಾರ್ಜ್ ಮಾಡಿಕೊಂಡು ಹೊರಡುತ್ತೇನೆ. ಅಗತ್ಯವಿದ್ದರೆ ಚಾರ್ಜಿಂಗ್ ಕೇಂದ್ರಗಳಿಗೆ ಹೋಗಿ ಚಾರ್ಜ್ ಮಾಡಿಕೊಳ್ಳುತ್ತೇನೆ' ಎನ್ನುತ್ತಾರೆ ವಿಜಯನಗರದ ಖಾಸಗಿ ಕಂಪನಿ ಉದ್ಯೋಗಿ ರಘು.

ಇತ್ತೀಚೆಗೆ ಇವಿ ಆಟೊ ಹಾಗೂ ಲಗೇಜ್ ಆಟೊಗಳು ನಗರದಲ್ಲಿ ಗಣನೀಯವಾಗಿ ಹೆಚ್ಚಾಗುತ್ತಿವೆ. ಸರಕು ಸಾಗಣೆಯ ಪುಟ್ಟ ಪುಟ್ಟ ಇವಿಗಳ ಬಳಕೆ ನಗರದಲ್ಲಿ ಹೆಚ್ಚಾಗಿವೆ.

ಇವಿ ಚಾರ್ಜಿಂಗ್ ಕೇಂದ್ರಗಳ ಅರಂಭಕ್ಕೆ ಇಂಧನ ಇಲಾಖೆ ಉತ್ತೇಜನ ನೀಡುತ್ತಿದೆ. ಇತ್ತೀಚೆಗೆ ಖಾಸಗಿ ಕಂಪನಿಗಳ ಸಮೂಹವೊಂದು 'ಜೌಲ್' ಎಂಬ ಯೋಜನೆಯಡಿ ನಗರದ ದೊಡ್ಡಕಲ್ಲಸಂದ್ರದಲ್ಲಿ ಮೊದಲ ಇವಿ ಚಾರ್ಜಿಂಗ್ ಕೇಂದ್ರ ಸ್ಥಾಪಿಸಿತು. ಇದೇ ರೀತಿ, ಬೆಸ್ಕಾಂ ಕೂಡ, ಸಾರ್ವಜನಿಕರ ಬಳಕೆಗಾಗಿ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಸೌರಶಕ್ತಿ ಆಧಾರಿತ ಇವಿ ಚಾರ್ಜಿಂಗ್ ಹಬ್‌ವೊಂದನ್ನು ನಿರ್ಮಿಸುತ್ತಿದೆ. 400 ಕಿ.ವಾಟ್ ಸಾಮರ್ಥ್ಯದ ಈ ಕೇಂದ್ರದಲ್ಲಿ ಏಕಕಾಲಕ್ಕೆ 23 ವಾಹನಗಳನ್ನು ಚಾರ್ಜ್ ಮಾಡಬಹುದು. ಇದರಲ್ಲಿ 30 ನಿಮಿಷದ ಒಳಗೆ ಚಾರ್ಜ್ ಮಾಡಬಲ್ಲ 20 ಫಾಸ್ಟ್ ಚಾರ್ಜಿಂಗ್ ಪಾಯಿಂಟ್‌ಗಳಿರುತ್ತವೆ. 50 ಕಿ.ವಾ ಮತ್ತು 30 ಕಿ.ವಾ ಸಾಮರ್ಥ್ಯದ ವೇಗದ ಚಾರ್ಜಿಂಗ್ ಪಾಯಿಂಟ್‌ಗಳಿರುತ್ತವೆ. ಖಾಸಗಿ ಕಂಪನಿ ಸಹಯೋಗದಲ್ಲಿ ಈ ಇವಿ ಹಬ್ ನಿರ್ಮಾಣವಾಗುತ್ತಿದೆ.

ಬಳಸಿದ ಬ್ಯಾಟರಿಗಳನ್ನು ಚಾರ್ಜ್ ಮಾಡಿ ಮರುಬಳಕೆ ಮಾಡಲಾಗುತ್ತದೆ. ಇದು ಈ ಕೇಂದ್ರದ ವಿಶೇಷ. ಈ ಪ್ರಯತ್ನ ದೇಶದಲ್ಲೇ ಮೊದಲು ಎನ್ನುತ್ತಾರೆ ಬೆಸ್ಕಾಂ ಅಧಿಕಾರಿಗಳು. ಮಾತ್ರವಲ್ಲ, 24 ಗಂಟೆಗಳು ಇವಿ ಚಾರ್ಜಿಂಗ್ ಸೌಲಭ್ಯ ನೀಡುವ ದೇಶದ ಮೊದಲ ಚಾರ್ಜಿಂಗ್ ಸ್ಟೇಷನ್ ಕೂಡ ಇದಾಗಿದೆ. ಮುಂದಿನ ತಿಂಗಳಲ್ಲಿ ಇದು ಕಾರ್ಯಾರಂಭ ಮಾಡುವ ಸಾಧ್ಯತೆ ಇದೆ.



ಬೆಂಗಳೂರಿನ ಬೆಸ್ಕಾಂನ ಕೇಂದ್ರ ಕಚೇರಿಯ ಕಟ್ಟಡದ ಆವರಣದಲ್ಲಿರುವ ಎಲೆಕ್ಟ್ರಾನಿಕ್ ಚಾರ್ಜಿಂಗ್ ಕೇಂದ್ರ
ಪ್ರಜಾವಾಣಿ ಚಿತ್ರ:ರಂಜು ಪಿ.

ಬೆಸ್ಕಾಂ ವ್ಯಾಪ್ತಿಯ ಚಾರ್ಜಿಂಗ್ ಕೇಂದ್ರಗಳು

5,337 ಒಟ್ಟು ಬೆಸ್ಕಾಂ ವ್ಯಾಪ್ತಿಯ ಚಾರ್ಜಿಂಗ್ ಸ್ಟೇಷನ್	**6,676** ಒಟ್ಟು ಚಾರ್ಜಿಂಗ್ ಘಟಕಗಳು	**195** ಬೆಸ್ಕಾಂ ಇವಿ ಚಾರ್ಜಿಂಗ್ ಕೇಂದ್ರಗಳು
16 ಇತರೆ ಸರ್ಕಾರಿ ಇಲಾಖೆಗಳಲ್ಲಿನ ಕೇಂದ್ರಗಳು	**5,126** ಖಾಸಗಿ ಕಂಪನಿಗಳ ಚಾರ್ಜಿಂಗ್ ಕೇಂದ್ರಗಳು	

ಬೆಸ್ಕಾಂ ದರ (ಪ್ರತಿ ಯೂನಿಟ್‌ಗೆ)

₹7.72	ವೇಗದ ಚಾರ್ಜಿಂಗ್
₹7.05	ಸಾಮಾನ್ಯ ಚಾರ್ಜಿಂಗ್ (DC)
₹6.91	ಸಾಮಾನ್ಯ ಚಾರ್ಜಿಂಗ್ (AC)

(ಸೆ.30, 2024 ರ ಅನ್ವಯ)



ಒಂದು ವರ್ಷದಿಂದ ಇವಿ ಕಾರು ಬಳಸುತ್ತಿದ್ದೇನೆ. ಬೆಂಗಳೂರಿನಾದ್ಯಂತ ಸಾಕಷ್ಟು ಚಾರ್ಜಿಂಗ್ ಕೇಂದ್ರಗಳಿವೆ. ನನಗೆ ಒಂದೂ ದಿನವೂ ಚಾರ್ಜಿಂಗ್‌ಗೆ ತೊಂದರೆಯಾಗಿಲ್ಲ. ಚಾರ್ಜಿಂಗ್ ವ್ಯವಸ್ಥೆ ತುಂಬಾ ಚೆನ್ನಾಗಿದೆ. ಸುಮಾರು 1 ಗಂಟೆಯೊಳಗೆ ಪೂರ್ಣ ಚಾರ್ಜ್ ಆಗುತ್ತದೆ. 400 ಕಿ.ಮೀ ಧಾರಾಳವಾಗಿ ಓಡಾಡುತ್ತೇನೆ. ಹೊರಗಡೆ ಹೋಗುವಾಗ ಎಲ್ಲೆಲ್ಲಿ ಚಾರ್ಜಿಂಗ್ ಮಾಡಬಹುದು ಎಂಬುದನ್ನು ತಿಳಿದುಕೊಂಡು ಹೋಗುತ್ತೇನೆ

ಪ್ರದೀಪ್ ಸಾಗರ
ಸಾಫ್ಟ್‌ವೇರ್ ಉದ್ಯೋಗಿ



ಇವಿ ಚಾರ್ಜಿಂಗ್‌ನಲ್ಲಿನ ಹೊಸ ಆವಿಷ್ಕಾರಗಳನ್ನು ಬಳಸಿಕೊಂಡು, ಹೈವೇಗಳಲ್ಲಿ ಚಾರ್ಜಿಂಗ್ ಕೇಂದ್ರಗಳನ್ನು ಆರಂಭಿಸುವ ಪ್ರಯತ್ನಗಳು ನಡೆಯುತ್ತಿವೆ. ಚಾರ್ಜಿಂಗ್ ಕೇಂದ್ರಗಳ ಜಾಲ ವಿಸ್ತರಿಸಿ, ಇನ್ನಷ್ಟು ಉತ್ತಮಗೊಳಿಸುತ್ತೇವೆ

ಮಹಾಂತೇಶ್ ಬೀಳಗಿ, ವ್ಯವಸ್ಥಾಪಕ ನಿರ್ದೇಶಕ, ಬೆಸ್ಕಾಂ

'ಇ.ವಿ ಮಿತ್ರ' ಆ್ಯಪ್



ಇ.ವಿ ಬಳಕೆದಾರರಿಗೆ ಸುಗಮ ಚಾರ್ಜಿಂಗ್ ಸೌಲಭ್ಯಕ್ಕಾಗಿ, ಬೆಸ್ಕಾಂ 'ಇ.ವಿ. ಮಿತ್ರ' ಎಂಬ ಮೊಬೈಲ್ ಅಪ್ಲಿಕೇಷನ್ ಪರಿಚಯಿಸಿದೆ.

ಆಂಡ್ರಾಯ್ಡ್ ಮತ್ತು ಐಒಎಸ್ ಎರಡೂ ಮೊಬೈಲ್ ಅಪ್ಲಿಕೇಶನ್‌ಗಳಲ್ಲಿ ಲಭ್ಯವಿರುವ ಈ ಆ್ಯಪ್, ಸಮೀಪದ ಚಾರ್ಜಿಂಗ್ ಕೇಂದ್ರದ ಮಾಹಿತಿ ನೀಡುತ್ತದೆ. ಚಾರ್ಜಿಂಗ್ ಪ್ರಕ್ರಿಯೆ, ಬುಕ್ಕಿಂಗ್ ವಿವರ, ಚಾರ್ಜಿಂಗ್ ಸ್ಟೇಷನ್‌ಗಳಲ್ಲಿರುವ ಸೌಕರ್ಯಗಳು ಮತ್ತು ಚಾರ್ಜಿಂಗ್ ಕಾಯ್ದಿರಿಸುವ ಸೌಲಭ್ಯ ಹೊಂದಿದೆ.

ಕನ್ನಡ, ಹಿಂದಿ, ಇಂಗ್ಲಿಷ್ ಸೇರಿ 11 ಭಾಷೆಗಳಲ್ಲಿ ಇ.ವಿ ಚಾರ್ಜಿಂಗ್ ಮಾಹಿತಿ ಲಭ್ಯವಿದೆ. ಆ್ಯಪ್‌ನಿಂದ ಯುಪಿಐ ಮೂಲಕ ಪಾವತಿ ಮಾಡಬಹುದು. https://onelink.to/evmithra ಮೂಲಕ ಆ್ಯಪ್ ಡೌನ್‌ಲೋಡ್ ಮಾಡಿ, ಇನ್‌ಸ್ಟಾಲ್ ಮಾಡಿಕೊಂಡು ಬಳಸಬಹುದು.

ಬೆಸ್ಕಾಂ: ಭವಿಷ್ಯದ ಯೋಜನೆಗಳು

ಬೆಸ್ಕಾಂ, ಇವಿ ಚಾರ್ಜಿಂಗ್‌ನಂತಹ ಮೂಲಸೌಕರ್ಯ ಕಲ್ಪಿಸುವ ನೋಡಲ್ ಏಜೆನ್ಸಿಯಾಗಿದ್ದು, ಭವಿಷ್ಯದಲ್ಲಿ ಹೊಸ ಯೋಜನೆಗಳ ಅನುಷ್ಠಾನಕ್ಕೆ ಸಿದ್ಧತೆ ನಡೆಸಿದೆ.

- ನಗರದಾದ್ಯಂತ ಇಂದಿರಾ ಕ್ಯಾಂಟೀನ್, ಬಿಬಿಎಂಪಿ, ಬಿಡಿಎ, ಆಟೊ ನಿಲ್ದಾಣಗಳು, ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ 'ಇವಿ ಚಾರ್ಜಿಂಗ್ ಕೇಂದ್ರ'ಗಳನ್ನು ಸ್ಥಾಪಿಸಲು ವಿಸ್ತೃತ ಯೋಜನಾ ವರದಿ(ಡಿಪಿಆರ್) ಸಿದ್ಧವಾಗಿದೆ.
- ಬೆಂಗಳೂರು ನಗರದ ಸುತ್ತಮುತ್ತ ಪಿಪಿಪಿ ಮಾದರಿಯಲ್ಲಿ ಬೆಸ್ಕಾಂ ಮಾಲೀಕತ್ವದ 20 ಸ್ಥಳಗಳಲ್ಲಿ ಬ್ಯಾಟರಿ ಸ್ವಾಪಿಂಗ್ ಸ್ಟೇಷನ್ (2W ಮತ್ತು 3W) ಸ್ಥಾಪನೆಗಾಗಿ ಟೆಂಡರ್ ಆಹ್ವಾನ. ಸ್ವಾಪಿಂಗ್ ಎಂದರೆ, ಬಳಸಿದ ಬ್ಯಾಟರಿಯನ್ನು ಕೇಂದ್ರದಲ್ಲಿ ಇಟ್ಟು, ಕೇಂದ್ರದಲ್ಲಿ ಚಾರ್ಜಿಂಗ್ ಆದ ಬ್ಯಾಟರಿಯನ್ನು ತೆಗೆದುಕೊಂಡು ವಾಹನಕ್ಕೆ ಜೋಡಿಸಿಕೊಳ್ಳುವುದು. ಇದು ದ್ವಿಚಕ್ರ ವಾಹನಗಳಿಗೆ ಮಾತ್ರ. ಇದರಿಂದ ಇವಿ ಬಳಸುವ ಸ್ವಿಗ್ಗಿ, ಝೊಮ್ಯಾಟೊ, ಕೊರಿಯರ್, ಪಾರ್ಸಲ್ ವಿತರಕರಿಗೆ ಅನುಕೂಲವಾಗುತ್ತದೆ.
- ರಾಜ್ಯದಾದ್ಯಂತ 11 ಆರ್‌ಟಿಒ ಕಚೇರಿಗಳ ಆವರಣದಲ್ಲಿ ಇವಿ ಚಾರ್ಜಿಂಗ್ ಸ್ಟೇಷನ್ ಸ್ಥಾಪಿಸಲು ಸಿದ್ದತೆ ನಡೆದಿದೆ. ಇನ್ನೆರಡು ತಿಂಗಳಲ್ಲಿ ಈ ಯೋಜನೆ ಕಾರ್ಯಾರಂಭವಾಗಲಿದೆ.
- ರಾಷ್ಟ್ರೀಯ ಹೆದ್ದಾರಿ 48ರಲ್ಲಿರುವ ಪ್ರತಿ ಟೋಲ್ ಗೇಟ್‌ನ ಎರಡೂ ಕಡೆ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಸಮೀಕ್ಷೆ ನಡೆಸಿ, ಎನ್‌ಎಚ್‌ಎಐಗೆ ವರದಿ ಸಲ್ಲಿಸಲಾಗಿದೆ. ಅನುಮೋದನೆ ನಿರೀಕ್ಷೆಯಲ್ಲಿದೆ.
- ಕೆಆರ್‌ಡಿಸಿಎಲ್ ಮನವಿ ಮೇರೆಗೆ, ರಾಜ್ಯದ ಎಲ್ಲ ರಾಜ್ಯ ಹೆದ್ದಾರಿಗಳಲ್ಲಿ ಇವಿ ಚಾರ್ಜಿಂಗ್ ಕೇಂದ್ರಗಳನ್ನು ಅಳವಡಿಸಲು, ಜಂಟಿಯಾಗಿ ಅಧ್ಯಯನ ಮಾಡಲಾಗಿದೆ. 32 ಟೋಲ್ ಗೇಟ್‌ಗಳ ಬಳಿ ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆಗೆ ಸೂಕ್ತವಾಗಿದ್ದು, ಈ ಕುರಿತು ಪ್ರಸ್ತಾವ ಸಲ್ಲಿಸಲಾಗಿದೆ.
- ಸಾರ್ವಜನಿಕ – ಖಾಸಗಿ– ಸಹಭಾಗಿತ್ವದಲ್ಲಿ (ಪಿಪಿಪಿ) ರಾಜ್ಯದಾದ್ಯಂತ 1,910 ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಿ, 2,620 ಚಾರ್ಜರ್ ಅಳವಡಿಸುವ ಯೋಜನೆಯ ಅನುಮೋದನೆಗಾಗಿ ಜುಲೈನಲ್ಲಿ ಇಂಧನ ಇಲಾಖೆಗೆ ಪ್ರಸ್ತಾವ ಸಲ್ಲಿಕೆ.



ಇ.ವಿ ಚಾರ್ಜಿಂಗ್ ಕೇಂದ್ರ



ಮದ್ಯದ ಅಮಲಿನಲ್ಲಿದ್ದ ಆರೋಪಿ • ಮೊಬೈಲ್ ಲೊಕೇಷನ್ ಆಧರಿಸಿ ಬಂಧನ

ಕಾಲು ತುಳಿದ ವಿಚಾರಕ್ಕೆ ವ್ಯಕ್ತಿಯ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯ ಎದುರು ವ್ಯಕ್ತಿಯ ಕಾಲು ತುಳಿದ ವಿಚಾರಕ್ಕೆ ನಡೆದ ಗಲಾಟೆ ವೇಳೆ ವ್ಯಕ್ತಿಯೊಬ್ಬರಿಗೆ ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಆರೋಪಿಯನ್ನು ಜ್ಞಾನಭಾರತಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸೊಣ್ಣೇನಹಳ್ಳಿಯ ಮೂರ್ತಿ(52) ಕೊಲೆಯಾದವರು. ಕೊಲೆಯ ಆರೋಪದಡಿ ಕೀರ್ತಿ(27) ಎಂಬುವವರನ್ನು ಬಂಧಿಸಲಾಗಿದೆ.

'ಮೂರ್ತಿ ಹಾಗೂ ಕೀರ್ತಿ ಅವರು ಅಕ್ಕಪಕ್ಕದ ಮನೆಯ ನಿವಾಸಿಗಳು. ಮೂರ್ತಿ ಅವರು ಹಸು ಸಾಕಾಣಿಕೆ ಮಾಡುತ್ತಿದ್ದರು. ಕೊಲೆ ಆರೋಪಿ ಹಣಕಾಸು ವ್ಯವಹಾರ ನಡೆಸುತ್ತಿದ್ದರು. ಭಾನುವಾರ ತಡರಾತ್ರಿ ನಡೆದ ಗಲಾಟೆಯಲ್ಲಿ ಆರೋಪಿ ಕೃತ್ಯ ಎಸಗಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಮೂರ್ತಿ ಅವರ ಸಹೋದರನ ಮನೆಯಲ್ಲಿ ಭಾನುವಾರ ಪಿತೃಪಕ್ಷದ ಪೂಜೆ ಆಯೋಜಿಸಲಾಗಿತ್ತು. ಸಂಬಂಧಿಕರೂ ಮನೆಗೆ ಬಂದಿದ್ದರು. ರಾತ್ರಿ ಮನೆಯಲ್ಲಿ ಮದ್ಯದ ಪಾರ್ಟಿ ಸಹ ಆಯೋಜಿಸಲಾಗಿತ್ತು. ಮದ್ಯ ಸೇವನೆ ಮಾಡಿದ್ದ ಮೂರ್ತಿ ಅವರು ಮನೆಯಿಂದ ಹೊರಬಂದಾಗ ಆರೋಪಿಯ ಕಾಲು ತುಳಿದಿದ್ದರು. ಈ ವಿಚಾರಕ್ಕೆ ಇಬ್ಬರ ಮಧ್ಯೆ ಪರಸ್ಪರ ವಾಗ್ವಾದ ನಡೆದಿದೆ. ಆಗ, ಮೂರ್ತಿ ಅವರ ಹೊಟ್ಟೆಗೆ ಚಾಕುವಿನಿಂದ ಇರಿಯಲಾಗಿದೆ. ತೀವ್ರ ರಕ್ತಸ್ರಾವದಿಂದ ಮೂರ್ತಿ ಅವರು ಮೃತಪಟ್ಟಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಕೃತ್ಯದ ಬಳಿಕ ಆರೋಪಿ ತಲೆಮರೆಸಿಕೊಂಡಿದ್ದರು. ಮೊಬೈಲ್ ಲೊಕೇಷನ್ ಆಧರಿಸಿ ಆರೋಪಿಯನ್ನು ಪತ್ತೆಹಚ್ಚಿ ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.



ಮೂರ್ತಿ



ಕೀರ್ತಿ

ಕಲ್ಲು ಎತ್ತಿಹಾಕಿ ಕೊಲೆ ಪ್ರಕರಣ: ಆರೋಪಿ ಬಂಧನ

ಊಟಕ್ಕೆ ಕುಳಿತುಕೊಳ್ಳುವ ಸ್ಥಳದ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಕಾರ್ಮಿಕನ ತಲೆಯ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಿದ್ದ ಆರೋಪಿಯನ್ನು ಹನುಮಂತನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಹರೀಶ್

ಹರೀಶ್ ಬಂಧಿತ ಆರೋಪಿ.

ಸೆ.24ರಂದು ಶ್ರೀನಿವಾಸನಗರದ 11ನೇ ಕ್ರಾಸ್‌ನ ನಿರ್ಮಾಣ ಹಂತದ ಕಟ್ಟಡವೊಂದರಲ್ಲಿ ಅಜಿತ್ (30) ಎಂಬುವವರ ತಲೆಯ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಲಾಗಿತ್ತು. ಬಳಿಕ, ಆರೋಪಿ ಪರಾರಿ ಆಗಿದ್ದರು. ಅವರನ್ನು ಪತ್ತೆಹಚ್ಚಿ ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದರು.

'ಅಜಿತ್ ಹಾಗೂ ಆರೋಪಿ ಹರೀಶ್ ಇಬ್ಬರೂ ಸ್ನೇಹಿತರು. ಕೃತ್ಯ ನಡೆದಿದ್ದ ಕಟ್ಟಡದಲ್ಲಿಯೇ ಗಾರೆ ಕೆಲಸ ಮಾಡಿಕೊಂಡಿದ್ದರು. ಸೆ.24ರಂದು ಕಟ್ಟಡದ ಮೊದಲ ಮಹಡಿಯಲ್ಲಿದ್ದರು. ಆಗ ಅಜಿತ್‌ನ ಬಳಿ ಬಂದಿದ್ದ ಆರೋಪಿ, 'ಅದು ನಾನು ಕುಳಿತುಕೊಂಡು ಊಟ ಮಾಡುವ ಸ್ಥಳ. ಅಲ್ಲಿಂದ ಎದ್ದೇಳು' ಎಂದು ಮನವಿ ಮಾಡಿದ್ದರು. ಆ ಸ್ಥಳದಿಂದ ಎದ್ದಿದ್ದ ಅಜಿತ್ ಅವರು ಕಟ್ಟಡದ ಮೂರನೇ ಮಹಡಿಗೆ ತೆರಳಿ ಊಟಕ್ಕೆ ಕುಳಿತಿದ್ದರು. ಅಲ್ಲಿಗೂ ಹೋಗಿದ್ದ ಹರೀಶ್ ಅಲ್ಲಿಯೂ ಗಲಾಟೆ ನಡೆಸಿದ್ದರು. ಆ ಸ್ಥಳದಲ್ಲಿ 'ನಾನು ಕೂರಬೇಕು' ಎಂದಿದ್ದರು. ಇಬ್ಬರ ಮಧ್ಯೆ ಗಲಾಟೆ ಆಗಿತ್ತು. ಆಗ ಅಜಿತ್ ಅವರ ತಲೆಯ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಲಾಗಿತ್ತು' ಎಂದು ಪೊಲೀಸರು ತಿಳಿಸಿದರು.

'ಆರೋಪಿಯನ್ನು ಬಂಧಿಸಿ ವಿಚಾರಣೆ ನಡೆಸಲಾಗಿದೆ. ಹರೀಶ್‌ಗೆ ಅಪರಾಧ ಹಿನ್ನೆಲೆಯಿದೆ. ಈ ಹಿಂದೆ ಕೊರಟಗೆರೆಯಲ್ಲಿ ನಡೆದಿದ್ದ ಗಲಾಟೆಯಲ್ಲೂ ಭಾಗಿ ಆಗಿದ್ದರು. ಅಲ್ಲದೇ ಕೊಲೆ ಪ್ರಕರಣವೊಂದರಲ್ಲೂ ಬಂಧನಕ್ಕೆ ಒಳಗಾಗಿ ಜಾಮೀನ ಮೇಲೆ ಬಿಡುಗಡೆ ಆಗಿದ್ದರು' ಎಂದು ಪೊಲೀಸರು ಹೇಳಿದರು.

ಹನುಮಂತನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

466 ಚಾಲಕರ ವಿರುದ್ಧ ಎಫ್‌ಐಆರ್ ದಾಖಲು

ಮದ್ಯ ಸೇವಿಸಿ ಚಾಲನೆ: ಶಾಲಾ ವಾಹನ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಸಂಚಾರ ಪೊಲೀಸ್ ಇಲಾಖೆಯಿಂದ ಶಾಲಾ ವಾಹನಗಳ ಚಾಲಕರ ವಿರುದ್ಧ ಸೋಮವಾರ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ ಮದ್ಯ ಸೇವಿಸಿ, ವಾಹನ ಚಾಲನೆ ಮಾಡುತ್ತಿದ್ದ ಚಾಲಕರ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ.

ಬೆಳಿಗ್ಗೆ 7.30ರಿಂದ ಮಧ್ಯಾಹ್ನ 12ರ ವರೆಗೆ ವಿಶೇಷ ಕಾರ್ಯಾಚರಣೆ ನಡೆಸಲಾಯಿತು. ಒಟ್ಟು 3,924 ವಾಹನಗಳ ತಪಾಸಣೆ ಮಾಡಲಾಯಿತು. ಮದ್ಯ ಸೇವಿಸಿ, ವಾಹನ ಚಾಲನೆ ಮಾಡಿದ್ದ 21 ಚಾಲಕರು ಹಾಗೂ ನಿಗದಿತ ಮಿತಿಗಿಂದ ಹೆಚ್ಚಿನ ಮಕ್ಕಳನ್ನು ಕರೆದೊಯ್ಯುತ್ತಿದ್ದ 445 ಚಾಲಕರ ವಿರುದ್ಧ ಎಫ್‌ಐಆರ್ ದಾಖಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.



ಶಾಲಾ ವಾಹನಗಳ ಚಾಲಕರ ವಿರುದ್ಧ ನಗರ ಸಂಚಾರ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿದರು

ಚಾಲಕರು ಮದ್ಯ ಸೇವಿಸಿ ವಾಹನ ಚಾಲನೆ ಮಾಡಿರುವ ಶಾಲಾ ವಾಹನಗಳನ್ನು ಜಪ್ತಿ ಮಾಡಲಾಗಿದೆ. ಆ ವಾಹನಗಳ ಪರವಾನಗಿ ರದ್ದು ಪಡಿಸಲು ಪ್ರಾದೇಶಿಕ ಸಾರಿಗೆ ಪ್ರಾಧಿಕಾರಕ್ಕೆ ಶಿಫಾರಸು ಮಾಡಲಾಗಿದೆ ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್.ಅನುಚೇತ್ ತಿಳಿಸಿದ್ದಾರೆ.

ಈ ರೀತಿಯ ವಿಶೇಷ ಕಾರ್ಯಾಚರಣೆಯನ್ನು ಮುಂದುವರಿಸಲಾಗುವುದು. ಸಂಚಾರ ನಿಯಮಗಳನ್ನು ಉಲ್ಲಂಘಿಸಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

835 ಪ್ರಕರಣ ದಾಖಲು: ಸೆ.23ರಿಂದ 29ರ ವರೆಗೆ ನಡೆದ ವಿವಿಧ ಮಾದರಿಯ ವಾಹನಗಳ ವಿರುದ್ಧದ ಕಾರ್ಯಾಚರಣೆಯಲ್ಲಿ ಮದ್ಯ ಸೇವಿಸಿ ವಾಹನ ಚಾಲನೆ ಮಾಡಿದ್ದ 835 ಚಾಲಕರು ಹಾಗೂ ಸವಾರರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ವಿವಿಧ ಮಾದರಿಯ 60,047 ವಾಹನಗಳನ್ನು ತಪಾಸಣೆ ಮಾಡಲಾಯಿತು ಎಂದು ಸಂಚಾರ ವಿಭಾಗದ ಪೊಲೀಸರು ಮಾಹಿತಿ ನೀಡಿದ್ದಾರೆ.

ಬಿಎಂಟಿಸಿ ಬಸ್ ಚಕ್ರ ಹರಿದು ಸವಾರ ಸಾವು

ಬೆಂಗಳೂರು: ಯಶವಂತಪುರದ ಸಿವಿ ರಾಮನ್ ರಸ್ತೆಯಲ್ಲಿ ಬಿಎಂಟಿಸಿ ಬಸ್ ಹಾಗೂ ದ್ವಿಚಕ್ರ ವಾಹನದ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಸವಾರರೊಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ವಿದ್ಯಾರಣ್ಯಪುರದ ನಿವಾಸಿ ಈಶ್ವರ್(43) ಮೃತಪಟ್ಟವರು.

'ಈಶ್ವರ ಅವರು ಅಕ್ಕಸಾಲಿಗ ಕೆಲಸ ಮಾಡುತ್ತಿದ್ದರು. ಸೋಮವಾರ ಮಧ್ಯಾಹ್ನ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದರು. ಕಾರೊಂದಕ್ಕೆ ಜಾಗ ಬಿಡುವ ಸಂದರ್ಭದಲ್ಲಿ ಆಯತಪ್ಪಿ ರಸ್ತೆಗೆ ಬಿದ್ದಿದ್ದರು. ಅದೇ ವೇಳೆ ಯಲಹಂಕದಿಂದ ಯಶವಂತಪುರಕ್ಕೆ ತೆರಳುತ್ತಿದ್ದ ಬಿಎಂಟಿಸಿ ಬಸ್‌ನ ಚಕ್ರಗಳು ಈಶ್ವರ್ ಅವರ ತಲೆಯ ಮೇಲೆ ಹರಿದು ಅವರು ಸ್ಥಳದಲ್ಲೇ ಮೃತಪಟ್ಟರು' ಎಂದು ಪೊಲೀಸರು ಹೇಳಿದರು.

'ಬಿಎಂಟಿಸಿ ಚಾಲಕನ ನಿರ್ಲಕ್ಷ್ಯವೇ ಅಪಘಾತಕ್ಕೆ ಕಾರಣವಾಗಿದೆ. ಚಾಲಕ ಮೋಹನ್ ಕುಮಾರ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ' ಎಂದು ಸಂಚಾರ ಪೊಲೀಸರು ಹೇಳಿದರು. ಯಶವಂತಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರ ಪೂರೈಕೆಗೆ ವ್ಯವಸ್ಥೆ

ಅಕ್ಷಯ ಪಾತ್ರ ಅಡುಗೆ ಮನೆ ಆರಂಭ

ಪ್ರಜಾವಾಣಿ ವಾರ್ತೆ

ಯಲಹಂಕ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮುಖ್ಯ ರಸ್ತೆಯ ಚಿಕ್ಕಜಾಲ ಸಮೀಪದಲ್ಲಿ ಅಕ್ಷಯ ಪಾತ್ರ ಫೌಂಡೇಶನ್ ವತಿಯಿಂದ ಸ್ಥಾಪಿಸಿರುವ ನೂತನ ಹಾಗೂ ಅತ್ಯಾಧುನಿಕ ಅಡುಗೆ ಮನೆಯನ್ನು ಸೋಮವಾರ ಲೋಕಾರ್ಪಣೆಗೊಳಿಸಲಾಯಿತು.

ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸಲು ಥಕ್ಕರ್ ಫ್ಯಾಮಿಲಿ ಫೌಂಡೇಶನ್ ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಸಹಯೋಗದಲ್ಲಿ ಈ ನೂತನ ಅಡುಗೆ ಮನೆಯನ್ನು ಸ್ಥಾಪಿಸಲಾಗಿದೆ. ಅಕ್ಷಯಪಾತ್ರ ಫೌಂಡೇಷನ್ ದೇಶದಲ್ಲಿ ನಿರ್ಮಿಸಿರುವ 75ನೇ ಅಡುಗೆಮನೆ ಇದಾಗಿದೆ. ಇಲ್ಲಿಂದ ಜಕ್ಕೂರು, ಹೆಬ್ಬಾಳ ಸೇರಿ ಸುತ್ತಮುತ್ತಲ ಪ್ರದೇಶಗಳ 200 ಶಾಲೆಗಳ ಒಟ್ಟು 35 ಸಾವಿರ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಒದಗಿಸಲು ವ್ಯವಸ್ಥೆ ಮಾಡಲಾಗಿದೆ. ಅಗತ್ಯವಿದ್ದಾಗ 70 ಸಾವಿರ ಮಕ್ಕಳಿಗೆ ಊಟ ಒದಗಿಸುವ ಸಾಮರ್ಥ್ಯವನ್ನೂ ಈ ಕೇಂದ್ರ ಹೊಂದಿದೆ.

ಅಡುಗೆ ಮನೆ ಉದ್ಘಾಟಿಸಿ ಮಾತನಾಡಿದ ಕಂದಾಯ ಸಚಿವ ಕೃಷ್ಣಬೈರೇಗೌಡ, 'ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ನೀಡುವ ಯೋಜನೆಯಲ್ಲಿ ಕರ್ನಾಟಕವು ದೇಶಕ್ಕೆ ಮಾದರಿಯಾಗಿದೆ. ಈ ವಿಚಾರದಲ್ಲಿ ದೇಶಕ್ಕೆ ಬೆಳಕು ಹರಿಸಿ, ಎಲ್ಲ ರಾಜ್ಯಗಳ ಕಣ್ಣು ತೆರೆಯುವಂತೆ ಮಾಡಿ ಸುಪ್ರೀಂ ಕೋರ್ಟ್‌ನಿಂದಲೂ ಮೆಚ್ಚುಗೆ ಗಳಿಸಿದ್ದು ಕರ್ನಾಟಕ' ಎಂದರು.

ಇನ್ಫೋಸಿಸ್ ಲಿಮಿಟೆಡ್‌ನ ಸಂಸ್ಥಾಪಕ ಎನ್.ಆರ್.ನಾರಾಯಣಮೂರ್ತಿ ಮಾತನಾಡಿ, 'ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ಒದಗಿಸುತ್ತಿರುವುದು ಅಕ್ಷಯ ಪಾತ್ರದ ಮಹತ್ತರ ಕಾರ್ಯವಾಗಿದೆ. ಈ ಅಡುಗೆಮನೆ ಸ್ಥಾಪನೆಗೆ ಸಹಯೋಗ ಒದಗಿಸಿದ ಥಕ್ಕರ್ ಕುಟುಂಬಕ್ಕೆ ಹಾಗೂ ಊಟ ಒದಗಿಸುವ ಯೋಜನೆಯ ಶೇ 55–56ರಷ್ಟು ಖರ್ಚು ಭರಿಸುತ್ತಿರುವ ರಾಜ್ಯ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ' ಎಂದರು.

ಅಕ್ಷಯ ಪಾತ್ರ ಫೌಂಡೇಶನ್‌ನ ಸಂಸ್ಥಾಪಕ ಅಧ್ಯಕ್ಷ ಮಧು ಪಂಡಿತ್ ದಾಸ ಮಾತನಾಡಿದರು. ದಾನಿಗಳಾದ ಥಕ್ಕರ್ ಫೌಂಡೇಶನ್‌ನ ಅಧ್ಯಕ್ಷ ಲಿಂಡಾ ಥಕ್ಕರ್, ರಿಲಯನ್ಸ್ ಲಿಮಿಟೆಡ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜ್ಯೋತಿಂದ್ರ ಥಕ್ಕರ್, ಅಕ್ಷಯ ಪಾತ್ರ ಫೌಂಡೇಶನ್‌ನ ಸಹ-ಸಂಸ್ಥಾಪಕ ಚಂಚಲಪತಿ ದಾಸ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಧರ್ ವೆಂಕಟ್, ಶಾಲಾ ಶಿಕ್ಷಣ ಇಲಾಖೆ ಆಯುಕ್ತೆ ಕಾವೇರಿ ಉಪಸ್ಥಿತರಿದ್ದರು.



ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನನಿಲ್ದಾಣ ಮುಖ್ಯರಸ್ತೆಯ ಚಿಕ್ಕಜಾಲ ಸಮೀಪದಲ್ಲಿ ಅಕ್ಷಯ ಪಾತ್ರ ಫೌಂಡೇಶನ್ ವತಿಯಿಂದ ಸ್ಥಾಪಿಸಿರುವ ಅಡುಗೆ ಮನೆಯ ಹೊರನೋಟ

ಧನಸಹಾಯಕ್ಕಾಗಿ ಅರ್ಜಿ ಆಹ್ವಾನ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 2024–25ನೇ ಸಾಲಿನಲ್ಲಿ ವೃತ್ತಿ ರಂಗಭೂಮಿ ಕಾಯಕಲ್ಪ ಪ್ರೋತ್ಸಾಹ ಯೋಜನೆ ಅಡಿಯಲ್ಲಿ ಧನ ಸಹಾಯ ವಿತರಣೆಗೆ ಅರ್ಜಿ ಆಹ್ವಾನಿಸಿದೆ.

ನೋಂದಾಯಿತ ವೃತ್ತಿ ನಾಟಕ ಕಂಪನಿಗಳು ಅ.30ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ kannadasiri.karnataka.gov.in ಜಾಲತಾಣಕ್ಕೆ ಭೇಟಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ. ರಸ್ತೆ ಬೆಂಗಳೂರು.

ನಿಧನ ವಾರ್ತೆ


ರತ್ನಮ್ಮ ನಾಯ್ಕ



ತೀರ್ಥಹಳ್ಳಿ: ತಾಲ್ಲೂಕಿನ ಇರೇಗೋಡು ಗ್ರಾಮದ ಪ್ರಗತಿಪರ ಕೃಷಿಕರಾಗಿದ್ದ ದಿವಂಗತ ಇ.ಎನ್. ವೆಂಕಟಪ್ಪ ನಾಯ್ಕ ಅವರ ಪತ್ನಿ ರತ್ನಮ್ಮ ನಾಯ್ಕ (80) ಅವರು ಸೋಮವಾರ ರಾತ್ರಿ ಅಲ್ಪಕಾಲದ ಅಸ್ವಸ್ಥತೆಯಿಂದ ಉಡುಪಿಯಲ್ಲಿ ನಿಧನರಾದರು.

ಅವರಿಗೆ ಪತ್ರಕರ್ತ ಇ.ವಿ.ಸತ್ಯ ನಾರಾಯಣ ಸೇರಿ ಮೂವರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಸ್ವಗ್ರಾಮ ಇರೇಗೋಡಿನಲ್ಲಿ ಮಂಗಳವಾರ ಸಂಜೆ 5 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಶ್ರೀನಿವಾಸ ಮೂರ್ತಿ



ರಾಜರಾಜೇಶ್ವರಿ ನಗರ : ಬಿಬಿಎಂಪಿ ಮಾಜಿ ಸದಸ್ಯ ಜೆ.ಎನ್. ಶ್ರೀನಿವಾಸ ಮೂರ್ತಿ (ಜಾನಿ) (54) ಸೋಮವಾರ ಮುಂಜಾನೆ ಹೃದಯಘಾತದಿಂದ ನಿಧನರಾದರು.

ಮೃತರಿಗೆ ಪತ್ನಿ, ಎರಡು ಹೆಣ್ಣು ಮಕ್ಕಳು ಹಾಗೂ ಒಬ್ಬ ಮಗ ಇದ್ದಾರೆ. ಜಾಲಹಳ್ಳಿ ರುದ್ರಭೂಮಿಯಲ್ಲಿ ಸೋಮವಾರ ಸಂಜೆ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ಎನ್. ಆನಂದ್



ಬೆಂಗಳೂರು: ಉತ್ತರಹಳ್ಳಿಯ ನಿವಾಸಿ ಎನ್. ಆನಂದ್ (72) ಸೋಮವಾರ ನಿಧನರಾದರು.

ಇವರಿಗೆ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ.

ಆನಂದ್ ಅವರು ದಿ ಪ್ರಿಂಟರ್ಸ್ ಮೈಸೂರು ಲಿಮಿಟೆಡ್‌ನ ಉತ್ಪಾದನಾ ವಿಭಾಗದಲ್ಲಿ ಕೆಲಸ ಮಾಡಿ ನಿವೃತ್ತರಾಗಿದ್ದರು.

ಉತ್ತರಹಳ್ಳಿಯ ರುದ್ರಭೂಮಿಯಲ್ಲಿ ಸೋಮವಾರ ಅಂತ್ಯಕ್ರಿಯೆ ನಡೆಯಿತು.


ನಗರದಲ್ಲಿ ಇಂದು

ರಕ್ತದಾನ ಶಿಬಿರ: ಉದ್ಘಾಟನೆ: ಲಿಂಗರಾಜ ಗಾಂಧಿ, ಆಯೋಜನೆ: ಬೆಂಗಳೂರು ನಗರ ವಿಶ್ವವಿದ್ಯಾಲಯ, ರಾಷ್ಟ್ರೀಯ ಸೇವಾ ಯೋಜನೆ, ಯೂತ್ ರೆಡ್ ಕ್ರಾಸ್, ಲಯನ್ಸ್ ಬ್ಲಡ್ ಬ್ಯಾಂಕ್, ಸ್ಥಳ: ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 9

ಕಂಪ್ರೆಹೆನ್ಸಿವ್ ಜೆರಿಯಾಟ್ರಿಕ್ ಕ್ಲಿನಿಕ್‌ನ ಉದ್ಘಾಟನೆ: ಸತೀಶ್ ಮಾಧವನ್, ಉಪಸ್ಥಿತಿ: ಪೃಥ್ವಿರಾಜ್ ಆರ್., ಗುರುನಾಗೇಶ್, ಆಯೋಜನೆ: ರೋಟರಿ ಡಿಸ್ಟ್ರಿಕ್ಟ್ 3191, ಸ್ಥಳ: ಆರ್.ವಿ. ಕಾಲೇಜ್ ಆಫ್ ಫಿಸಿಯೊಥೆರಪಿ, ನಾಲ್ಕನೇ ಬ್ಲಾಕ್ ಜಯನಗರ, ಬೆಳಿಗ್ಗೆ 9.30

ವಿಶ್ವ ಹಿರಿಯ ನಾಗರಿಕರ ದಿನಾಚರಣೆ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಬಸವರಾಜ ಹೊರಟ್ಟಿ, ಡಿ.ಕೆ. ಶಿವಕುಮಾರ್, ಯು.ಟಿ. ಖಾದರ್, ಎಚ್.ಡಿ. ಕುಮಾರಸ್ವಾಮಿ, ಪ್ರಲ್ಹಾದ ಜೋಶಿ, ಶೋಭಾ ಕರಂದ್ಲಾಜೆ, ವಿ. ಸೋಮಣ್ಣ, ಲಕ್ಷ್ಮಿ ಹೆಬ್ಬಾಳ್ಕರ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ವಿಶ್ವ ಹಿರಿಯ ನಾಗರಿಕರ ದಿನಾಚರಣೆಯ ಅಂಗವಾಗಿ 'ಹಿರಿಯರ ಮಾನಸಿಕ ಯೋಗಕ್ಷೇಮ'ದ ಕುರಿತು ರಾಷ್ಟ್ರೀಯ ವಿಚಾರಸಂಕಿರಣ: ಅತಿಥಿಗಳು: ಸೈಯದ್ ಕಿರ್ಮಾನಿ, ಗೀತಾಂಜಲಿ ಕಿರ್ಲೋಸ್ಕರ್, ಭಾಷಣಕಾರರು: ಡಾ. ಸಾಕೇತ್ ಎಂ., ಡಾ. ಮಂಜುಳಾ ರಾಮನ್, ಆಚಾಲ್ ಶ್ರೀಧರನ್, ಬಾಲ ಗಂಧೇಕರ್, ಶಬೀನಾ ಸುಲ್ತಾನಾ, ಸುಜಾತಾ ಬಾಲಕೃಷ್ಣನ್, ವತ್ಸಲಾ ಎಚ್.ಎನ್., ಆಯೋಜನೆ: ಚರಿಸ್ತಾ ಫೌಂಡೇಶನ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 10



ಸೈಯದ್ ಕಿರ್ಮಾನಿ

ಸರಳಾದೇವಿ ಮಜುಂದಾರ್ ಅವರ 'ಕಲಾಸರಳ–2024 ಕಲಾಕೃತಿಗಳ' ಪ್ರದರ್ಶನ: ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10.30

59ನೇ ಸಂಸ್ಥಾಪನಾ ದಿನಾಚರಣೆಯ ಉದ್ಘಾಟನೆ: ಎನ್.ಚಲುವರಾಯ ಸ್ವಾಮಿ, ಅತಿಥಿಗಳು: ರಾಘವೇಂದ್ರ ಭಟ್ಟ, ಅಧ್ಯಕ್ಷತೆ: ಎಸ್.ವಿ. ಸುರೇಶ, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಸಭಾಂಗಣ, ಜಿಕೆವಿಕೆ ಆವರಣ, ಬೆಳಿಗ್ಗೆ 10.30

ಸಮತಾ ಸೈನಿಕ ದಳ ಶತಮಾನೋತ್ಸವದ ಅಂಗವಾಗಿ ಶತದಿನಗಳ ಸಂಭ್ರಮ ಅಭಿಯಾನ, ಗಾಂಧಿನಗರ ವಿಧಾನಸಭಾ ಕ್ಷೇತ್ರದ ಕಾರ್ಯಕರ್ತರ ಸಭೆ: ಉದ್ಘಾಟನೆ: ಎಂ. ವೆಂಕಟಸ್ವಾಮಿ, ಮುಖ್ಯ ಭಾಷಣ: ಬಿ.ಟಿ. ಲಲಿತಾ ನಾಯಕ್, ಅಧ್ಯಕ್ಷತೆ: ಆರ್. ಚಂದ್ರಶೇಖರ್, ಆಯೋಜನೆ: ಸಮತಾ ಸೈನಿಕ ದಳ, ಸ್ಥಳ: ಹೋಟೆಲ್ ಕಾನಿಷ್ಕ ಸಭಾಂಗಣ, ಗಾಂಧಿನಗರ, ಮಧ್ಯಾಹ್ನ 12

ಕಲಾಭಾರತ್ 'ನಟನಾಗುವ ಪರಿ–ಅರ್ಹತೆ ಮತ್ತು ಸವಾಲುಗಳು': ಅತಿಥಿ: ನವೀನ್ ತೀರ್ಥಹಳ್ಳಿ, ಅಧ್ಯಕ್ಷತೆ: ಕೆ.ಎಸ್. ಗೋಪಾಲಕೃಷ್ಣ, ಆಯೋಜನೆ ಮತ್ತು ಸ್ಥಳ: ಬಿಇಎಸ್ ಕಲೆ ಮತ್ತು ವಾಣಿಜ್ಯ ಸಂಜೆ ಮಹಾವಿದ್ಯಾಲಯ, 16ನೇ ಮುಖ್ಯರಸ್ತೆ, ನಾಲ್ಕನೇ ಬ್ಲಾಕ್ ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in



स्वच्छ भारत
एक कदम स्वच्छता की ओर
ಕರ್ನಾಟಕ ಸರ್ಕಾರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರು
ರಾಷ್ಟ್ರಪಿತ ಮಹಾತ್ಮ ಗಾಂಧೀಜಿರವರ
155ನೇ ಜನ್ಮ ದಿನಾಚರಣೆ ಅಂಗವಾಗಿ
ಸ್ವಚ್ಛತಾ ಆಂದೋಲನ ಪ್ರತಿಜ್ಞಾವಿಧಿ ಕಾರ್ಯಕ್ರಮ
ದಿನಾಂಕ 02.10.2024, ಬುಧವಾರ, ಸಮಯ : ಬೆಳಿಗ್ಗೆ 10.00ಕ್ಕೆ
ಸ್ಥಳ : ಬ್ಯಾಂಕ್ವೆಟ್ ಹಾಲ್, ವಿಧಾನ ಸೌಧ, ಬೆಂಗಳೂರು – 560 001
ಪ್ರತಿಜ್ಞಾವಿಧಿ ಕಾರ್ಯಕ್ರಮದಲ್ಲಿ ಬೆಂಗಳೂರು ನಗರದ ಸಾವಿರಕ್ಕೂ ಹೆಚ್ಚು ಶಾಲಾ/ಕಾಲೇಜುಗಳ ಲಕ್ಷಾಂತರ ವಿದ್ಯಾರ್ಥಿಗಳು ಸ್ವಚ್ಛತಾ ಪ್ರತಿಜ್ಞಾವಿಧಿ ಕಾರ್ಯಕ್ರಮದಲ್ಲಿ ಆನ್‌ಲೈನ್ ಮುಖಾಂತರ ಭಾಗವಹಿಸಲಿದ್ದಾರೆ.
ಗಾಂಧಿ ಭಾರತ
ಗಾಂಧಿ ನಡಿಗೆ
ಗಾಂಧಿ ಭವನದಿಂದ ವಿಧಾನ ಸೌಧದ ವರೆಗೆ
ದಿನಾಂಕ : 02.10.2024, ಬುಧವಾರ
ಸಮಯ : ಬೆಳಗ್ಗೆ 9.00 ಗಂಟೆಗೆ
"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು" – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.
ನುಡಿದಂತೆ ನಡೆದಿದ್ದೇವೆ...
ಶಕ್ತಿ
ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಅನ್ನಭಾಗ್ಯ
10kg
ಗೃಹ ಜ್ಯೋತಿ
ಪ್ರತಿ ಮನೆಗೆ 200 ಯುನಿಟ್‌ವರೆಗೆ ವಿದ್ಯುತ್ ಉಚಿತ
ಗೃಹಲಕ್ಷ್ಮಿ
ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000
ಯುವನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000 ₹1500



MINISTRY OF CORPORATE AFFAIRS
GOVERNMENT OF INDIA
ಪಿಎಂ ಇಂಟರ್ನ್‌ಶಿಪ್
ಅತ್ಯುತ್ತಮರಿಂದ ಕಲಿಯಿರಿ
ಮುಂದಿನ 5 ವರ್ಷಗಳಲ್ಲಿ 1 ಕೋಟಿ ಯುವಜನರು ಟಾಪ್ 500 ಕಂಪನಿಗಳಲ್ಲಿ ಒಂದು ವರ್ಷದ ಇಂಟರ್ನ್‌ಶಿಪ್ ಪಡೆಯುತ್ತಾರೆ
ಇಂಟರ್ನ್‌ಶಿಪ್ ಮಾಡುವವರಿಗೆ ಮಾಸಿಕ ರೂ. 5000 ಭತ್ಯೆ
ಜೊತೆಗೆ, ಏಕಕಾಲಿಕ ರೂ. 6000 ಅನುದಾನ ಕೂಡ ಲಭಿಸುತ್ತದೆ
cbc 07101/13/0005/2425

ಕ್ಷೇಮ ಕುಶಲ



ಮುಷ್ಟಿಯಷ್ಟಿರುವ ಹೃದಯ ದೈಹಿಕವಾಗಿ ಮತ್ತು ಭಾವನಾತ್ಮಕವಾಗಿ ಮನುಷ್ಯನ ಅಸ್ತಿತ್ವ ಮತ್ತು ಜೀವಂತಿಕೆಯ ಸಂಕೇತ. ಭಾವನೆಗಳ ಮೂಲಸೆಲೆ. ಹೃದಯದ ಬಡಿತದೊಂದಿಗೆ ಜೀವನವೂ ಶುರುವಾಗುತ್ತದೆ. ಹೃದಯ ಸದ್ದು ಸ್ವಲ್ಪ ಲಯ ತಪ್ಪಿದರೂ ಏರುಪೇರಾಗುತ್ತದೆ. ಬಡಿತ ನಿಲ್ಲಿಸಿದರೆ ಕೊನೆಯಾಗುತ್ತದೆ. ಬೇರೆಯವರಿಗಾಗಿ ಮಿಡಿಯುವ ನಮ್ಮ ಹೃದಯ ತನ್ನ ಆರೋಗ್ಯಕ್ಕೂ ಮಿಡಿಯುವಂತಾಗಲಿ.

ಹಗುರಾಗಲಿ ಹೃದಯ ಹಸನಾಗಲಿ ಬದುಕು

ಡಾ. ಮಹಾಂತೇಶ ಆರ್. ಚರಂತಿಮಠ

ಭಾರತದಲ್ಲಿ ಹೃದಯಾಘಾತ ಪ್ರಕರಣ ತೀವ್ರಗತಿಯಲ್ಲಿ ಹೆಚ್ಚುತ್ತಿವೆ. ನಮ್ಮ ದೇಶದಲ್ಲಿ ಪ್ರತಿ ವರ್ಷ 25 ಲಕ್ಷಕ್ಕೂ ಹೆಚ್ಚು ಜನರು ಹೃದಯ ಸಂಬಂಧಿ ಕಾಯಿಲೆಗಳಿಂದ ಸಾಯುತ್ತಿದ್ದಾರೆ. ಅದರಲ್ಲೂ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಬಲಿಯಾಗುತ್ತಿದ್ದಾರೆ. ಹೃದಯಾಘಾತ ಸಂಭವದ ವಯೋಮಿತಿ 40ವರ್ಷದಿಂದ 30 ವರ್ಷಕ್ಕೆ ಇಳಿದಿದೆ. ಆಧುನಿಕ ಜೀವನಶೈಲಿ ಯುವಜನತೆಯಲ್ಲಿ ಹೃದಯನಾಳ ತೊಂದರೆ, ಹೃದಯಾಘಾತ, ಪಾರ್ಶ್ವವಾಯು ಸಂಭವವನ್ನು ಮೂರುಪಟ್ಟು ಹೆಚ್ಚಿಸಿದೆ.

20 ರಿಂದ 30ರ ವಯೋಮಾನದವರು ತಮಗೆ ಹೃದಯ ಸಮಸ್ಯೆ ಬರುವುದಿಲ್ಲ ಎಂಬ ಹುಸಿ ನಂಬಿಕೆಯಲ್ಲಿ ತಪಾಸಣೆಗೆ ಒಳಗಾಗುವುದಿಲ್ಲ. ಶೇ 76ರಷ್ಟು ಜನರು ಸಮಸ್ಯೆ ಅಂತಿಮ ಹಂತಕ್ಕೆ ತಲುಪುವವರೆಗೂ ವೈದ್ಯರ ಬಳಿ ಹೋಗುವುದಿಲ್ಲ. 20 ರಿಂದ 65 ವಯೋಮಾನದ ಶೇ 60ರಷ್ಟು ಭಾರತೀಯರಿಗೆ ಈ ಕುರಿತು ತಿಳಿವಳಿಕೆ ಇರುವುದಿಲ್ಲ.

ಬದಲಾದ ಜೀವನಶೈಲಿ, ಒತ್ತಡದ ಜೀವನ, ದೈಹಿಕ ಶ್ರಮವಿಲ್ಲದ ದುಡಿಮೆ ಹೃದಯಕ್ಕೆ ಗಂಡಾಂತರ ತಂದೊಡ್ಡುತ್ತಿವೆ. ಎಲ್ಲ ಕ್ಷೇತ್ರಗಳಲ್ಲೂ ಒತ್ತಡ ಹೆಚ್ಚಾಗುತ್ತಿದೆ. ಒತ್ತಡ ಹೆಚ್ಚಾದಷ್ಟು ಹೃದಯ ಅಪಾಯಕ್ಕೆ ಸಿಲುಕುವ ಸಾಧ್ಯತೆ ಹೆಚ್ಚು. ❖

ಗಮನವಿರಲಿ

- ಧೂಮಪಾನಿಗಳು ಹೃದಯಾಘಾತಕ್ಕೆ ತುತ್ತಾಗುವ ಸಾಧ್ಯತೆ 3 ರಿಂದ 6 ಪಟ್ಟು ಹೆಚ್ಚಾಗುತ್ತದೆ.
- ರಕ್ತದಲ್ಲಿಯ ಕೊಬ್ಬಿನಾಂಶ(ಕೊಲೆಸ್ಟ್ರಾಲ್) ಹೆಚ್ಚಾದರೆ ರಕ್ತನಾಳ(ಕರೋನರಿ ಆರ್ಟರಿ) ಗಟ್ಟಿಯಾಗಿ ಹೃದಯಾಘಾತ ಸಂಭವಿಸುವ ಅಪಾಯ ಇರುತ್ತದೆ.
- ಅನಿಯಂತ್ರಿತ ಮಧುಮೇಹ, ಅತಿಯಾದ ತೂಕ, ಅಧಿಕ ರಕ್ತದೊತ್ತಡದಿಂದ ರಕ್ತನಾಳಗಳು ಸ್ಥಿತಿಸ್ಥಾಪಕ ಗುಣ ಕಳೆದುಕೊಂಡು ಗಡಸಾಗುತ್ತವೆ. ಇದರಿಂದ ಹೃದಯಸ್ತಂಭನ, ಆಘಾತ ಸಂಭವಿಸುತ್ತವೆ.
- ಅಧಿಕ ರಕ್ತದೊತ್ತಡ ನಿಯಂತ್ರಿಸದಿದ್ದರೆ ಮಿದುಳು ಹಾಗೂ ಮೂತ್ರಪಿಂಡಗಳ ರಕ್ತನಾಳಗಳಿಗೂ ತೊಂದರೆಯಾಗಿ ಪಾರ್ಶ್ವವಾಯು ಮತ್ತು ಕಿಡ್ನಿ ವೈಫಲ್ಯಕ್ಕೆ ಕಾರಣವಾಗುತ್ತದೆ.
- ಅತಿ ಉದ್ವೇಗ, ಒತ್ತಡ, ಆಯಾಸ, ಆತುರ, ಕೋಪ, ಆವೇಶಕ್ಕೆ ಒಳಗಾಗುವ ವ್ಯಕ್ತಿಗಳಿಗೆ ಹೃದಯಾಘಾತವಾಗುವ ಸಂಭವ ಹೆಚ್ಚು.
- ಕುಟುಂಬದಲ್ಲಿ ಹೃದಯಾಘಾತದ ಇತಿಹಾಸ ಇದ್ದರೆ ಅಗಾಗ ತಪಾಸಣೆಗೆ ಒಳಗಾಗಬೇಕು.

ಮುನ್ಸೂಚನೆ ಕೊಡುತ್ತಾ?

ಹೃದಯಾಘಾತದ ಮುನ್ಸೂಚನೆಯಲ್ಲೂ ವ್ಯತ್ಯಾಸಗಳಿರುತ್ತವೆ. ಕೆಲವೊಮ್ಮೆ ಈ ಲಕ್ಷಣ ಬಿರುಸಾಗಿದ್ದರೆ, ಕೆಲವೊಬ್ಬರಲ್ಲಿ ಲಘುವಾಗಿರುತ್ತವೆ. ಕೆಲವು ಸಂದರ್ಭದಲ್ಲಿ ಯಾವುದೇ ಲಕ್ಷಣವಿಲ್ಲದೇ ಅಥವಾ ಲಘು ಲಕ್ಷಣಗಳೊಂದಿಗೆ ಹೃದಯಾಘಾತ ಸಂಭವಿಸುತ್ತವೆ. ಬೋರಲಾಗಿ ಮಲಗುವವರಲ್ಲೂ ಹೃದಯಾಘಾತ ಸಂಭವ ಜಾಸ್ತಿ.

ಕೂತಲ್ಲೆ ಕೆಲಸ (ಮಾಹಿತಿ ತಂತ್ರಜ್ಞಾನ, ಕಚೇರಿ ಕೆಲಸ), ವಿಶ್ರಾಂತಿರಹಿತ ದುಡಿಮೆ, ದೈಹಿಕ ಚಟುವಟಿಕೆ ಇಲ್ಲದ ಜಡ ಜೀವನಶೈಲಿ, ಧೂಮಪಾನ, ಮದ್ಯಪಾನದಂಥ ಹವ್ಯಾಸಗಳು ಹೃದಯಾಘಾತ ಹೆಚ್ಚಲು ತಮ್ಮದೇ ಕೊಡುಗೆ ನೀಡುತ್ತಿವೆ.

ಸ್ವಲ್ಪ ಮುಂಜಾಗ್ರತೆ ವಹಿಸಿದರೂ ಹೃದ್ರೋಗ ತಡೆಯಬಹುದು. ಬಹುತೇಕ ಹೃದಯ ಸಂಬಂಧಿ ಕಾಯಿಲೆಗಳನ್ನು ಉತ್ತಮ ಜೀವನ ಶೈಲಿ ಮತ್ತು ಆಹಾರ ಪದ್ಧತಿಯಿಂದಲೇ ತಡೆಗಟ್ಟಬಹುದು.



ಹೃದಯದ ಆರೈಕೆಗೆ ಹೀಗೆ ಮಾಡಿ

- ಯೋಗ, ಧ್ಯಾನ, ವ್ಯಾಯಾಮ ಮತ್ತು ದೀರ್ಘ ಉಸಿರಾಟದ ಮೂಲಕ ಮನಸ್ಸು ಮತ್ತು ದೇಹವನ್ನು ಪ್ರಫುಲ್ಲವಾಗಿ ಇಟ್ಟುಕೊಳ್ಳಿ.
- ಸರಳ ಜೀವನಶೈಲಿ, ಸಮಯ ನಿರ್ವಹಣೆ, ಸಂವಹನ ಕೌಶಲ ರೂಢಿಸಿಕೊಳ್ಳಿ.
- ಉತ್ತಮ ನಿದ್ರೆ ಅಗತ್ಯ. ಬೇಗ ಮಲಗಿ, ಬೇಗ ಏಳುವ ಅಭ್ಯಾಸ ರೂಢಿಸಿಕೊಳ್ಳಿ. ನಿಯಮಿತವಾಗಿ ತೂಕ ತಪಾಸಣೆ ಹಾಗೂ ನಿತ್ಯ 45 ನಿಮಿಷ ವೇಗದ ನಡಿಗೆ ಮಾಡಿ.
- ನಾಲಿಗೆಯ ಚಪಲವನ್ನು ಹಿಡಿತದಲ್ಲಿ ಇಟ್ಟುಕೊಳ್ಳಿ. ಸೇವಿಸುವ ಆಹಾರದ ಮೇಲೆ ನಿಯಂತ್ರಣ ಸಾಧಿಸಿ. ಹಿತಮಿತವಾದ ಸಮತೋಲಿತ ಆಹಾರ, ಹಣ್ಣು, ಹಂಪಲು, ಹಸಿರು ತರಕಾರಿ, ಬೇಳೆ ಕಾಳು, ಹಸಿ ಮೊಳಕೆ ಒಡೆದ ಕಾಳು ಊಟದ ತಟ್ಟೆಯಲ್ಲಿ ಹೇರಳವಾಗಿರಬೇಕು.
- ಕೊಬ್ಬಿನ ಆಹಾರ, ಕರಿದ ಪದಾರ್ಥ ಮತ್ತು ಬೇಕರಿ ತಿಂಡಿ, ತಿನಿಸು ಹಾಗೂ ಫ್ರೆಂಚ್ ಫ್ರೈಸ್, ಬರ್ಗರ್, ಪಿಜ್ಜಾ ಸೇರಿ ಜಂಕ್ ಫುಡ್ ಕಡಿಮೆ ಮಾಡಿದಷ್ಟೂ ಹೃದಯ ಗಟ್ಟಿಯಾಗುತ್ತದೆ. ಧೂಮಪಾನ, ಮದ್ಯ ಸೇವನೆ ಬಿಟ್ಟುಬಿಡಿ. ಆಯುಷ್ಯ ಹೆಚ್ಚಾಗುತ್ತದೆ. ಆಹಾರ ಸೇವಿಸುವಾಗ ಔಷಧಿಯಂತೆ ಸೇವಿಸಿ. ಇಲ್ಲವಾದಲ್ಲಿ ಔಷಧಿಯನ್ನೇ ಆಹಾರವಾಗಿ ಸೇವಿಸಬೇಕಾಗಬಹುದು.

ರಕ್ತಹೀನತೆಯಿಂದ ಹೃದಯಕ್ಕೆ ಆಪತ್ತು!

ಡಾ. ಅದಿಲ್ ಸಾದಿಕ್

ಮಹಿಳೆಯರಲ್ಲಿ ಸಾಮಾನ್ಯ ಎನಿಸಿರುವ ರಕ್ತಹೀನತೆ ಹಾಗೂ ಅತಿಯಾದ ಬೊಜ್ಜಿನ ಕಾರಣಗಳಿಂದಾಗಿಯೂ ಹೃದ್ರೋಗ ಕಾಣಿಸಿಕೊಳ್ಳುತ್ತದೆ.

ಋತುಸ್ರಾವ ಕಾರಣಕ್ಕೆ ಮಹಿಳೆಯರಲ್ಲಿ ರಕ್ತಹೀನತೆಯೆಂಬುದು ಸಾಮಾನ್ಯವೆಂದು ನಿರ್ಲಕ್ಷ್ಯಿಸುವ ಹಾಗಿಲ್ಲ. ದೀರ್ಘಕಾಲ ರಕ್ತಹೀನತೆಯಿಂದ ಬಳಲುತ್ತಿದ್ದವರ ಹೃದಯ ದುರ್ಬಲಗೊಳ್ಳುವ ಸಾಧ್ಯತೆ ಹೆಚ್ಚು. ರಕ್ತಹೀನತೆಯು ಹೃದಯದ ಕಾರ್ಯಚಟುವಟಿಕೆಗಳಲ್ಲಿ ವೈಫಲ್ಯ ಉಂಟು ಮಾಡಬಲ್ಲದು.

ತೊಂದರೆ ಹೇಗೆ?

ಕೆಂಪು ರಕ್ತಕಣಗಳು ಸಾಕಷ್ಟು ಪ್ರಮಾಣದಲ್ಲಿ ಹೃದಯಕ್ಕೆ ಆಮ್ಲಜನಕವನ್ನು ಪೂರೈಸಿದಾಗ ಮಾತ್ರವೇ ಹೃದಯ ಉತ್ತಮವಾಗಿ ಕಾರ್ಯನಿರ್ವಹಿಸಬಲ್ಲದು. ಜೀವಕೋಶಗಳಲ್ಲಿರುವ ಕೆಂಪುರಕ್ತ ಕಣಗಳು ಶ್ವಾಸಕೋಶದಿಂದ ದೇಹದ ಎಲ್ಲಾ ಅಂಗಾಂಶಗಳಿಗೆ ಆಮ್ಲಜನಕವನ್ನು ಕೊಂಡೊಯ್ಯುತ್ತವೆ. ರಕ್ತಹೀನತೆ ಇರುವವರಲ್ಲಿ ಹೃದಯಕ್ಕೆ ಅಗತ್ಯವಿರುವಷ್ಟು ಆಮ್ಲಜನಕ ಪೂರೈಕೆಯಾಗುವುದಿಲ್ಲ. ಪೂರೈಸಲು ಕೆಂಪು ರಕ್ತಕಣಗಳ ಕೊರತೆ ಇರುತ್ತವೆ. ಇದರಿಂದ ಹೃದಯದ ಮೇಲೆ ತೀವ್ರತರದ ಒತ್ತಡ ಬೀಳುತ್ತದೆ.


ರಕ್ತಹೀನತೆ ಇರುವ ಮಹಿಳೆಯರ ಹೃದಯದ ರಕ್ತನಾಳಗಳ ಕಾರ್ಯವೈಖರಿಯಲ್ಲಿ ವ್ಯತ್ಯಯ ಉಂಟಾಗಬಹುದು. ಹೃದಯ ಬಡಿತ ಇದ್ದಕ್ಕಿದ್ದ ಹಾಗೆ ಹೆಚ್ಚುಗೊಳ್ಳುವ ಸಾಧ್ಯತೆ ಇರುತ್ತದೆ. ಹಾಗಾಗಿ ರಕ್ತಹೀನತೆಯನ್ನು ಕಡೆಗಣಿಸಬೇಡಿ.

ಇನ್ನು ತೂಕ ಹೆಚ್ಚಳವು ಹೃದ್ರೋಗವನ್ನು ತಂದೊಡ್ಡಬಲ್ಲದು. ಮಹಿಳೆಯರಲ್ಲಿ ಹಾರ್ಮೋನ್‌ಗಳ ವ್ಯತ್ಯಾಸದಿಂದಾಗಿ ತೂಕ ಹೆಚ್ಚಳವೆಂಬುದು ಸಾಮಾನ್ಯ. ಅದರಲ್ಲಿಯೂ ಮದುವೆ ಹಾಗೂ ತಾಯ್ತನದ ನಂತರ ಹಾರ್ಮೋನ್‌ಗಳಲ್ಲಿ ವ್ಯಾಪಕ ಬದಲಾವಣೆ ಉಂಟಾಗುತ್ತದೆ. ಒತ್ತಡದ ಬದುಕು, ಅತಿ ತಿನ್ನುವಿಕೆ, ವ್ಯಾಯಾಮರಹಿತ ಜೀವನ ಇವುಗಳಿಂದಾಗಿಯೂ ತೂಕ ಹೆಚ್ಚಳಗೊಳ್ಳಬಹುದು. ಹಾರ್ಮೋನ್‌ಗಳಲ್ಲಿ ವ್ಯತ್ಯಾಸ ಉಂಟಾಗಿಯೂ ಬೊಜ್ಜಿಗೆ ಕಾರಣವಾಗಬಹುದು. ಅತಿಯಾದ ಬೊಜ್ಜು ಮಹಿಳೆಯರ ಹೃದಯಕ್ಕೆ ಆಪತ್ತು ತರಬಹುದು. ರಕ್ತದಲ್ಲಿ ಕೊಬ್ಬಿನಾಂಶ ಹೆಚ್ಚಳಗೊಂಡರೆ ಹೃದಯಕ್ಕೆ ಸರಿಯಾಗಿ ರಕ್ತ ಪೂರೈಕೆಯಾಗುವುದಿಲ್ಲ. ಜತೆಗೆ ಇನ್ಸುಲಿನ್ ಪ್ರತಿರೋಧವನ್ನು ಹೆಚ್ಚಿಸುತ್ತದೆ. ಇದರೊಂದಿಗೆ ಕೆಂಪು ರಕ್ತಕಣಗಳ ಉತ್ಪಾದನೆ ಕಡಿಮೆಯಾಗಿ ರಕ್ತಹೀನತೆ ಬಿಗಡಾಯಿಸುತ್ತದೆ.

ಇನ್ನು ಹೃದ್ರೋಗ ಸಮಸ್ಯೆ ಇರುವ ಮಹಿಳೆಯರಲ್ಲಿ 'ಕಾರ್ಡಿಯೋರೆನಲ್ ಅನೀಮಿಯಾ ಸಿಂಡ್ರೋಮ್' ಕಾಣಿಸಿಕೊಳ್ಳಬಹುದು. ಇಂಥ ಪರಿಸ್ಥಿತಿಯಲ್ಲಿ ಹೃದಯ, ಮೂತ್ರಪಿಂಡ ಮತ್ತು ಕೆಂಪುರಕ್ತ ಕಣಗಳ ಕಾರ್ಯವೈಖರಿಯಲ್ಲಿ ಬದಲಾವಣೆಯಾಗುತ್ತದೆ. ಹೃದ್ರೋಗ ಸಮಸ್ಯೆಯಿಂದಾಗಿ ಉಂಟಾಗುವ ಊರಿಯೂತವು ಕೆಂಪು ರಕ್ತ ಕಣಗಳ ಉತ್ಪಾದನೆಗೆ ಅಡ್ಡಿಪಡಿಸುತ್ತದೆ. ಇದರಿಂದ ರಕ್ತಹೀನತೆ ಸಮಸ್ಯೆ ಹೆಚ್ಚಾಗಬಹುದು.

ಏನು ಮಾಡಬಹುದು?

- ಹೃದ್ರೋಗ ಸಮಸ್ಯೆ ಮಹಿಳೆಯರಲ್ಲಿ ಕಡಿಮೆ ಎಂದು ನಿರ್ಲಕ್ಷ್ಯಿಸಬೇಡಿ. ಮಹಿಳೆಯರು ಕಡ್ಡಾಯವಾಗಿ ಆಗಾಗ್ಗೆ ಹೃದಯದ ತಪಾಸಣೆ ಮಾಡಿಸಿ.
- ಏಕಕಾಲಕ್ಕೆ ಹಲವು ಕೆಲಸಗಳನ್ನು ಒಟ್ಟಿಗೆ ನಿರ್ವಹಿಸುವ, ಮನೆ ಹಾಗೂ ಕಚೇರಿಯನ್ನು ಒಟ್ಟಿಗೆ ನಿಭಾಯಿಸುವ ಮಹಿಳೆಯರು ಹೃದಯದ ಕಾಳಜಿಯೂ ಮಾಡಿ.
- ಧಾರಣಾ ಶಕ್ತಿ ಇದೆಯೆಂದು ದೈಹಿಕ ಹಾಗೂ ಮಾನಸಿಕ ಒತ್ತಡವನ್ನು ಅನುಭವಿಸಬೇಡಿ. ಮುಲಾಜಿಲ್ಲದೇ ಹೊರೆಯನ್ನು ಇಳಿಸುವ ಜಾಣ್ಮೆಯನ್ನು ಕಲಿಯಿರಿ.
- ಕುಟುಂಬದ ದೇಖರೇಖಿ ನೋಡಿಕೊಳ್ಳುವ ಮಹಿಳೆಯರು ಆಗಾಗ್ಗೆ ಹೃದಯದ ಆರೋಗ್ಯದ ಕಡೆಗೆ ಗಮನ ಕೊಡಿ. ಧೂಮಪಾನ ಮಾಡುತ್ತಿದ್ದರೆ ಬಿಟ್ಟುಬಿಡಿ. ಧೂಮಪಾನದಿಂದ ರಕ್ತನಾಳಗಳು ಹಾನಿಗೆ ಒಳಗಾಗುತ್ತವೆ. ಇದು ಹೃದ್ರೋಗದ ಅಪಾಯವನ್ನು ಹೆಚ್ಚಿಸುತ್ತದೆ.
- ಮದ್ಯಸೇವನೆಯು ಕಬ್ಬಿಣ ಮತ್ತು ಫೋಲಿಕ್‌ನಂಥ ನಿರ್ಣಾಯಕ ಪೋಷಕಾಂಶಗಳ ಉತ್ಪಾದನೆಯನ್ನು ಕಡಿಮೆ ಮಾಡುತ್ತದೆ. ಇದರಿಂದಲೂ ಅಧಿಕ ರಕ್ತದೊತ್ತಡ ಉಂಟಾಗಿ ಹೃದ್ರೋಗ ಸಮಸ್ಯೆ ಉಂಟಾಗಬಹುದು. ❖




ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ – ಗಣಿತ

ಅಧ್ಯಾಯ–6 ತ್ರಿಭುಜ

ಅಭ್ಯಾಸ –6.3

2) ಚಿತ್ರ 6.35 ರಲ್ಲಿ $\Delta OBA \sim \Delta ODC$, $\angle BOC = 125^\circ$ ಮತ್ತು $\angle CDO = 70^\circ$. ಆದರೆ $\angle DOC, \angle DCO$ ಮತ್ತು $\angle OAB$. ಗಳನ್ನು ಕಂಡುಹಿಡಿಯಿರಿ



ಪರಿಹಾರ: ಚಿತ್ರವನ್ನು ಗಮನಿಸಿದಾಗ ಗೊತ್ತಾಗುವುದೇನೆಂದರೆ DOB ಯು ಒಂದು ಸರಳ ರೇಖೆಯಾಗಿದೆ

ಆದ್ದರಿಂದ

, $\angle DOC + \angle COB = 180^\circ$

$\Rightarrow \angle DOC = 180^\circ - 125^\circ$ (Given, $\angle BOC = 125^\circ$)

$= 55^\circ$

ΔDOC ದಲ್ಲಿ ಎಲ್ಲಾ ಮೂರು ಕೋನಗಳ ಮೊತ್ತವು 180°ಆಗಿದೆ

ಆದ್ದರಿಂದ

$\angle DCO + \angle CDO + \angle DOC = 180^\circ$

$\Rightarrow \angle DCO + 70^\circ + 55^\circ = 180^\circ$ (ದತ್ತ, $\angle CDO = 70^\circ$)

$\Rightarrow \angle DCO = 55^\circ$

$\Delta ODC \sim \Delta OBA$,

ಆದ್ದರಿಂದ , $\Delta ODC \sim \Delta OBA$.

$\angle OAB = \angle OCD$ ದತ್ತ


$\Rightarrow \angle OAB = 55^\circ$

$\angle OAB = \angle OCD$

$\Rightarrow \angle OAB = 55^\circ$

3) ABCD ತ್ರಾಪಿಜ್ಯದಲ್ಲಿ , $AB \parallel DC$ ಕರ್ಣಗಳಾದ AC ಮತ್ತು BD ಗಳು ಪರಸ್ಪರ O ಬಿಂದುವಿನಲ್ಲಿ ಛೇಧಿಸುತ್ತವೆ. ಎರಡು ತ್ರಿಭುಜಗಳ ಸಮರೂಪತೆ ನಿರ್ಧಾರಕ ಗುಣ ಉಪಯೋಗಿಸಿ $\frac{AO}{OC} = \frac{OB}{OD}$ ಎಂದು ಸಾಧಿಸಿ

ಪರಿಹಾರ:



ΔDOC ಮತ್ತು ΔBOA ದಲ್ಲಿ,

$AB \parallel CD$, ಹೀಗಾಗಿ ಪರ್ಯಾಯ ಕೋನಗಳಾದ

$\angle CDO = \angle ABO$

$\angle DCO = \angle BAO$

ಎರಡು ತ್ರಿಭುಜ ΔDOC and ΔBOAದಲ್ಲಿ ಶೃಂಗಾಭಿಮುಖ ಕೋನಗಳು

$\therefore \angle DOC = \angle BOA$

ಕೋನ ಕೋನ ನಿರ್ಧಾರಕ ಗುಣದಿಂದ


$\Delta DOC \sim \Delta BOA$

$\frac{DO}{BO} = \frac{OB}{OD}$

$\Rightarrow \frac{AO}{OC} = \frac{OB}{OD}$

(ಸಮರೂಪ ತ್ರಿಭುಜದ ಅನುರೂಪ ಬಾಹುಗಳು)

4) ಚಿತ್ರ 6.36ರಲ್ಲಿ $\frac{QR}{QS} = \frac{QT}{PR}$ ಮತ್ತು $\angle 1 = \angle 2$. ಆದರೆ $\Delta PQS \sim \Delta TQR$ ಎಂದು ಸಾಧಿಸಿ



ಪರಿಹಾರ: ΔPQR ದಲ್ಲಿ,

$\angle PQR = \angle PRQ$

$\therefore PQ = PR$ ....(i)

$\frac{QR}{QS} = \frac{QT}{PR}$

ಸಮೀಕರಣ 1 ಅನ್ನು ಉಪಯೋಗಿಸುವುದರಿಂದ

$\frac{QR}{QS} = \frac{QT}{QP}$ ....(2)

ΔPQS ಮತ್ತು ΔTQR, ದಲ್ಲಿ, ಸಮೀಕರಣ 2ರಿಂದ


$\frac{QR}{QS} = \frac{QT}{QP}$

$\angle Q = \angle Q$

$\therefore \Delta PQS \sim \Delta TQR$ [ಬಾ ಕೋ ಬಾ ಸಿದ್ಧಾಂತದಂತೆ)

5) $\angle P = \angle RTS$ ಆಗಿರುವಂತೆ S ಮತ್ತು T ಗಳು ΔPQRನ PR ಮತ್ತು QR ಬಾಹುಗಳ ಮೇಲಿನ ಬಿಂದುಗಳು ಆದರೆ $\Delta RPQ \sim \Delta RTS$ ಎಂದು ಸಾಧಿಸಿ

ಪರಿಹಾರ:



ΔPQRದಲ್ಲಿ PR ಮತ್ತು QRನಲ್ಲಿ S ಮತ್ತು T ಬಿಂದುಗಳಲ್ಲಿ ರೇಖೆಯನ್ನು ಎಳೆಯಲಾಗಿದೆ. ಹಾಗೂ

$\angle P = \angle RTS$.


ΔRPQ ಮತ್ತು ΔRTSದಲ್ಲಿ

$\angle RTS = \angle QPS$ (ದತ್ತ)

$\angle R = \angle R$

$\therefore \Delta RPQ \sim \Delta RTS$ (AA similarity criterion)

6) ಚಿತ್ರ 6.37ರಲ್ಲಿ $\Delta ABE \cong \Delta ACD$ ರಲ್ಲಿ ಆದರೆ $\Delta ADE \sim \Delta ABC$ ಎಂದು ಸಾಧಿಸಿ



ಪರಿಹಾರ: $\Delta ABE \cong \Delta ACD$. (ದತ್ತ)

$\therefore AB = AC$ [By CPCT] ....(1)

And, $AD = AE$ [By CPCT] ....(2)

ΔADE ಮತ್ತು ΔAB ದಲ್ಲಿ, ಸಮೀಕರಣ1 ಮತ್ತು 2ರಿಂದ

$AD/AB = AE/AC$

$\angle A = \angle A$ [ಸಾಮಾನ್ಯ ಕೋನ]

$\therefore \Delta ADE \sim \Delta ABC$ [ಬಾ ಕೋ ಬಾ ಸಿದ್ಧಾಂತದಂತೆ)


ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC PHYSICS

CURRENT ELECTRICITY

6. Determine the current in each branch.



(....Contd)

Soln:- Applying Kirchhoff's second law to closed loop ABCA

$-4I_2 - 2(I_2 + I_3) - I_1 + 10 = 0$

(or) $-I_1 - 6I_2 - 2I_3 + 10 = 0$

(or) $I_1 + 6I_2 + 2I_3 = 10$ ....*(i)*

Applying Kirchhoff's second law to closed loop ADCA

$-4(I_1 - I_2) - 2(I_2 + I_3 - I_1) - I_1 + 10 = 0$

(or) $-7I_1 + 6I_2 + 2I_3 + 10 = 0$

(or) $7I_1 - 6I_2 - 2I_3 = 10$ ....*(ii)*

Also Applying Kirchhoff's second law to closed loop BCDEB

$-2(I_1 + I_3) - 2(I_2 + I_3 - I_1) + 5 = 0$

(or) $2I_1 - 4I_2 - 4I_3 + 5 = 0$

(or) $-2I_1 + 4I_2 + 4I_3 = 5$ ....*(iii)*

Adding eqns. *(i)* and *(ii)*, we get

$8I_1 = 20$ (or) $I_1 = \frac{5}{2}A = 2.5A$

Multiplying eqn. *(i)* by 2 and subtracting it from eqn. *(iii)*, $4I_1 + 8I_2 = 15$ (or)

$I_2 = \frac{15 - 4I_1}{8} = \frac{15 - 10}{8} = \frac{5}{8}A$

Putting values of I_1 and I_2 in eqn. (i), we get

$2.5 + 6 \times \frac{5}{8} + 2I_3 = 10$

$2I_3 = 10 - \frac{25}{4} = \frac{15}{4}$

$\Rightarrow I_3 = \frac{15}{8}A$

Thus, current in arm AC = 2.5 A

Current in arm AB $= \frac{5}{8}A$

Current in arm DEB $= \frac{15}{8}A$

Current in arm AD $= 2.5 - \frac{5}{8}$


$= \frac{15}{8}A$

Current in arm BC $= \frac{5}{8} + \frac{15}{8} = \frac{5}{2}$

$= 2.5A$

Current in arm CD $= \frac{5}{8} + \frac{15}{8} - 2.5 = 0$

7. Two parallel resistances 4 Ω and 8 Ω are connected with a known resistance of 6 ohm as shown in figure. Where is the balance point on the wire of the meter bridge?



Soln:- Here, $R = 6$

Resistance S is the combination of two parallel resistances 4 Ω and 8 Ω.

$\therefore \frac{1}{S} = \frac{1}{4} + \frac{1}{8} = \frac{2+1}{8} = \frac{3}{8}$

(or) $S = \frac{8}{3}$ ohm

Let the balance point be at A on the wire at a distance l from O

Now $\frac{R}{S} = \frac{l}{(100 - l)}$

$(or)\ \frac{6 \times 3}{8} = \frac{l}{(100 - l)}$

$\therefore 18(100 - l) = 8l$

$1800 - 18l = 8l$

$(or)\ 26l = 1800$

$(or)\ l = \frac{1800}{26} = 69.2\,cm$

8. A wire of length 1.1 m and radius 7×10^{-5} m is connected across the right gap of a meter bridge. When a resistance of 45 ohm is introduced in the left gap from a resistance box connected across it, the balance point is obtained at 0.6 m from the left side. Find the specific resistance of the material of the wire.

Soln:- Here, R = 45 ohm

$l = 0.6\,m = 60\,cm$

The resistance connected across the right gap is

$S = \left(\frac{100 - l}{l}\right)R$

$= \left(\frac{100 - 60}{60}\right)45 = \frac{40}{60} \times 45 = 30\ ohm$

But, $R = \rho\frac{l}{A} = \rho\frac{l}{\pi r^2}$


$\therefore \rho = \frac{R \times \pi r^2}{l}$

Here, $R = S$

$\therefore \rho = \frac{S \times \pi r^2}{l} = \frac{30 \times 3.14(7 \times 10^{-5})}{1.1}$

$= 4198 \times 10^{-10} = 4.198 \times 10^{-7}\ ohm\ m$

9. Find equivalent resistance of the network shown in fig between the points *a* & *b*.



(Contd........)

ರಾಷ್ಟ್ರೀಯ – ರಾಜ್ಯ ಧಾರ್ಮಿಕ ಪರಿಷತ್ ಸ್ಥಾಪನೆಗೆ ವಿಶ್ವ ಹಿಂದೂ ಪರಿಷತ್ ಧರ್ಮಾಗ್ರಹ ಸಭೆ ಆಗ್ರಹ

‘ತಿರುಪತಿ: ದೇಸಿ ಗೋಶಾಲೆ ತೆರೆಯಿರಿ’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ದನದ ಕೊಬ್ಬು ಮತ್ತು ಮೀನಿನ ಎಣ್ಣೆ ಬೆರೆಸಿರುವ ತುಪ್ಪ ಬಳಸಿ ತಯಾರಿಸಿದ ಲಾಡು ದೇವರಿಗೆ ಅರ್ಪಿಸಿದ ತಿರುಪತಿ ದೇವಸ್ಥಾನದಲ್ಲಿ ದೇಸಿ ಹಸುಗಳ ಗೋಶಾಲೆ ತೆರೆಯಬೇಕು’ ಎಂದು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಆಗ್ರಹಿಸಿದೆ.

ನಗರದ ಡೊಂಗರಕೇರಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಸೋಮವಾರ ನಡೆದ ಧರ್ಮಾಗ್ರಹ ಸಭೆಯಲ್ಲಿ ಈ ಕುರಿತ ನಿರ್ಣಯ ಕೈಗೊಳ್ಳಲಾಯಿತು.

‘ದೇವಸ್ಥಾನವನ್ನು ಅಪವಿತ್ರ ಗೊಳಿಸಿದ ಮತ್ತು ಹಿಂದುಗಳ ಧಾರ್ಮಿಕ ಭಾವನೆಗೆ ಧಕ್ಕೆ ತಂದಿರುವವರಿಗೆ ಕಠಿಣ ಶಿಕ್ಷೆ ನೀಡಬೇಕು. ಪ್ರಕರಣವನ್ನು ಸಿಬಿಐ ತನಿಖೆಗೆ ಒಳಪಡಿಸಬೇಕು' ಎಂದು ಸಭೆ ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರನ್ನು ಒತ್ತಾಯಿಸಿತು.

ದೇವಸ್ಥಾನಕ್ಕೆ ಅಗತ್ಯವಿರುವ ತುಪ್ಪವನ್ನು ದೇವಸ್ಥಾನ ಟ್ರಸ್ಟ್ ವತಿಯಿಂದಲೇ ತಯಾರಿಸಬೇಕು. ಅದಕ್ಕಾಗಿ 25 ಸಾವಿರ ದೇಸಿ ಹಸುಗಳನ್ನು ಸಾಕಲು ತಿರುಪತಿ ತಿರುಮಲ ದೇವಸ್ಥಾನ ಟ್ರಸ್ಟ್ ಮುಂದಾಗಬೇಕು. ದೇಶದ ಇತರ ದೇವಸ್ಥಾನಗಳಲ್ಲೂ ತುಪ್ಪಕ್ಕಾಗಿ ದೇಸಿ ದನಗಳ ಗೋಶಾಲೆ ಆರಂಭಿಸಬೇಕು ಎಂದು ಒತ್ತಾಯಿಸಲಾಯಿತು.

ದೇವಸ್ಥಾನಗಳು ಸರ್ಕಾರ ಮತ್ತು ರಾಜಕಾರಣಿಗಳ ಹಿಡಿತದಲ್ಲಿ ಇರುವುದರಿಂದ ಅಪವಿತ್ರ ಆಗುತ್ತಿವೆ. ದೇಶದ ಎಲ್ಲ ದೇವಸ್ಥಾನಗಳನ್ನು ಹಿಂದೂ ಸಮಾಜಕ್ಕೆ ಹಸ್ತಾಂತರ ಮಾಡಬೇಕು. ಅದಕ್ಕಾಗಿ ರಾಷ್ಟ್ರೀಯ ಮತ್ತು ರಾಜ್ಯ ಧಾರ್ಮಿಕ ಪರಿಷತ್ ಸ್ಥಾಪಿಸಬೇಕು ಎಂದು ಸಭೆ ಆಗ್ರಹಿಸಿತು.

ದೀಪಕ್ಕೆ ಹಾಕುವ ಎಳ್ಳೆಣ್ಣೆ, ದೀಪದ ಎಣ್ಣೆ ಮತ್ತು ತೆಂಗಿನ ಎಣ್ಣೆಯಲ್ಲೂ ಕಲಬೆರಕೆ ಇರುವುದು ಕಂಡುಬಂದಿದೆ. ಎಲ್ಲ ದೇವಸ್ಥಾನಗಳಲ್ಲಿ ಪರಿಶುದ್ಧ ಎಣ್ಣೆಯನ್ನೇ ಬಳಸಬೇಕು ಎಂದು ಆಗ್ರಹಿಸಲಾಯಿತು.



ಧರ್ಮಾಗ್ರಹ ಸಭೆಯಲ್ಲಿ ಒಡಿಯೂರು ಮಠದ ಗುರುದೇವಾನಂದ ಸ್ವಾಮೀಜಿ, ಮಾಣಿಲ ಶ್ರೀಧಾಮದ ಮೋಹನದಾಸ ಪರಮಹಂಸ ಸ್ವಾಮೀಜಿ, ಮಂಗಳೂರು ಓಂ ಶ್ರೀ ಮಠದ ವಿದ್ಯಾನಂದ ಸರಸ್ವತಿ ಸ್ವಾಮೀಜಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಲ್ಲಡ್ಕ ಪ್ರಭಾಕರ ಭಟ್, ವಿಎಚ್‌ಪಿಯ ಎಚ್‌.ಕೆ.ಪುರುಷೋತ್ತಮ, ಎಂ.ಬಿ.ಪುರಾಣಿಕ್ ಮತ್ತಿತರರು ಪಾಲ್ಗೊಂಡಿದ್ದರು

‘ರಾಕ್ಷಸಿ ಪ್ರವೃತ್ತಿಯವರಿಂದ ಮಹಿಷ ಪೂಜೆ’

‘ಮನುಷ್ಯರು ರಾಕ್ಷಸರ ಪೂಜೆ ಮಾಡುವುದಿಲ್ಲ. ಮೈಸೂರಿನಲ್ಲಿ ಮಹಿಷ ದಸರಾ ಆಚರಿಸುವವರು ರಾಕ್ಷಸಿ ಪ್ರವೃತ್ತಿಯವರು. ಆದ್ದರಿಂದ ಅವರು ಮಹಿಷನನ್ನು ಪೂಜಿಸುತ್ತಾರೆ’ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ದೂರಿದರು.

ನಗರದಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ‘ಮಹಿಷ ದಸರಾ ಆಚರಣೆಯ ಮುಂದಾಳತ್ವ ವಹಿಸಿದ್ದ ಪ್ರೊ.ಭಗವಾನ್ ಹಿಂದಿನಿಂದಲೇ ಇಂಥ ಹುಚ್ಚಾಟಗಳನ್ನು ಮಾಡುತ್ತ ಬಂದಿದ್ದಾರೆ. ಹುಚ್ಚು ಹುಚ್ಚು ಮಾತನಾಡುವ ಅವರ ಪೂರ್ವಾಪರ ಯಾರಿಗೂ ಗೊತ್ತಿಲ್ಲ. ಭಗವಾನ್ ಎಂದು ಹೆಸರಿಟ್ಟುಕೊಂಡಿದ್ದರೂ ಅವರ ಚಿಂತನೆ ರಾಕ್ಷಸರದ್ದು. ರಾಕ್ಷಸರು ಬೇಗ ನಾಶವಾಗಿ ಸಜ್ಜನರು ಉಳಿಯುತ್ತಾರೆ’ ಎಂದರು.

‘ಸಾವಿರಾರು ವರ್ಷಗಳ ಹಿಂದೆ ಹಿಂದೂಗಳ ಅಧೀನದಲ್ಲಿದ್ದ ದೇವಸ್ಥಾನಗಳ ಆದಾಯ ಕೊಳ್ಳೆ ಹೊಡೆಯುವುದಕ್ಕಾಗಿ ಬ್ರಿಟಿಷರು ಅವುಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಈಗ ಸರ್ಕಾರದ ವಶದಲ್ಲಿವೆ. ಮುಸ್ಲಿಮರು ಮತ್ತು ಕ್ರೈಸ್ತರು ತಮ್ಮ ಪ್ರಾರ್ಥನಾಲಯಗಳನ್ನು ತಾವೇ ನಡೆಸುವಂತೆ ದೇವಾಲಯಗಳನ್ನು ಹಿಂದೂಗಳ ಆಧೀನಕ್ಕೆ ಕೊಡಬೇಕು. ಈ ಒತ್ತಾಯಕ್ಕೆ ಸ್ಪಂದಿಸದೇ ಇದ್ದರೆ ಹೋರಾಟ ಪ್ರಾರಂಭಿಸಲಾಗುವುದು ಎಂದರು.

ಹಾಸನಾಂಬ ಜಾತ್ರೆ: ಇಸ್ಕಾನ್ ಉಸ್ತುವಾರಿಯಲ್ಲಿ ಲಾಡು ತಯಾರಿ

ಪ್ರಜಾವಾಣಿ ವಾರ್ತೆ

ಹಾಸನ: ‘ಹಾಸನಾಂಬ ಹಾಗೂ ಸಿದ್ದೇಶ್ವರ ಜಾತ್ರಾ ಮಹೋತ್ಸವ ಅಕ್ಟೋಬರ್ 24ರಿಂದ ಆರಂಭವಾಗಲಿದ್ದು, ಈ ಬಾರಿ ಇಸ್ಕಾನ್ ಉಸ್ತುವಾರಿಯಲ್ಲಿ ಲಾಡು ಪ್ರಸಾದ ತಯಾರಿಸಿ ವಿತರಿಸಲಾಗುವುದು’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ತಿಳಿಸಿದರು.

ಸೋಮವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ‘ಈ ಬಾರಿ ವಿಶೇಷ ದರ್ಶನದ ₹1 ಸಾವಿರ ಬೆಲೆಯ ಪಾಸ್‌ಗೆ ಎರಡು ಹಾಗೂ ₹300ರ ಪಾಸ್‌ಗೆ ಒಂದು ಲಾಡು ನೀಡಲು ನಿರ್ಧರಿಸಲಾಗಿದೆ’ ಎಂದು ಹೇಳಿದರು.

‘ಈ ಬಾರಿ ಒಂಬತ್ತು ದಿನ ದರ್ಶನೋತ್ಸವ ಇರಲಿದ್ದು, ದಿನದ 24 ಗಂಟೆಯೂ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುವುದು. ಧಾರ್ಮಿಕ ಆಚರಣೆಗಳಿಗೆ ಧಕ್ಕೆಯಾಗದಂತೆ ಪೂಜಾ ಸಮಯ ಕಡಿಮೆ ಮಾಡುವಂತೆ ಅರ್ಚಕರನ್ನು ಕೋರಲಾಗುವುದು’ ಎಂದರು.

‘ಪ್ರತಿ ಭಕ್ತರಿಗೂ ದೊನ್ನೆ ಪ್ರಸಾದ ನೀಡಲಿದ್ದು, ಪ್ರತಿ ಮೂರು ಗಂಟೆಗೊಮ್ಮೆ ಪ್ರಸಾದ ಬದಲಿಸಲಾಗುವುದು. ಪುಳಿಯೋಗರೆ, ಪುಲಾವ್, ಪೊಂಗಲ್ ಸೇರಿದಂತೆ ವಿವಿಧ ಬಗೆಯ ಪ್ರಸಾದ ವಿತರಣೆಗೆ ಕ್ರಮ ಕೈಗೊಳ್ಳಲಾಗಿದೆ’ ಎಂದು ದೇವಸ್ಥಾನದ ಆಡಳಿತಾಧಿಕಾರಿಯೂ ಆದ ಉಪ ವಿಭಾಗಾಧಿಕಾರಿ ಮಾರುತಿ ತಿಳಿಸಿದರು.

ಇಡಗುಂಜಿ ಮಹಾಗಣಪತಿ ಯಕ್ಷಗಾನ ಮೇಳಕ್ಕೆ ವಿಶ್ವಸಂಸ್ಥೆ ಮಾನ್ಯತೆ

ಹೊನ್ನಾವರ (ಉತ್ತರ ಕನ್ನಡ ಜಿಲ್ಲೆ): 1934ರಲ್ಲಿ ಸ್ಥಾಪನೆಗೊಂಡ ‘ಇಡಗುಂಜಿ ಮಹಾಗಣಪತಿ ಯಕ್ಷಗಾನ ಮೇಳ’ಕ್ಕೆ ವಿಶ್ವಸಂಸ್ಥೆ ಮಾನ್ಯತೆ ದೊರೆತಿದೆ. ಮಾನ್ಯತೆ ಪಡೆದ ಜಗತ್ತಿನ 58 ರಾಷ್ಟ್ರೀಯ ಸಂಸ್ಥೆಗಳ ಪಟ್ಟಿಯಲ್ಲಿ ಇಡಗುಂಜಿ ಯಕ್ಷಗಾನ ಮಂಡಳಿ ಕೂಡ ಒಂದು.

‘ಯಕ್ಷಗಾನ ಪರಂಪರೆ, ಕಲಾ ಪ್ರಕಾರವನ್ನು ಬೆಳೆಸುವ ನಿಟ್ಟಿನಲ್ಲಿ ಮಂಡಳಿಯ ಕೊಡುಗೆ, ಯಕ್ಷಗಾನ ಕಲೆಯ ಪ್ರಚಾರ, ದಾಖಲಾತಿ ಮೊದಲಾದ ಅಂಶಗಳನ್ನು ಪರಿಗಣಿಸಿ ವಿಶ್ವಸಂಸ್ಥೆ ಮಾನ್ಯತೆ ನೀಡಿದೆ. ಯಕ್ಷಗಾನ ಪ್ರದರ್ಶನ, ತರಬೇತಿ ಕಾರ್ಯಾಗಾರ, ಪ್ರತಿ ವರ್ಷ ರಾಷ್ಟ್ರೀಯ ನಾಟ್ಯೋತ್ಸವ ಸಂಘಟನೆ ಮೊದಲಾದ ಕಾರ್ಯಗಳನ್ನು 90 ವರ್ಷಗಳಿಂದ ಮಂಡಳಿ ಮುನ್ನಡೆಸಿದೆ. ವಿಶ್ವ ಸಂಸ್ಥೆಯ ಮಾನ್ಯತೆ ಮಂಡಳಿಯ ಕಾರ್ಯಕ್ಕೆ ಇನ್ನಷ್ಟು ನೈತಿಕ ಬಲ ನೀಡಿದೆ’ ಎಂದು ಮಂಡಳಿಯ ನಿರ್ದೇಶಕ ಕೆರೆಮನೆ ಶಿವಾನಂದ ಹೆಗಡೆ ತಿಳಿಸಿದ್ದಾರೆ.

ಆಳ್ವಾಸ್ ವಿರಾಸತ್ ಡಿ.10ರಿಂದ

ಪ್ರಜಾವಾಣಿ ವಾರ್ತೆ

ಮೂಡುಬಿದಿರೆ (ದಕ್ಷಿಣ ಕನ್ನಡ): ಇಲ್ಲಿನ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ ನಡೆಸುವ ರಾಷ್ಟ್ರೀಯ ಸಾಂಸ್ಕೃತಿಕ ಉತ್ಸವ ‘ಆಳ್ವಾಸ್ ವಿರಾಸತ್’ ಈ ಬಾರಿ ಡಿ.10ರಿಂದ 15ರವರೆಗೆ ವಿದ್ಯಾಗಿರಿಯಲ್ಲಿ ನಡೆಯಲಿದೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ವರ್ಷದ ಆಳ್ವಾಸ್ ವಿರಾಸತ್ 30ನೇ ವರ್ಷದ ಕಾರ್ಯಕ್ರಮ. ಈ ಕಾರಣದಿಂದ ಅಪೂರ್ವ ಮತ್ತು ವೈಭವದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಿಸಿ ಸಂಸ್ಕೃತಿ ಪ್ರಿಯರಿಗೆ ರಸದೌತಣವನ್ನು ನೀಡಲು ಯೋಚಿಸಲಾಗಿದೆ. 6 ದಿನಗಳ ಕಾರ್ಯಕ್ರಮಗಳಲ್ಲಿ ಮೊದಲ 5 ದಿನ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಆಹಾರೋತ್ಸವ, ಕರಕುಶಲ ವಸ್ತುಗಳ ಪ್ರದರ್ಶನ ಇರಲಿದೆ. ಡಿ.15ರಂದು ವಸ್ತು ಪ್ರದರ್ಶನ ಮಾತ್ರ ನಡೆಯಲಿದೆ. ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ ಎಂದು ಅವರು ತಿಳಿಸಿದರು.

ಕೃಷಿ ಹೊಂಡದಲ್ಲಿ ಮುಳುಗಿ ಇಬ್ಬರು ಬಾಲಕಿಯರ ಸಾವು

ಜಗಳೂರು (ದಾವಣಗೆರೆ ವರದಿ): ತಾಲ್ಲೂಕಿನ ಅಸಗೋಡು ವಡ್ಡರಹಟ್ಟಿ ಗ್ರಾಮದಲ್ಲಿ ಸೋಮವಾರ ಜಮೀನಿನಲ್ಲಿ ಆಟವಾಡುತ್ತಿದ್ದ ಇಬ್ಬರು ಬಾಲಕಿಯರು ಕೃಷಿ ಹೊಂಡದಲ್ಲಿ ಮುಳುಗಿ ಮೃತಪಟ್ಟಿದ್ದು, ಮತ್ತೊಬ್ಬ ಬಾಲಕಿಯನ್ನು ರಕ್ಷಿಸಲಾಗಿದೆ.

ಗ್ರಾಮದ ಕೂಲಿ ಕಾರ್ಮಿಕರಾದ ತಿಮ್ಮಪ್ಪ ಅವರ ಪುತ್ರಿ ತನುಜಾ (11), ರಾಮಚಂದ್ರಪ್ಪ ಅವರ ಪುತ್ರಿ ಗಂಗೋತ್ರಿ (11) ಮೃತಪಟ್ಟವರು. ಮತ್ತೊಬ್ಬ ಬಾಲಕಿ ಖುಷಿ ನೀರಲ್ಲಿ ಮುಳುಗುತ್ತಿದ್ದಾಗ ಗ್ರಾಮಸ್ಥರು ರಕ್ಷಿಸಿದ್ದಾರೆ.

ಶಾಲೆಯಿಂದ ಮನೆಗೆ ಮರಳಿದ್ದ ಈ ಬಾಲಕಿಯರು ಸಮೀಪದಲ್ಲೇ ಇದ್ದ ಜಮೀನೊಂದರಲ್ಲಿನ ಕೃಷಿ ಹೊಂಡದಲ್ಲಿ ಆಟವಾಡಲು ತೆರಳಿದ್ದರು. ಕೃಷಿ ಹೊಂಡ ಭರ್ತಿಯಾಗಿತ್ತು. ಕೃಷಿ ಹೊಂಡದ ಮೇಲೆ ಕುಳಿತು ಆಟ ಆಡುತ್ತಿದ್ದಾಗ ಕಾಲು ಜಾರಿ ಮೂವರೂ ನೀರಲ್ಲಿ ಬಿದ್ದಿದ್ದಾರೆ.

ಮಕ್ಕಳು ಕಿರುಚಿದಾಗ ಕೆರೆಯತ್ತ ಧಾವಿಸಿದ ಗ್ರಾಮಸ್ಥರು ಒಬ್ಬಳನ್ನು ಮಾತ್ರ ರಕ್ಷಿಸಿದ್ದಾರೆ. ಅಷ್ಟು ಹೊತ್ತಿಗಾಗಲೇ ಇಬ್ಬರು ಬಾಲಕಿಯರು ನೀರಿನಲ್ಲಿ ಮುಳುಗಿದ್ದರು. ಪಾಲಕರು ಹೊಟ್ಟೆಪಾಡಿಗಾಗಿ ಗುಳೆ ಹೋಗಿದ್ದರಿಂದ ಈ ಬಾಲಕಿಯರು ಸಂಬಂಧಿಕರ ಮನೆಯಲ್ಲಿ ಇದ್ದರು.

ಕರ್ನಾಟಕದಲ್ಲಿ ಒಳ ಮೀಸಲಾತಿಯ ಸಮಸ್ಯೆಯು ಎಡ - ಬಲದ ಎರಡು ಪ್ರಬಲ ಜಾತಿಗಳಿಂದ ಆಗಿದೆ. ವರ್ಗೀಕರಣದ ಹಂಚಿಕೆಯಲ್ಲಿ ಹೆಚ್ಚು ಚೌಕಾಸಿಗೆ ಆಸ್ಪದ ಮಾಡಿಕೊಡದೆ, ತಮಗಿಂತಲೂ ತಳದಲ್ಲಿರುವ ಜಾತಿಗಳು ಮೇಲೆ ಬರಲಿ ಎಂಬ ಸದಾಶಯದಿಂದ ನೋಡಬೇಕು

ಉಣ್ಣುವ ತಟ್ಟೆಗಳು ಬೇರೆ ಆಗಿರಬಹುದು; ಮನೆಗಳಲ್ಲ

• ಪ್ರೊ.ಅರವಿಂದ ಮಾಲಗತ್ತಿ

ಮೀಸಲಾತಿ ಎನ್ನುವುದು ಹರಿಯುವ ನೀರಿನಂತಿರಬೇಕು. ತಗ್ಗುಗಳು ಬಂದಾಗ ಹರಿವ ಕ್ರಿಯೆ ನಿಂತಿದೆಯೆನಿಸಿದರೂ, ತುಂಬಿದಾಗ ಮತ್ತೆ ಹರಿಯುತ್ತದೆ. ಇದು ಸೃಷ್ಟಿಯಲ್ಲಿ ಸಹಜ ಪ್ರಕ್ರಿಯೆ. ನಿಂತ ನೀರಿನಲ್ಲಿ ಜೊಂಡು, ಕ್ರಿಮಿ, ಕೀಟಗಳು ಹುಟ್ಟಿ ನೀರು ಕುಡಿಯದಂತಾಗುತ್ತದೆ. ಆ ನೀರಿಗೆ ದಾರಿ ಮಾಡಿಕೊಟ್ಟರೆ ಮತ್ತೆ ಶುಭ್ರವಾಗಿ ಹರಿಯುತ್ತದೆ. ಸುಪ್ರೀಂ ಕೋರ್ಟ್‌ನ ಒಳ ಮೀಸಲಾತಿಯ ತೀರ್ಪು ಜೊಂಡುಗಟ್ಟಬಹುದಾಗಿದ್ದ ನೀರನ್ನು ಮತ್ತೆ ಹರಿಯುವಂತೆ ಮಾಡಿದೆ.



ಇಲ್ಲಿಗೆ ಒಳ ಮೀಸಲಾತಿಯ ಸಮಸ್ಯೆಗಳು ತೀರಿದವು ಎಂದರ್ಥವಲ್ಲ. ನಿಜವಾದ ಸಮಸ್ಯೆ ಮುಂದಿನ ವರ್ಗೀಕರಣದ ಪ್ರಕ್ರಿಯೆಯಲ್ಲಿದೆ. ರಾಜ್ಯ ಸರ್ಕಾರ - ರಾಜಕಾರಣಿಗಳ ನಡುವೆ ಹಾಗೂ ಫಲಾನುಭವಿಗಳ ನಡುವೆ ನಡೆವ ಚರ್ಚೆ ರಂಗೇರಬಹುದಾದರೂ ಇದಕ್ಕೆ ಸ್ವಯಂಕೃತ ಕಡಿವಾಣ ಅಗತ್ಯ. ಇಲ್ಲವಾದಲ್ಲಿ ನಮ್ಮ ವಿರುದ್ಧ ನಾವೇ ಹೋರಾಟಕ್ಕಿಳಿದಂತಾಗುತ್ತದೆ. ನಮ್ಮ ವಿವೇಚನೆಯೇ ನಮ್ಮನ್ನು ಕಾಯುವ ಕಾಲವಿದು.

ಮೊದಲನೆಯದಾಗಿ, ಒಳ ಮೀಸಲಾತಿಯನ್ನು ಸುಪ್ರೀಂ ಕೋರ್ಟ್ ಮಾನ್ಯ ಮಾಡಿದ್ದಕ್ಕೆ ಹಾಗೂ ವರ್ಗೀಕರಣ ಮಾಡಲು ರಾಜ್ಯ ಸರ್ಕಾರಗಳಿಗೆ ಅಧಿಕಾರವಿದೆ ಎಂದು ಹೇಳಿದ್ದಕ್ಕೆ ನಾವು ಒಮ್ಮತದಿಂದ ಸಂಭ್ರಮಿಸಬೇಕು. ಕರ್ನಾಟಕ ಸರ್ಕಾರ ಒಳ ಮೀಸಲಾತಿಯ ಹಂಚಿಕೆಗೆ ಬದ್ಧವಿರುವುದಾಗಿ ಹೇಳಿದ್ದು, ಅದಕ್ಕೆ ಸ್ವಲ್ಪ ಸಮಯ ಬೇಕಾಗಬಹುದು.

ಒಳ ಮೀಸಲಾತಿಯ ವರ್ಗೀಕರಣದ ವಿಧಾನಕ್ಕೆ ಸಂಬಂಧಿಸಿ ಭಿನ್ನಾಭಿಪ್ರಾಯಗಳೇಳುತ್ತವೆ. ಈಗಾಗಲೇ ಕಾಂಗ್ರೆಸ್ ಸರ್ಕಾರದ ಮಾದರಿ ಹಾಗೂ ಬಿಜೆಪಿ ಸರ್ಕಾರದ ಮಾದರಿಗಳಿದ್ದು, ಅವು ಅಧಿಕೃತವಾಗಿ ಸಂಯಮದ ಚರ್ಚೆಗೆ ಒಳಗಾಗಬೇಕು. ಅದಕ್ಕಾಗಿ ಹಳೆಯ ಗಾಯಗಳನ್ನು ಕಿತ್ತು ಹೊಸ ಗಾಯಗಳನ್ನು ಮಾಡಿಕೊಳ್ಳುವುದರಲ್ಲಿ ಅರ್ಥವಿಲ್ಲ. ಮತ್ತೊಂದು ಸಂಗತಿ ಎಂದರೆ, ಈಗಾಗಲೇ ಪರಿಶಿಷ್ಟ ಜಾತಿಯಲ್ಲಿರುವ ಅಸ್ಪೃಶ್ಯ ಮತ್ತು ಸ್ಪೃಶ್ಯ ಸಮುದಾಯವೆಂದು ಭೇದಗಳನ್ನು ಮಾಡುತ್ತಾ ಬಿರುಕನ್ನು ದೊಡ್ಡದಾಗಿಸುವುದಕ್ಕಿಂತ ಇಬ್ಬರೂ ಸಂಯಮದ ವಿವೇಚನೆಯಿಂದ ನಡೆದುಕೊಳ್ಳಬೇಕು.

ಸಮಾಜದ ಕಟ್ಟ ಕಡೆಯ ವ್ಯಕ್ತಿಯೂ ಫಲಾನುಭವಿಯಾಗಬೇಕೆಂಬುದೇ ಒಳ ಮೀಸಲಾತಿಯ ಮೂಲಭೂತ ಆಶಯ. ಹೀಗಾಗಿ, 'ಪರಿಶಿಷ್ಟ ಜಾತಿಯ ಒಳಗಿರುವ ಬಲಿಷ್ಠ ಜಾತಿಗಳೂ ಸಂಯಮ ಹಾಗೂ ಔದಾರ್ಯದಿಂದ, ಸಮಗ್ರ ಜಾತಿ ಸಮುದಾಯಗಳನ್ನು ಮುಂದೆ ಕರೆದೊಯ್ಯುವ ಜವಾಬ್ದಾರಿ ನಮ್ಮ ಮೇಲಿದೆ' ಎಂಬ ಅರಿವು ತಂದುಕೊಳ್ಳಬೇಕು.


ಜಾತಿ, ಜನಸಂಖ್ಯೆ ಹಾಗೂ ಹಿಂದುಳಿಯುವಿಕೆಯ ಆಧಾರದ ಮೇಲೆ ವರ್ಗೀಕರಣ ಅನಿವಾರ್ಯ. ಆದರೆ, ಇಲ್ಲಿ ಹಿಂದುಳಿಯುವಿಕೆಯ ಆಧಾರಕ್ಕೆ ಆದ್ಯತೆ ಕೊಡಬೇಕು. ಹೀಗಾದಲ್ಲಿ ಒಳ ಮೀಸಲಾತಿಯ ಮೂಲ ಆಶಯ ಈಡೇರುತ್ತದೆ ಮತ್ತು ದ್ವೇಷಾಸೂಯೆಗಳನ್ನು ಮರೆತು ಸಮಗ್ರ ಸಮುದಾಯಗಳಲ್ಲಿ ಐಕ್ಯತೆ ಮೂಡಿಸಲು ಸಾಧ್ಯ.

ಒಳ ಮೀಸಲಾತಿಯ ಸಮೂಹಗಳನ್ನಾಗಿ ವರ್ಗೀಕರಿಸಿದ ಜಾತಿಗಳ ಪಟ್ಟಿಯ ಸಂಖ್ಯೆಯಲ್ಲಿ ತೆಗೆಯುವ, ಸೇರಿಸುವ ಕ್ರಿಯೆಯಾಗಬಹುದು ಅಥವಾ ಸಮೂಹಗಳಿಗೆ ನಿಗದಿಪಡಿಸಿದ ಶೇಕಡಾವಾರು ಮೀಸಲಿನ ಸಂಖ್ಯೆಯಲ್ಲಿ ವ್ಯತ್ಯಾಸಗಳಾಗಬಹುದು. ನಮಗೆ ಒಳ ವರ್ಗೀಕರಣವೇ ದೊಡ್ಡ ಸಮಸ್ಯೆಯಾಗಬಾರದು. ಅದಕ್ಕಿಂತಲೂ ದೊಡ್ಡ ಸಮಸ್ಯೆಗಳು ನಮ್ಮ ಮುಂದಿರುವುದರಿಂದ, ಮುಂದಿನ ಹೋರಾಟಗಳಿಗೆ ಇದು ಸಕಾರಾತ್ಮಕವಾಗಿ ಕೆಲಸ ಮಾಡಲು ಸಾಧ್ಯವಾಗುವಂತಿರಬೇಕು. ತಳಜಾತಿಗಳಲ್ಲಿ ರಾಜಕೀಯ ಅರಿವನ್ನು ತುಂಬಿ ಪರಸ್ಪರ ಸಹಕಾರದೊಂದಿಗೆ ಆಯಾ ಕ್ಷೇತ್ರಗಳಲ್ಲಿ ಹೋರಾಡುವ ಸಂಯುಕ್ತವಾದ ಬಾಳಿಗೆ ನಾವು ಹೊಸ ಮುನ್ನುಡಿ ಬರೆಯಬೇಕು.

ಒಳ ಮೀಸಲಿನ ಒಡಲಾಳ

ಗ್ರಾಮೀಣ ವ್ಯವಸ್ಥೆಯಲ್ಲಿ ಜಾತಿಯ ಗೋಡೆಗಳನ್ನು ದಾಟುವ ಕ್ರಿಯೆ ಅಧಿಕೃತವಾಗಿ ಪರಿಶಿಷ್ಟ ಜಾತಿಗಳಲ್ಲಿ ನಡೆಯಲಿಲ್ಲ ಮತ್ತು ಭಾವನಾತ್ಮಕ ಸಂಬಂಧಗಳು ಮೀರಿ ಬೆಳೆಯದೆ ಹೋದವು. ದಲಿತ ಸಂಘಟನೆಗಳು ಒಡೆದ ಕನ್ನಡಿಯಾದಾಗ ಜಾತಿ ಸಂಘಟನೆಗಳು ತಲೆಯೆತ್ತಿದವು. ಹೀಗಾಗಿ 'ದಲಿತರಲ್ಲಿಯ ಅಖಂಡತ್ವ ಒಡೆಯುತ್ತದೆ' ಎನ್ನುವುದು ಕೇವಲ ಗ್ರಹಿಕೆಯಾಗಿತ್ತು ಎನಿಸುತ್ತದೆ.

ಒಳ ವರ್ಗೀಕರಣದಿಂದ ಊಟದ ತಟ್ಟೆಗಳು ಬೇರೆಯಾಗಬಹುದೇ ವಿನಾ ಮನೆಯೇ ಒಡೆದಿದೆ ಎಂದರ್ಥವಲ್ಲ. ಜಾತಿಯ ಗೋಡೆಗಳು ನಮ್ಮ ನಡುವೆ ಜೀವಂತವಾಗಿವೆ. ಸುಪ್ರೀಂ ಕೋರ್ಟ್ ಇದನ್ನೇ ಇನ್ನೊಂದು ಪರಿಭಾಷೆಯಲ್ಲಿ ಹೇಳಿದೆ. ಹೀಗಿದ್ದಾಗಲೂ ನಾವೆಲ್ಲ ಅಸ್ಪೃಶ್ಯರು, ಶೋಷಿತರಾಗಿದ್ದು 'ಮೀಸಲಾತಿ'ಯೇ ಮಂತ್ರದಂಡವಾಗಿಸಿ ಏಕತೆಯ ಸೂತ್ರವನ್ನಾಗಿಸಿಕೊಂಡಿದ್ದೆವು. ಈಗಲೂ ಆ ಸೂತ್ರವನ್ನೇ ಮುಂದಿಟ್ಟುಕೊಳ್ಳಬೇಕು. ಭ್ರಾತೃತ್ವ ಭಾವದ ಐಕ್ಯತೆಯನ್ನು ಮತ್ತಷ್ಟು ಗಟ್ಟಿ ಮಾಡಿಕೊಳ್ಳಲು ಅವಕಾಶಗಳಿವೆ. ವರ್ಗೀಕರಣದ ಸಂದರ್ಭದಲ್ಲಿ ನಾವು ಹೇಗೆ ವರ್ತಿಸುತ್ತೇವೆ ಎಂಬುದನ್ನು ಇದು ಅವಲಂಬಿಸಿದೆ.



ಸುಪ್ರೀಂ ಕೋರ್ಟ್‌ನ ತೀರ್ಪಿನ ಅನ್ವಯ 'ಕೆನೆಪದರ'ದ ಪ್ರಶ್ನೆ, ಒಳ ಮೀಸಲಾತಿಯ ಹಂಚಿಕೆಗೆ ಮೂಲಭೂತವಾಗಿ ಬಾಧಕವಾಗಿಲ್ಲ. ಹೀಗಾಗಿ, ಇಂದಿನ ಸಂದರ್ಭದಲ್ಲಿ ಕೆನೆಪದರದ ಪ್ರಶ್ನೆ ಹಿಂದುಳಿಯುತ್ತದೆ. ಮೇಲಾಗಿ ಪರಿಶಿಷ್ಟ ವರ್ಗದಲ್ಲಿ ಕೆನೆಪದರಿಗಿಂತ; ನೊರೆಪದರ ಅಧಿಕವಾಗಿದೆ ಎನ್ನುವ ಅರಿವು ನಮ್ಮಲ್ಲಿರಬೇಕು.

ಕರ್ನಾಟಕದಲ್ಲಿ ಒಳ ಮೀಸಲಾತಿಯ ಸಮಸ್ಯೆಯು ಎಡ - ಬಲದ ಎರಡು ಪ್ರಬಲ ಜಾತಿಗಳಿಂದ ಆಗಿದೆ. ವರ್ಗೀಕರಣದ ಹಂಚಿಕೆಯಲ್ಲಿ ಹೆಚ್ಚು ಚೌಕಾಸಿಗೆ ಆಸ್ಪದ ಮಾಡಿಕೊಡದೆ, ತಮಗಿಂತಲೂ ತಳದಲ್ಲಿರುವ ಜಾತಿಗಳು ಮೇಲೆ ಬರಲಿ ಎಂಬ ಸದಾಶಯದಿಂದ ನೋಡಬೇಕು. ಕಾನ್ಶಿರಾಂ ಅವರು ಹೇಳುವಂತೆ, 'ನಮ್ಮದು ಬೇಡುವ ಕೈಯಾಗದೆ ಕೊಡುವ ಕೈಯಾಗಬೇಕು'. ಇದರರ್ಥ, ಅಸ್ಪೃಶ್ಯ ವರ್ಗ ಅಖಂಡ ರಾಜಕೀಯ ಶಕ್ತಿಯಾಗಿ ಎದ್ದು ನಿಲ್ಲುವ ಕಡೆಗೆ ಮುಖ ಮಾಡಬೇಕು.

ಉತ್ತರ ಪ್ರದೇಶಕ್ಕಿಂತ ಮೊದಲೇ ಕರ್ನಾಟಕದಲ್ಲಿ ದಲಿತ ಸಂಘಟನೆ ಕಾಣಿಸಿಕೊಂಡರೂ ಅದರ ಮಟ್ಟಕ್ಕೆ ಏರುವಲ್ಲಿ ಸೋತಿದ್ದರ ಕಾರಣಗಳನ್ನು ಈಗಲಾದರೂ ಅರಿತುಕೊಂಡು ಕಾರ್ಯಾಚರಣೆಗೆ ಇಳಿಯಬೇಕು.

'ಎಡ'ದವರು ಬಿಜೆಪಿ ಸೇರಿದ್ದರಿಂದ ದಲಿತ ಸಂಘಟನೆ ಶಕ್ತಿಹೀನವಾಯಿತು' ಎನ್ನುವುದಿದೆ. 'ಎಡದವರು ತಾವಾಗಿಯೇ ಬಿಜೆಪಿ ಸೇರಿದರೊ ಅಥವಾ ಅವರನ್ನು ನಾವಾಗಿಯೇ ಆ ಕಡೆಗೆ ತಳ್ಳಿದವೊ' ಎಂದು ನಮ್ಮೊಳಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ಇದಾಗದಿದ್ದರೆ, ತಳಜಾತಿಯವರನ್ನು ನಮ್ಮವರೆಂದು ಅಪ್ಪಲಾಗದು. ಪರಿಶಿಷ್ಟ ಜಾತಿ ಎಂದು ಒಂದೇ ಸಮೂಹವಿದ್ದಾಗಲೇ ಒಡೆದು ಆಳಿದ ರಾಜಕೀಯ ಪಕ್ಷಗಳು, ಇನ್ನೂ ಹೆಚ್ಚಿನ ಗುಂಪುಗಳಾದಾಗ ಒಡೆದು ಆಳುವುದು ಇನ್ನಷ್ಟು ಸುಲಭವಾಗುತ್ತದೆ. ಹೀಗಾಗಿ ವರ್ಗೀಕರಣದ ಆಂತರಿಕ ಸಮಸ್ಯೆಗಳು ಏನೇ ಇದ್ದರೂ, ಹಿತಮಿತದಲ್ಲಿಯೇ ಅರಗಿಸಿಕೊಳ್ಳುವ ಅಗತ್ಯವಿದೆ. ಇಲ್ಲವಾದಲ್ಲಿ ಮೀಸಲಾತಿಯ ಈ ಟೈಟಾನಿಕ್ ಹಡಗು ನಮ್ಮವರಿಂದಲೇ ಆದ ತೂತುಗಳಿಂದ ನೀರು ತುಂಬಿ ಮುಳುಗಿ ಹೋಗುವ ಸ್ವರೂಪಕ್ಕೆ ಬರಬಹುದು.

ಉತ್ತರ ಭಾರತದ ಬಹು ರಾಜ್ಯಗಳು ಒಳ ಮೀಸಲಾತಿಯನ್ನು ವಿರೋಧಿಸುತ್ತವೆ. ಚಮ್ಮಾರರೇ ಪ್ರಬಲ ಜಾತಿಯವರೆಂದು ಅಲ್ಲಿ ಗುರುತಿಸಿಕೊಂಡ ಪರಿಣಾಮದಿಂದಾಗಿ, ಒಳ ಮೀಸಲಾತಿಗಾಗಿ ಅಲ್ಲಿ ಹೋರಾಡಿದ್ದು ಕಡಿಮೆ. ಉತ್ತರ ಭಾರತಕ್ಕೂ, ದಕ್ಷಿಣ ಭಾರತಕ್ಕೂ ಚರ್ಮಕಾರರ ಸ್ಥಿತಿಗತಿಗಳಲ್ಲಿ ವ್ಯತ್ಯಾಸವಿರುವುದನ್ನು ಅರಿಯಬೇಕು.

ಮೀಸಲಾತಿಯಲ್ಲಿ ಒಂದು ಸಮುದಾಯವನ್ನು ಪರಿಶಿಷ್ಟ ಜಾತಿ ಎಂದು ಗುರುತಿಸಿದ ಮೇಲೆ ಒಳಜಾತಿಗಳನ್ನು ಕೇಳುವುದು ಅಪರಾಧ ಎನ್ನುವ ನಡೆ ಕಾನೂನಾಗಿದ್ದಲ್ಲಿ ಒಗ್ಗಟ್ಟು ತಾನಾಗಿಯೇ ಸೃಷ್ಟಿಯಾಗುತ್ತಿತ್ತು. ಅಂತಹ ಅವಕಾಶವನ್ನು ಕಳೆದುಕೊಂಡಿದ್ದೇವೆ. ಜಾತಿಯನ್ನು ವಿರೋಧಿಸುತ್ತಾ, ಜಾತಿ ಹೆಸರಿನಲ್ಲೇ ಉಸಿರಾಡುತ್ತಿದ್ದೇವೆ.

ಈಗಾಗಲೇ ವಿದ್ಯಾರ್ಥಿಗಳ ಶೈಕ್ಷಣಿಕ ಸೌಲಭ್ಯಗಳು ನೀರು ಪಾಲಾಗಿವೆ. ನೌಕರರ ಕ್ಷೇತ್ರದಲ್ಲಿಯೂ ಸ್ಥಿತಿ ಹೇಳಿಕೊಳ್ಳುವಂತಿಲ್ಲ. ಜನಸಂಖ್ಯೆ ಆಧಾರದಲ್ಲಿ ನಡೆಯುವ ವರ್ಗೀಕರಣದಿಂದಾಗಿ ರಾಜಕೀಯ ಧ್ರುವೀಕರಣವಾಗಲಿದೆ. ಇದರಿಂದ, ಉತ್ತರ ಭಾರತದವರೇ ಮೇಲುಗೈ ಸಾಧಿಸಲಿದ್ದಾರೆ ಎಂಬ ಊಹೆಗಳಿವೆ.

ಇನ್ನೊಂದು ರೀತಿ ಆಲೋಚಿಸಿದರೆ, ಈ ಒಳ ಮೀಸಲಾತಿಯ ಒಡೆದು ಹಂಚುವ ಕ್ರಿಯೆ, ಇದೇ ಅಂತಿಮವಾದುದ್ದಲ್ಲ. ಇದಕ್ಕೆ ಅಂತ್ಯವೆನ್ನುವುದೂ ಇಲ್ಲ. ಆರಂಭದಲ್ಲಿ ಹೇಳಿದಂತೆ, ಇದು ಹರಿಯುವ ನೀರಂತಿರಬೇಕು ಮತ್ತು ಕಾಲಕಾಲಕ್ಕೆ ಆರೋಗ್ಯಕರ ಮಾರ್ಗವನ್ನು ಅನುಸರಿಸುವಂತಾಗಬೇಕು. ಹೀಗಾಗಿ ಯಾವುದಕ್ಕೂ ಹೆಚ್ಚು ಜೋತು ಬೀಳುವುದರಲ್ಲಿ ಅರ್ಥವಿಲ್ಲ.

ಲೇಖಕ: ಕವಿ, ವಿಮರ್ಶಕ

ಸಿದ್ದರಾಮಯ್ಯ ಸರ್ಕಾರ ಬದ್ಧತೆ ತೋರಲಿ

ಪರಿಶಿಷ್ಟ ಜಾತಿಯೊಳಗೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪ್ರಮಾಣ ಹಂಚುವ ಮೂಲಕ ಎಲ್ಲರಿಗೂ ಪಾಲು ನೀಡುವುದು ಮತ್ತು ಸಮಾನವಾಗಿ ಹಂಚಿ ಉಣ್ಣುವ ನ್ಯಾಯಕ್ರಮವೇ ಒಳ ಮೀಸಲಾತಿ ಎಂದು ಸರಳವಾಗಿ ಹೇಳಬಹುದು.

ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಗಳಲ್ಲೇ ಗರಿಷ್ಠ ಶೇ 39ರಷ್ಟು ಪ್ರಮಾಣದಲ್ಲಿರುವ ಮಾದಿಗ ಮತ್ತು ಸಂಬಂಧಿತ ಸಮುದಾಯಗಳು ಒಳ ಮೀಸಲಾತಿಗಾಗಿ ನಡೆಸುತ್ತಿರುವ ಹೋರಾಟ ಈಗ ತಾರ್ಕಿಕ ಅಂತ್ಯ ತಲುಪಿದೆ. ಸುಪ್ರೀಂ ಕೋರ್ಟ್‌ನ ತೀರ್ಪು ಪರಿಶಿಷ್ಟ ಜಾತಿಗಳ ಪಾಲಿಗಷ್ಟೇ ಒಳ ಮೀಸಲಾತಿಯ ಮಹಾಮಾರ್ಗವಾಗಿರದೆ, ಇತರೆ ಹಿಂದುಳಿದ, ಶೋಷಿತ ಜನಜಾತಿಗಳ ಪಾಲಿಗೂ ವಿಸ್ತರಿಸಿಕೊಳ್ಳಬಹುದಾದ ಕರಾರುವಾಕ್ಕಾದ ಮಾದರಿಯೂ ಆಗಬಲ್ಲದು.

ಒಳ ಮೀಸಲಾತಿ ಅಳವಡಿಸುವಾಗ ಸಮರ್ಪಕ ದತ್ತಾಂಶವಿರಬೇಕು ಎಂಬ ಸುಪ್ರೀಂ ಕೋರ್ಟ್ ನಿರ್ದೇಶನವು ಸಿದ್ದರಾಮಯ್ಯ ನೇತೃತ್ವದ ಸರ್ಕಾರಕ್ಕೆ ಒಂದು ಸವಾಲು ಎಂದು ಅನಿಸುವುದಿಲ್ಲ. ಸದಾಶಿವ ಆಯೋಗದ ವರದಿಯು ಅಂತಹ ಸಮರ್ಪಕ ದತ್ತಾಂಶವನ್ನು ಹೊಂದಿದೆ. ಸಿದ್ದರಾಮಯ್ಯ ನೇತೃತ್ವದ ಹಿಂದಿನ ಸರ್ಕಾರವೇ ನಡೆಸಿದ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಒಳಮೀಸಲು ಹಂಚಿಕೆಗೆ ಬಳಸಿಕೊಳ್ಳುವ ಅವಕಾಶವೂ ಇದೆ. ಇದನ್ನು ಸರ್ಕಾರ ಕೈಚೆಲ್ಲಬಾರದು.

ಒಳ ಮೀಸಲಾತಿ ಒಂದು ರಾಜಕೀಯ ಸಮಸ್ಯೆಯಲ್ಲ; ಅದೊಂದು ಸಾಮಾಜಿಕ ಸಮಸ್ಯೆ. ಇದನ್ನು ಇತ್ಯರ್ಥಪಡಿಸಲು ರಾಜಕೀಯ ಬದ್ಧತೆ ಬೇಕಿದೆಯಷ್ಟೆ. ರಾಜಕೀಯ ಪಕ್ಷಗಳು ಎಲ್ಲಾ ಕಾಲಕ್ಕೂ ಇಬ್ಬಗೆಯ ನೀತಿಯನ್ನು ಅನುಸರಿಸುತ್ತಲೇ ಬಂದಿವೆ. ಮೀಸಲಾತಿ ಬೇಕು ಎನ್ನುವವರು ಒಳ ಮೀಸಲಾತಿಯನ್ನು ವಿರೋಧಿಸುವುದರಲ್ಲಿ ಅರ್ಥವಿಲ್ಲ. ಒಳ ಮೀಸಲಾತಿಯನ್ನು ವಿರೋಧಿಸುವವರು ಮೀಸಲಾತಿಯಿಂದ ಮೊದಲು ಹೊರಹೋಗಬೇಕಾಗುತ್ತದೆ.

ಒಕ್ಕೂಟ ಸರ್ಕಾರಕ್ಕೆ ಇದ್ದ ಒಳ ಮೀಸಲು ಅಧಿಕಾರವನ್ನು ರಾಜ್ಯ ಸರ್ಕಾರಗಳ ಕೈಗೆ ಹಸ್ತಾಂತರಿಸುವ ಮೂಲಕ ಸುಪ್ರೀಂ ಕೋರ್ಟ್, ರಾಜ್ಯಗಳು ಒಕ್ಕೂಟ ಸರ್ಕಾರದ ಮರ್ಜಿಗೆ ಕಾಯುವ, ಬೇಡುವ ವಸಾಹತು ಸ್ಥಿತಿಯಿಂದ ಹೊರಬರುವಂತೆ ಮಾಡಿದೆ. ಒಳ ಮೀಸಲಾತಿ ಕುರಿತು 'ಸುಪ್ರೀಂ' ತೀರ್ಪಿನಿಂದ 1975, 1994, 1997ರಲ್ಲಿ ಪಂಜಾಬ್, ಹರಿಯಾಣ ಮತ್ತು ಆಂಧ್ರ ಪ್ರದೇಶ ಸರ್ಕಾರಗಳು ಕೈಗೊಂಡ ನಿರ್ಧಾರಗಳಿಗೆ ಬಲ ಬಂದಿದೆ.



ಕರ್ನಾಟಕದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಚುನಾವಣೆ ಸಂದರ್ಭದಲ್ಲಿ ಕೊಟ್ಟ ಭರವಸೆಯಂತೆ ಒಳ ಮೀಸಲಾತಿಯನ್ನು ನ್ಯಾಯ ಮತ್ತು ಆದರ್ಶದ ಪರಿಕ್ರಮದಲ್ಲಿ ಅನುಷ್ಠಾನಗೊಳಿಸುವ ಮೂಲಕ ಬದ್ಧತೆ ತೋರಬೇಕು. ಸಾಮಾಜಿಕ ನ್ಯಾಯವೆಂಬುದು ಕಟ್ಟಕಡೆಯ ದುರ್ಬಲ ವ್ಯಕ್ತಿಗೂ ದಕ್ಕಿದಾಗ ಅದು ಸಾರ್ಥಕಗೊಳ್ಳುತ್ತದೆ. ಮೀಸಲಾತಿಯನ್ನು ಪಡೆಯುವಾಗ ಇದ್ದ ಸಾಮಾಜಿಕ ನ್ಯಾಯದ ಪರಿಕಲ್ಪನೆ ಮತ್ತು ಪ್ರತಿಪಾದನೆ ಒಳ ಮೀಸಲಾತಿ ವಿಷಯದಲ್ಲೂ ಇರಬೇಕಾಗುತ್ತದೆ. ಒಳ ಮೀಸಲಾತಿಯನ್ನು ವಿರೋಧಿಸುವವರು ಅಂತಿಮವಾಗಿ ಮೀಸಲಾತಿಯ ವಿರೋಧಿಗಳೂ ಆಗಿರುತ್ತಾರೆ.

ಎನ್.ರವಿಕುಮಾರ್, ಪತ್ರಕರ್ತ

ಒಳ ಮೀಸಲಾತಿ ಸಂವಿಧಾನದ ಆಶಯ

ಪರಿಶಿಷ್ಟ ಜಾತಿಗಳ ಮೀಸಲಾತಿಯು ಸಾಮಾಜಿಕವಾಗಿ ನೂರಾರು ವರ್ಷಗಳಿಂದ ಶೋಷಣೆಗೆ ಒಳಗಾದ ಸಮುದಾಯಗಳಿಗೆ ನೀಡಿರುವ ಒಂದು ಸವಲತ್ತು. ಈ ಸಮುದಾಯಗಳು ಸಮಾಜದಲ್ಲಿ ಮುನ್ನೆಲೆಗೆ ಬರಬೇಕು; ಅದರ ಮೂಲಕ ಸಾಮಾಜಿಕ ಹಿಂದುಳಿದಿರುವಿಕೆಯನ್ನು ಮೆಟ್ಟಿ ಹೊರಬರಬೇಕು ಎನ್ನುವುದು ಅದರ ಆಶಯ. ಒಳ ಮೀಸಲಾತಿಯ ಗುರಿಯೂ ಇದೇ ಆಗಿದೆ.

ಪರಿಶಿಷ್ಟ ಜಾತಿಯಲ್ಲಿನ ಕೆಲವು ಸಮುದಾಯಗಳು ಸಾಮಾಜಿಕವಾಗಿ ಉಳಿದ ಪರಿಶಿಷ್ಟ ಜಾತಿಗಳಿಗಿಂತ ಹಿಂದುಳಿದಿವೆ ಎಂಬುದು ನಮ್ಮೆಲ್ಲರ ಕಣ್ಣಿಗೆ ರಾಚುವಂತಹ ಸತ್ಯವಾಗಿದೆ. ಇದನ್ನು ಕೂಲಂಕಷವಾಗಿ ಪರಿಗಣಿಸಿಯೇ ಸುಪ್ರೀಂ ಕೋರ್ಟ್ ಒಳಮೀಸಲಾತಿಯನ್ನು ರಾಜ್ಯ ಸರ್ಕಾರಗಳು ಜಾರಿಮಾಡಬಹುದೆಂಬ ತೀರ್ಪು ನೀಡಿರುವುದು. ಸಾಮಾಜಿಕ ನ್ಯಾಯವನ್ನು ಒಪ್ಪುವ ಯಾವುದೇ ಸರ್ಕಾರ ಮೊದಲು ಒಳಮೀಸಲಾತಿಯನ್ನು ಜಾರಿ ಮಾಡಬೇಕಿದೆ. ಈ ಮೂಲಕ ಕರ್ನಾಟಕ ಸರ್ಕಾರ ದೇಶದ ಇತಿಹಾಸದಲ್ಲಿ ಹೊಸ ಅಧ್ಯಾಯ ಬರೆಯಲಿ.



ಸಂವಿಧಾನ ಶಿಲ್ಪಿ ಡಾ. ಬಿ ಆರ್ ಅಂಬೇಡ್ಕರ್ ಸಂವಿಧಾನ ರಚನೆಯ ವಿಚಾರದಲ್ಲಿ ಅಷ್ಟು ಶ್ರಮಿಸಿದ್ದು ಇದೇ ಆಶಯಕ್ಕೆ ಎಂಬುದನ್ನು ಸರ್ಕಾರಗಳು ಎಂದಿಗೂ ಮರೆಯಬಾರದು. ಒಳಮೀಸಲಾತಿ ಜಾರಿ ಮಾಡುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವುದು ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯಕ್ಕೆ ಮತ್ತು ಸಂವಿಧಾನಕ್ಕೆ ತೋರುವ ಅಗೌರವವಾಗಿದೆ.

ಚಂದ್ರು ತರಹುಣಿಸೆ

ಸಾಮಾಜಿಕ ನ್ಯಾಯಕ್ಕಾಗಿ ಪರಿಶಿಷ್ಟ ಜಾತಿಗಳ ಒಕ್ಕೂಟ

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ **ಈ ವರ್ಷದ ಮಾರ್ಚ್ ತಿಂಗಳಲ್ಲಿ** ಬಿಡುಗಡೆಯಾದ 'ಸ್ವಾತಂತ್ರ್ಯ ವೀರ ಸಾವರ್ಕರ್' ಚಿತ್ರವು 2024ರ ಆಸ್ಕರ್‌ಗೆ ಅಧಿಕೃತವಾಗಿ ಭಾರತದಿಂದ ಸಲ್ಲಿಕೆಯಾಗಿದೆ ಎಂಬ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಕೆಲವು ದಿನಗಳಿಂದ ಹರಿದಾಡುತ್ತಿದೆ. ಈ ಚಿತ್ರದ ನಿರ್ಮಾಣ ಮಾಡಿದವರೇ, 'ನಮ್ಮ ಚಿತ್ರ 'ಸ್ವಾತಂತ್ರ್ಯ ವೀರ ಸಾವರ್ಕರ್' ಅಧಿಕೃತವಾಗಿ ಆಸ್ಕರ್‌ಗೆ ಸಲ್ಲಿಕೆಯಾಗಿದೆ. ಈ ಮೆಚ್ಚುಗೆಗಾಗಿ ಭಾರತೀಯ ಚಲನಚಿತ್ರ ಒಕ್ಕೂಟಕ್ಕೆ (ಎಫ್‌ಎಫ್‌ಐ) ಧನ್ಯವಾದ' ಎಂದು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದರು. ಇದನ್ನು ಹಲವರು ಹಂಚಿಕೊಂಡಿದ್ದರು. ಮಾಧ್ಯಮಗಳೂ ವರದಿ ಮಾಡಿದ್ದವು. ಆದರೆ, ಇದು ವಾಸ್ತವ ಅಲ್ಲ.

✓ **ಇನ್‌ಸ್ಟಾಗ್ರಾಂ ಪೋಸ್ಟ್‌ನಲ್ಲಿ ಆಸ್ಕರ್**-2024 ಎಂದು ಉಲ್ಲೇಖಿಸಲಾಗಿದೆ. 96ನೇ ಆವೃತ್ತಿಯ ಆಸ್ಕರ್ ಪ್ರಶಸ್ತಿ ಪ್ರದಾನ ಸಮಾರಂಭ ಈ ವರ್ಷದ ಮಾರ್ಚ್ ತಿಂಗಳಲ್ಲೇ ನಡೆದಿದೆ. ಮುಂದಿನ ವರ್ಷದ (97ನೇ ಆವೃತ್ತಿ) ಆಸ್ಕರ್ ಪ್ರಶಸ್ತಿ ಪ್ರದಾನ ಸಮಾರಂಭ ಹಾಲಿವುಡ್‌ನ ಡಾಲ್ಬಿ ಥಿಯೇಟರ್‌ನಲ್ಲಿ 2025ರ ಮಾರ್ಚ್ 2ರಂದು ನಡೆಯಲಿದೆ. ಹಾಗಾಗಿ, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಪೋಸ್ಟ್‌ನಲ್ಲಿ ಯಾವುದೇ ಅರ್ಥ ಇಲ್ಲ. ಅದಲ್ಲದೇ, 2025ರ ಆಸ್ಕರ್ ಪ್ರಶಸ್ತಿಗೆ ಭಾರತದಿಂದ ನಾಮನಿರ್ದೇಶನಗೊಂಡಿರುವ ಏಕೈಕ ಚಿತ್ರ 'ಲಪಾತಾ ಲೇಡಿಸ್'. ಸೆ.23ರಂದು ಎಫ್‌ಎಫ್‌ಐ ಇದನ್ನು ಘೋಷಿಸಿದೆ. ಎಫ್‌ಎಫ್‌ಐನಿಂದ ವೀರ ಸಾವರ್ಕರ್ ಚಿತ್ರ ಅಧಿಕೃತವಾಗಿ ಸಲ್ಲಿಕೆಯಾಗಿರುವ ವರದಿಗಳನ್ನು ಅದರ ಅಧ್ಯಕ್ಷ ರವಿ ಕೊಟ್ಟಕರ ಅವರು ನಿರಾಕರಿಸಿರುವುದರ ಬಗ್ಗೆ ಮಾಧ್ಯಮಗಳು ವರದಿ ಮಾಡಿರುವುದನ್ನು ಉಲ್ಲೇಖಿಸಿರುವ ಆಲ್ಟ್ ನ್ಯೂಸ್ ಫ್ಯಾಕ್ಟ್ ಚೆಕ್ ವರದಿಯು, ಚಿತ್ರ ತಂಡದ ಪೋಸ್ಟ್ ದಾರಿ ತಪ್ಪಿಸುವಂಥದ್ದು ಎಂದು ಹೇಳಿದೆ.

ಗುಂಡಣ್ಣ



ಧರ್ಮಕ್ಷೇತ್ರ ಕುರುಕ್ಷೇತ್ರ ಆಗಬಾರದು!

ನುಡಿ ಬೆಳಗು 34



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ನಮ್ಮ ದೇಶದಲ್ಲಿ ನಳಂದ ವಿಶ್ವವಿದ್ಯಾಲಯ ಅಂತಾ ಇತ್ತು. ಅಲ್ಲಿ ಎರಡು ಸಾವಿರ ಪರಿಣಿತ ಅಧ್ಯಾಪಕರಿದ್ದರು. 20 ಸಾವಿರ ವಿದ್ಯಾರ್ಥಿಗಳಿದ್ದರು. ಪರ್ಷಿಯಾ, ಚೀನಾ, ಬರ್ಮಾದಿಂದ ವಿದ್ಯಾರ್ಥಿಗಳು, ಅಧ್ಯಾಪಕರು ಬರುತ್ತಿದ್ದರು. 90 ಲಕ್ಷ ಪುಸ್ತಕಗಳಿದ್ದವು. ಅಂತಹ ಗ್ರಂಥಾಲಯಕ್ಕೆ ಬೆಂಕಿ ಹಚ್ಚಿದಾಗ ಭಾರತದ ಜ್ಞಾನ ಸಂಪತ್ತು ಮೂರು ತಿಂಗಳು ಉರಿದಿತ್ತಂತೆ. ಗ್ರಂಥಾಲಯವನ್ನು, ಪುಸ್ತಕಗಳನ್ನು ಬೆಂಕಿ ಸುಡಲಿಲ್ಲ, ಎದೆಯೊಳಗಿನ ದ್ವೇಷ ಸುಟ್ಟಿತ್ತು. ಯಾವಾಗ ಪ್ರೇಮ ಕಳೆದು ಹೋಗತ್ತೋ ಆವಾಗ ಧರ್ಮಕ್ಷೇತ್ರ ಕುರುಕ್ಷೇತ್ರ ಆಗತೈತಿ.

ಧೃತರಾಷ್ಟ್ರನಿಗೆ ಎಲ್ಲವೂ ಇತ್ತು. ನೂರು ಮಕ್ಕಳಿದ್ದರು. ಪಾಂಡವರೂ ನಮ್ಮವರೇ, ಕೂಡಿರಲಿ ಎಂದಿದ್ದರೆ ಧರ್ಮಕ್ಷೇತ್ರ ಧರ್ಮಕ್ಷೇತ್ರವಾಗೇ ಇರುತ್ತಿತ್ತು. ಅವರು ಬ್ಯಾರೆ, ಇವರು ಬ್ಯಾರೆ ಅಂತಾ ದ್ವೇಷ ಮಾಡಿದ್ದಕ್ಕೆ ಧರ್ಮಕ್ಷೇತ್ರ ಕುರುಕ್ಷೇತ್ರ ಆಯಿತು. ನಮ್ಮ ಮನ್ಯಾಗೂ ಪ್ರೇಮ ಕಡಿಮ್ಯಾತು ಅಂದ್ರ ಮನೆ ಕುರುಕ್ಷೇತ್ರ ಆಗತೈತಿ. ಮನೆ ಧರ್ಮಕ್ಷೇತ್ರ ಆಗಬೇಕು.

ರಾಮನಿಂದ ಸೋತು ರಾವಣ ಕೆಳಗ ಬಿದ್ದಿದ್ದ. ಆಗ ರಾಮ ರಾವಣನಿಗೆ 'ನಿನಗೆ ಹತ್ತು ತಲಿ, 20 ಕೈಗಳಿದ್ದವು. ದೇವನಿಂದ ಆತ್ಮಲಿಂಗವನ್ನೇ ತಂದವನು ನೀನು. ನಿನ್ನದೇ ಸಾಮ್ರಾಜ್ಯ ಇತ್ತು. ನನ್ನ ಬಳಿ ಏನೂ ಇರಲಿಲ್ಲ. ಆದರೂ ನಿನಗೆ ಸೋಲಾಯಿತು. ನನಗೆ ಗೆಲುವಾಯಿತು. ಯಾಕ?' ಅಂತ ಕೇಳಿದ. ಅದಕ್ಕೆ ರಾವಣ, 'ನನ್ನ ಕಷ್ಟದ ಕಾಲದಾಗ ನನ್ನ ತಮ್ಮ, ನನ್ನ ಬಿಟ್ಟು ದೂರ ಆದ. ಅದಕ್ಕ ನನಗೆ ಸೋಲಾತು. ನಿನ್ನ ಕಷ್ಟ ಕಾಲದಾಗ ನಿನ್ನ ತಮ್ಮ ನಿನ್ನ ಜೊತೆಗೇ ಇದ್ದ. ಅದಕ್ಕ ನಿನಗೆ ಗೆಲುವಾತು' ಎಂದು ಉತ್ತರಿಸಿದ.

ಕೂಡಿ ಇರಬೇಕು. ಸಂಸಾರ ಅಂದ ಮ್ಯಾಲ ಬ್ಯಾರೆಯಾಗೋದು ಇದ್ದೇ ಇರ್ತದ. ಆದರೆ ಮನೆ ಬ್ಯಾರೆ ಆದರೂ ಪರವಾಗಿಲ್ಲ, ಮನಸ್ಸು ಬೇರೆಯಾಗಬಾರದು. ಈಗ ಒಂದು ಕಸಬರಗಿ ಇರತೈತಿ. ಎಲ್ಲಾ ಕಡ್ಡಿಗಳೂ ಕೂಡಿದ್ದಾಗ ಅದು ಕಸಬರಗಿ. ಒಂದು ಕಡ್ಡಿ ಕೆಳಕ್ಕೆ ಬಿದ್ದರೂ ಅದೇ ಕಸ ಆಗತೈತಿ. ಅದನ್ನ ತಿಳ್ಕೊಬೇಕು.

ದೊಡ್ಡ ಮನೆ ಕಟ್ಟಿದ್ದೀರಿ. ದೊಡ್ಡ ದೊಡ್ಡ ಕೋಣೆಗಳಿದಾವೆ ಅಂದ್ರ ಅದು ಲಾಡ್ಜ್ ಆತು ಮನೆಯಲ್ಲ. ವಿಶಾಲ ಅಡುಗೆ ಮನೆ, ಓಪನ್ ಕಿಚನ್ ಅಂತೆಲ್ಲಾ ಇದ್ರ ಅದು ಹೊಟೇಲ್ ಆತು ಮನೆಯಲ್ಲ. ವಿದೇಶಿ ವಸ್ತುಗಳನ್ನು ತಂದಿಟ್ಟೇನಿ, ಅಂದ್ರೆ ಅದು ಮ್ಯೂಜಿಯಂ ಆತು. ಬೆಕ್ಕು, ನಾಯಿ ಎಲ್ಲಾ ಸಾಕೇನಿ ಅಂದ್ರೆ ಅದು ಪ್ರಾಣಿ ಸಂಗ್ರಹಾಲಯ ಆತು. ಮನೆಯಲ್ಲಿ ವಸ್ತುಗಳಿದ್ರ ಮನೆಯಾಗೋದಿಲ್ಲ. ಮನ್ಯಾಗ ಪ್ರೇಮ ಇದ್ರ ಮಾತ್ರ ಅದು ಮನೆಯಾಗತೈತಿ.

ಆಕಾಶದಲ್ಲಿ ಎಲ್ಲೋ ಇರುವ ಗ್ರಹಗಳನ್ನು ನಂಬುತ್ತೀವಿ. ಆದರೆ, ಮನೆಯಲ್ಲಿ ಗಂಡ ಹೆಂಡತಿಯನ್ನು, ಹೆಂಡತಿ ಗಂಡನನ್ನು ನಂಬದೇ ಇದ್ದರೆ ಅದನ್ನು ಮನೆ ಅನ್ನೋಕೆ ಆಗಲ್ಲ. ಗಂಡ, ಹೆಂಡತಿ ಮಕ್ಕಳಲ್ಲಿ ಪರಸ್ಪರ ಪ್ರೇಮ ಇರಬೇಕು. ಅದು ಮನೆ. ಅಭಿಷೇಕ ಮಾಡಿದರೆ ದೇವರು ಪ್ರಿಯ ಆಗಲ್ಲ, ಯಾಕಂದ್ರ ಸಪ್ತಸಾಗರಗಳನ್ನು ಸೃಷ್ಟಿಮಾಡಿದವನು ದೇವರು. ತುಪ್ಪದ ದೀಪ ಹಚ್ಚಿದ್ರ ದೇವರು ಪ್ರಿಯನಾಗಲ್ಲ, ಯಾಕಂದ್ರ ಸೂರ್ಯಚಂದ್ರರನ್ನು ಆಕಾಶದಲ್ಲಿ ತೇಲಿಬಿಟ್ಟವನು ಅವನು. ನೈವೇದ್ಯ ಇಡ್ತೀನಿ ಅಂದರೆ ಸಕಲ ಜೀವರಾಶಿಗಳನ್ನು ಸಲಹಿದಾತ ದೇವರು. ಯಾರ ಹೃದಯದಲ್ಲಿ ಪ್ರೇಮ ಇದೆಯೋ ಅವರನ್ನು ಸಲಹುತ್ತಾನೆ ದೇವರು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಅಕ್ಟೋಬರ್ 1, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಚತುರ್ದಶಿ ಗಂ. 21-40 ನಕ್ಷತ್ರ: ಪೂರ್ವಫಲ್ಗುನಿ ಗಂ. 9-16 ಯೋಗ: ಶುಕ್ಲ (ಶುಕ್ರ) ಗಂ. 26-17 ಕರಣ: ವಿಷ್ಟಿ ಗಂ. 8-22, ಕನ್ಯಾ ಮಾಸದ 15 ನೇ ದಿನ, ಮಳೆನಕ್ಷತ್ರ: ಹಸ್ತ 2.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-23 ಸೂರ್ಯಾಸ್ತ : 06-17
ಮುಸ್ಲಿಂ ದಿನಾಂಕ : 27 ರಬಿಉಲ್ಲಾವಲ್
ಅದೃಷ್ಟ ಸಂಖ್ಯೆ : 2, 5

ಮೇಷ: ಸುಗಂಧ ದ್ರವ್ಯಗಳ ಉಪಯೋಗದಿಂದ ಅಲರ್ಜಿ ಸಂಭವಿಸಬಹುದು. ಎಚ್ಚರಿಕೆ ಇರಲಿ. ಕಾರ್ಮಿಕರ ಮೇಲಿನ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳು-ವುದರಿಂದ ಪ್ರಯೋಜನವನ್ನು ಪಡೆಯಲಿದ್ದೀರಿ.

ವೃಷಭ: ಜಾಣ್ಮೆ ಮತ್ತು ಅವಿರತ ದುಡಿಮೆಯಿಂದ ವ್ಯವಹಾರದಲ್ಲಿ ದುಪ್ಪಟ್ಟು ಲಾಭವಾಗಿರುವುದು ಗಮನಕ್ಕೆ ಬರಲಿದೆ. ಅಕ್ಕ ಅಥವಾ ತಂಗಿಯ ಆರೋಗ್ಯದ ಬಗ್ಗೆ ಖರ್ಚು ಮಾಡಬೇಕಾದ ಸಂದರ್ಭ ಬರುವುದು.

ಮಿಥುನ: ಉನ್ನತ ಶಿಕ್ಷಣ ಮುಂದುವರಿಸಲು ಬಂಧುಗಳ ಸಹಾಯ ಹಸ್ತ ಅಥವಾ ವಾಸ್ತವ್ಯದ ವ್ಯವಸ್ಥೆಯನ್ನು ಅಪೇಕ್ಷಿಸಬಹುದು. ಮುಂಜಾನೆ ಏಳುವಾಗಲೇ ದಿನಚರಿ ನೆನೆದು ಉತ್ಸಾಹಿಗಳಾಗಿರುತ್ತೀರಿ.

ಕರ್ಕಾಟಕ: ದೇವತಾನುಗ್ರದ ಜತೆಯಲ್ಲಿ ಹಲವು ದಿನಗಳಿಂದ ಇರುವ ಋಣಭಾದೆಗೆ ಅಂತ್ಯ ಕಾಣಿಸುವ ಕಾಲ ಒದಗಿಬರುವುದು. ಸಂತೋಷ, ಉಲ್ಲಾಸ ಇರುತ್ತದೆ. ವಿದ್ಯಾರ್ಥಿಗಳಿಗೆ ಪ್ರಗತಿ ಉಂಟಾಗುವುದು.

ಸಿಂಹ: ಸಣ್ಣ ಪುಟ್ಟ ಸಮಸ್ಯೆ ಹೊರತುಪಡಿಸಿ ಆರೋಗ್ಯ, ಮಾನಸಿಕ ನೆಮ್ಮದಿ ಉತ್ತಮವಾಗಿರುತ್ತದೆ. ತಂದೆಯವರ ಆರೋಗ್ಯ ತಪಾಸಣೆ ನಡೆಸುವ ಬಗ್ಗೆ ಗಮನವಿರಲಿ. ರೈತರ ಫಸಲಿಗೆ ಉತ್ತಮ ಬೆಲೆಯ ನಿರೀಕ್ಷೆ ಫಲಿಸುವುದು.

ಕನ್ಯಾ: ಆರ್ಥಿಕವಾಗಿ ಸಾಕಷ್ಟು ಸಂಪಾದನೆಯಾಗುವುದರಿಂದ ಅನಿವಾರ್ಯದ ಖರ್ಚಿಗೇನೂ ಯೋಚನೆ ಇರುವುದಿಲ್ಲ. ಮನೆಯವರ ಬೇಡಿಕೆಗಳನ್ನು ಸ್ವಲ್ಪ ಮಟ್ಟಿಗೆ ಪೂರೈಸುವಿರಿ. ದಂತವೈದ್ಯರಿಗೆ ಲಾಭದಾಯಕ ದಿನ.

ತುಲಾ: ವಿಭಿನ್ನ ರೀತಿಯ ಮತ್ತು ಅತಿ ಕ್ಲಿಷ್ಟಕರ ಕೆಲಸವೊಂದನ್ನು ಸ್ನೇಹಿತರು ಒಪ್ಪಿಸಲಿದ್ದಾರೆ, ಒಪ್ಪಿಕೊಳ್ಳಿ. ಸಾಕಷ್ಟು ಗೌರವವನ್ನು, ಹೆಸರನ್ನು ತರಲಿದೆ. ಸಾಮಾಜಿಕ ಕಾರ್ಯಕ್ರಮದಲ್ಲಿ ಭಾಗವಹಿಸುವಿರಿ.

ವೃಶ್ಚಿಕ: ನೀರಿನ ಹತ್ತಿರದಲ್ಲಿ ಅಥವಾ ನೀರಿಗೆ ಸಂಬಂಧಿಸಿದ ಕೆಲಸ ನಡೆಸುವವರಿಗೆ ವೃತ್ತಿಯಲ್ಲಿ ಭೀತಿ ಎದುರಾಗಬಹುದು. ನಂಬಿಕಸ್ಥರಿಂದ ಮೋಸ ಹೋಗುವ ಸಾಧ್ಯತೆಯಿದೆ. ಬಿಳಿ ಬಣ್ಣ ಶುಭವನ್ನು ತರಲಿದೆ.

ಧನು: ಈ ದಿನ ಸಣ್ಣ ಪುಟ್ಟ ಅಡಚಣೆಗಳು ಕಾರ್ಯಗಳಿಗೆ ಅಡ್ಡಿಯಾಗಲಾರದು. ಕಾರ್ಯ ಸಾಧನೆಗೆ ತೋರಿ ಬರುವ ಆತಂಕಗಳು ನಿವಾರಣೆಯಾಗಲಿದೆ. ವಿಮಾ ಯೋಜನೆಗಳಿಂದ ಹೆಚ್ಚಿನ ಲಾಭ ಪಡೆದುಕೊಳ್ಳುವಿರಿ.

ಮಕರ: ಕಣ್ಣಿನ ದೃಷ್ಟಿಗೆ ಸಂಬಂಧಿಸಿದಂತೆ ಆರೋಗ್ಯ ತಪಾಸಣೆ ಮಾಡಿಸಿಕೊ-ಳ್ಳುವುದು ಶಸ್ತ್ರ ಚಿಕಿತ್ಸೆಯನ್ನು ತಪ್ಪಿಸಲಿದೆ. ಕಲಹ ಉಂಟುಮಾಡುವ ವಿಚಾರ ಗಳನ್ನು ನಿಯಂತ್ರಿಸುವ ಜಾಣ್ಮೆ ಇರಲಿ. ಉದ್ಯೋಗದ ಬಗ್ಗೆ ಯೋಚನೆ ಬೇಡ.

ಕುಂಭ: ಸಮಸ್ಯೆಯನ್ನು ಬಗೆಹರಿಸಿಕೊಂಡು ಮುಂದಿನ ಹೆಜ್ಜೆ ಹಾಕುವ ಯೋಚನೆ ಸರಿಯಾದ ಮಾರ್ಗವಾಗಿರುತ್ತದೆ. ಕಾರ್ಯ ಕ್ಷೇತ್ರದಲ್ಲಿ ಉತ್ತಮ ಹೊಂದಾಣಿಕೆ ಮಾಡಿಕೊಳ್ಳುವುದು ಅಗತ್ಯ.


ಮೀನ: ಮುದ್ರಣ ವೃತ್ತಿಯವರು ತಪ್ಪಿಲ್ಲದೇ ಕಾರ್ಯನಿರ್ವಹಿಸುವುದರಿಂದ ಲಾಭ ಬರುವುದು. ಹಣಕಾಸು ನಿರ್ವಹಣೆಯ ವಿಚಾರದಲ್ಲಿ ಕುಶಲಮತಿಯನ್ನು ಹೊಂದಿರುವ ನೀವು ಸಣ್ಣ-ಪುಟ್ಟ ತಪ್ಪುಗಳನ್ನು ಮಾಡುವ ಲಕ್ಷಣಗಳಿವೆ.

ಪದಬಂಧ 5819

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನವರತ್ನಗಳಲ್ಲಿ ಒಂದಾಗಿರುವ ಅತೀ ಕಠಿಣ ವಸ್ತು (2)
3.ಈ ರೀತಿ ಮಾಯವಾಗುವಿಕೆ (4)
5.ಪ್ರಕೃತಕ್ಕೆ ಸಂಬಂಧಪಡದಿರುವುದು (4)
8.ಹೇಳಿದ್ದನ್ನೇ ಹೇಳುವುದು (6)
11.ತಾನಾಗಿ ಕಲ್ಪಿಸಿಕೊಡದ್ದು (6)
13.ಇದೊಂದು ಚರ್ಮವಾದ್ಯ (4)
15.ತಲೆಮಾರು ಈ ತರ ಬಂದಿದೆಯಲ್ಲಾ (4)
16.ಹುರಿ ಮಾಡಿದ ಹತ್ತಿಯ ಎಳೆ (2)

ಮೇಲಿಂದ ಕೆಳಕ್ಕೆ
1.ಯೌವ್ವನದಲ್ಲಿ ನೋಡಿರುವ ಕಾಡು! (2)
2.ಆಯಾಸ ಹೀಗೆ ಬಂದಿದೆ (2)
4.ವಿಸ್ಮಿತನಾದವನು ತಿರುಗಿದ್ದಾನಲ್ಲಾ! (3)
6.ಪ್ರಯಾಣದಲ್ಲಿ ಮಾಡಿದ ನಿಯಮ! (3)
7.ಕೆನ್ನೆಗೆ ಹೊಡೆಯುವ ಏಟು (4)
9.ತೀವ್ರವಾದ ಆಸೆ (3)
10.ಗಡಕ್ಕನೆ ಎದುರಾದ ತೊಂದರೆ (4)
11.ಧಾನ್ಯದ ತೆನೆ (3)
12.ವ್ಯಾಕರಣದಲ್ಲಿ ಧಾತುವಲ್ಲದ ಪ್ರಕೃತಿಗಳಿಗೆ ಹತ್ತುವ ಪ್ರತ್ಯಯ (3)
14.ಬಟ್ಟೆ ನೇಯುವ ಸಾಧನ (2)
15.ಅತ್ತಿತ್ತ ನೋಡುವಾಗ ಮೊಟ್ಟೆ ಕಾಣಿಸಿತಲ್ಲಾ! (2)



5818ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಪಾಧ್ಯಾಯ 3.ಸುಭಾಷಿತ 5.ಮಧುರ 7.ಮಗ 8.ನರ 10.ಇಣಚಿ 12. ನಿಕರ 14.ಮಿತಿ 16.ಕ್ಷರ 17.ಬಳಪ 19.ಕರೆಯೋಲೆ 20.ರಸಾಯನ

ಮೇಲಿಂದ ಕೆಳಕ್ಕೆ:
1.ಉಪಮಾನ 2.ಯಮ 3.ಸುರ 4.ತಣಿಗ 6.ಧುರೀಣ 7.ಮರುಭೂಮಿ 9.ರತ್ನಾಕರ 10.ಇಬ್ಬನಿ 11.ಚಿತ್ತಾರ 13.ಕಪಾಳ 15.ತಿರೋಧಾನ 16.ಕ್ಷಣಿಕ 17.ಬಳೆ 18.ಪರ

ಸುಡೊಕು 6204

8	7			6			5	
2	4				5		6	
		1	2			4		9
		2					4	
4					6			
	1		3		2		7	
	2			1		8		
1			8					4
	8			3	7		1	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6203 ಸುಡೊಕು

7	9	2	5	3	1	4	6	8
4	1	5	6	8	7	3	2	9
6	8	3	4	9	2	1	5	7
5	3	4	7	1	9	6	8	2
1	2	6	8	5	4	7	9	3
8	7	9	2	6	3	5	4	1
9	4	7	3	2	5	8	1	6
3	6	1	9	4	8	2	7	5
2	5	8	1	7	6	9	3	4

ನಾನೆಂದೂ ಮನೆ, ಆಸ್ತಿ, ಚಿನ್ನ, ಸಂಪತ್ತನ್ನು ಬಯಸಿದವಳಲ್ಲ; ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಬಹಿರಂಗ ಪತ್ರ

‘ಕುಟುಂಬದ ಘನತೆಗೆ ಮಸಿ ಬಳಿಯಬೇಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಡಾ ನಿವೇಶನವನ್ನು ವಾಪಸ್ ಮಾಡುವುದಾಗಿ, ಹೇಳಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಬಿ.ಎಂ. ಪಾರ್ವತಿ ಅವರು, ‘ರಾಜಕೀಯ ದ್ವೇಷ ಸಾಧನೆಗಾಗಿ ರಾಜಕಾರಣಿಗಳ ಕುಟುಂಬದ ಹೆಣ್ಣುಮಕ್ಕಳ ಘನತೆಗೆ ಮಸಿ ಬಳಿಯಬೇಡಿ’ ಎಂದು ಮನವಿ ಮಾಡಿದ್ದಾರೆ.

ರಾಜಕೀಯ ಪಕ್ಷಗಳ ನಾಯಕರು, ಮಾಧ್ಯಮದವರನ್ನು ಉದ್ದೇಶಿಸಿ ಅವರು ಬರೆದಿರುವ ಪತ್ರದ ವಿವರ ಹೀಗಿದೆ.

‘ನನ್ನ ಪತಿಯಾಗಿರುವ ಸಿದ್ದರಾಮಯ್ಯನವರು ತಮ್ಮ 40 ವರ್ಷದ ಸುದೀರ್ಘ ರಾಜಕಾರಣದಲ್ಲಿ ಯಾವುದೇ ಸಣ್ಣ ಕಳಂಕವೂ ಅಂಟಿಕೊಳ್ಳದಂತಹ ನೈತಿಕತೆಯನ್ನು ವ್ರತದಂತೆ ಪಾಲಿಸಿಕೊಂಡು ಬಂದವರು. ರಾಜಕೀಯವೂ ಸೇರಿದಂತೆ ಸಾರ್ವಜನಿಕ ಜೀವನದಲ್ಲಿ ಕಾಣಿಸಿಕೊಂಡು ಅವರಿಗೆ ಮುಜುಗರ ಉಂಟು ಮಾಡಬಾರದು ಎಂಬ ನಿರ್ಧಾರಕ್ಕೆ ಬದ್ಧಳಾಗಿ ಬದುಕಿದವಳು.

ಸಚಿವರು, ಆಪ್ತರ ಜತೆ ಸಿ.ಎಂ ಚರ್ಚೆ

ಬೆಂಗಳೂರು: ಜಾರಿ ನಿರ್ದೇಶನಾಲಯ ಪ್ರಕರಣ ದಾಖಲಿಸಿದ ಬೆನ್ನಲ್ಲೇ ಮುಂದಿನ ನಡೆಯ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹಿರಿಯ ಸಚಿವರು ಹಾಗೂ ತಮ್ಮ ಆಪ್ತರ ಜತೆ ಸಮಾಲೋಚನೆ ನಡೆಸಿದರು.

ಸಚಿವರಾದ ಎಚ್.ಕೆ. ಪಾಟೀಲ, ಎಚ್.ಸಿ. ಮಹದೇವಪ್ಪ ಹಾಗೂ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಜತೆಯೂ ಮಾತುಕತೆ ನಡೆಸಿದರು. ಇ.ಡಿ. ಪ್ರಕರಣವನ್ನು ಕಾನೂನಾತ್ಮಕವಾಗಿ ಮತ್ತು ರಾಜಕೀಯವಾಗಿ ಪರಿಸ್ಥಿತಿಯನ್ನು ಹೇಗೆ ಎದುರಿಸಬೇಕು ಎಂಬ ಸಲಹೆಗಳನ್ನು ಪಡೆದರು ಎಂದು ಮೂಲಗಳು ಹೇಳಿವೆ.

‘ನಾನೆಂದೂ ಮನೆ, ಆಸ್ತಿ, ಚಿನ್ನ, ಸಂಪತ್ತನ್ನು ಬಯಸಿದವಳಲ್ಲ. ಯಾವುದೇ ಕಾರಣಕ್ಕೂ ನನ್ನಿಂದ ಅವರ ರಾಜಕೀಯ ಜೀವನಕ್ಕೆ ಒಂದು ಸಣ್ಣ ಹನಿಯಷ್ಟೂ ಕಳಂಕ ತಟ್ಟಬಾರದೆಂದು ಎಚ್ಚರಿಕೆಯಿಂದ ನಡೆದುಕೊಂಡವಳು. ಹೀಗಿದ್ದರೂ ಮೈಸೂರಿನ ಮುಡಾ ನಿವೇಶನಕ್ಕೆ ಸಂಬಂಧಿಸಿದಂತೆ ಕೇಳಿಬಂದ ಆರೋಪಗಳಿಂದ ನಾನು ಗಾಸಿಗೊಂಡಿದ್ದೇನೆ. ನನ್ನ ಸ್ವಂತ ಸೋದರ ಅರಿಶಿನ– ಕುಂಕುಮದ ಭಾಗವಾಗಿ ಕೊಟ್ಟ ಜಮೀನಿನ ಬಾಬ್ತು ಪಡೆದ ನಿವೇಶನಗಳು ಇಷ್ಟೊಂದು ರಾದ್ಧಾಂತವಾಗುತ್ತದೆ. ಇದರಿಂದ ನನ್ನ ಪತಿಯವರು ಅನ್ಯಾಯವಾಗಿ ಆರೋಪಗಳನ್ನು ಎದುರಿಸುವಂತಾಗಬಹುದು ಎನ್ನುವುದನ್ನು ನಾನು ಊಹಿಸಿದವಳೂ ಅಲ್ಲ.

‘ನನಗೆ ಈ ನಿವೇಶನ, ಮನೆ, ಆಸ್ತಿ, ಸಂಪತ್ತು ಯಾವುದೂ ಕೂಡ ನನ್ನ ಪತಿಯ ಗೌರವ, ಘನತೆ, ಮರ್ಯಾದೆ ಮತ್ತು ಅವರ ನೆಮ್ಮದಿಗಿಂತ ದೊಡ್ಡದಲ್ಲ. ಇಷ್ಟು ವರ್ಷಗಳ ಕಾಲ ಅಧಿಕಾರದಲ್ಲಿದ್ದ ಅವರಿಂದ ಏನನ್ನೂ ನನಗಾಗಲೀ, ನನ್ನ ಕುಟುಂಬಕ್ಕಾಗಲೀ ಬಯಸದೇ ಇದ್ದ ನನಗೆ ಈ ನಿವೇಶನಗಳು ತೃಣಕ್ಕೆ ಸಮ. ಹೀಗಾಗಿ, 14 ನಿವೇಶನಗಳನ್ನು ವಾಪಸ್ ಮಾಡಲು ನಿರ್ಧರಿಸಿದ್ದೇನೆ.

‘ಈ ಹಂತದಲ್ಲಿ ಇಂತಹ ನಿರ್ಧಾರಕ್ಕೆ ಏಕೆ ಬಂದಿರಿ ಎಂದು ಯಾರಾದರೂ ಕೇಳಬಹುದು. ಆರೋಪ ಕೇಳಿ ಬಂದ ದಿನವೇ ನಾನು ಈ ನಿರ್ಧಾರ ಮಾಡಿದ್ದೆ. ಆದರೆ, ಈ ಮುಡಾ ನಿವೇಶನ ಹಂಚಿಕೆಯ ಆರೋಪವನ್ನು ರಾಜಕೀಯ ದುರುದ್ದೇಶದಿಂದ ಮಾಡಲಾಗಿದ್ದು, ಈ ಅನ್ಯಾಯದ ವಿರುದ್ಧ ಹೋರಾಡಬೇಕು. ಅವರ ಸಂಚಿಗೆ ನಾವು ಬಲಿಯಾಗಬಾರದು ಎಂದು ಕೆಲವು ಹಿತೈಷಿಗಳು ಹೇಳಿದ ಕಾರಣಕ್ಕೆ ನಿವೇಶನ ವಾಪಸು ಮಾಡಬೇಕೆಂಬ ನಿರ್ಧಾರವನ್ನು ಕೈ ಬಿಟ್ಟಿದ್ದೆ.

‘ಎಲ್ಲ ರಾಜಕೀಯ ಪಕ್ಷದ ನಾಯಕರು ಮತ್ತು ಮಾಧ್ಯಮವರಲ್ಲಿ ನನ್ನ ವಿನಂತಿ ಎಂದರೆ ದಯವಿಟ್ಟು ರಾಜಕೀಯ ಕ್ಷೇತ್ರದಿಂದ ದೂರವಿದ್ದು, ತಮ್ಮ ಪಾಡಿಗೆ ತಾವಿರುವ ರಾಜಕೀಯ ಕುಟುಂಬದ ಹೆಣ್ಣು ಮಕ್ಕಳನ್ನು ರಾಜಕೀಯ ದ್ವೇಷ ಸಾಧನೆಗಾಗಿ ವಿವಾದದ ಕಣಕ್ಕೆ ಎಳೆದು ತಂದು ಅವರ ಘನತೆ, ಗೌರವಗಳಿಗೆ ಹಾನಿ ಮಾಡಬೇಡಿ’ ಎಂದು ಕೋರಿದ್ದಾರೆ.

‘ಸಿ.ಎಂ ಕುರ್ಚಿ ಬಯಸುವವರಿಗೆ ಸಿದ್ದರಾಮಯ್ಯ ಪೆಡಂಭೂತ’

ಮೈಸೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಮಾನಸಿಕವಾಗಿ ಗಟ್ಟಿಯಾಗಿದ್ದಾರೆ. ಅವರು ಕುರ್ಚಿಯಿಂದ ಹೋದರೆ ಸಾಕೆಂದು ಆಸೆಗಣ್ಣಿನಿಂದ ನೋಡುತ್ತಿರುವವರಿಗೆ ಪೆಡಂಭೂತವಾಗಿ ಕಾಡುತ್ತಿದ್ದಾರೆ’ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದರು.

ಇಲ್ಲಿ ಪತ್ರಕರ್ತರೊಂದಿಗೆ ಸೋಮವಾರ ಮಾತನಾಡಿ, ‘ರಾಜ್ಯದಲ್ಲಿ ಸದ್ಯಕ್ಕೆ ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ. ಕಾಂಗ್ರೆಸ್‌ನಲ್ಲಿ ಎಲ್ಲರೂ ಒಗ್ಗಟ್ಟಾಗಿದ್ದೇವೆ. ಯಾವುದೇ ಗೊಂದಲವಿಲ್ಲ’ ಎಂದರು.

‘ಪ್ರಜಾಪ್ರಭುತ್ವ ವ್ಯವಸ್ಥೆ ಎತ್ತ ಸಾಗುತ್ತಿದೆ? ತಪ್ಪೇ ಮಾಡದಿದ್ದರೂ ತಮ್ಮ ವಿರುದ್ಧ ಹೀಗೆಲ್ಲಾ ಮಾಡುತ್ತಿದ್ದಾರಲ್ಲ ಎಂಬ ನೋವು ಸಿದ್ದರಾಮಯ್ಯನವರಿಗಿದೆ. ಪ್ರಜಾಪ್ರಭುತ್ವದ ಭವಿಷ್ಯವನ್ನು ನೆನೆದು ವಿಷಾದಕ್ಕೆ ಒಳಗಾಗಿದ್ದಾರೆ’ ಎಂದರು.

‘ಎಲ್ಲ ಪರಿಸ್ಥಿತಿಯಲ್ಲೂ ವ್ಯಕ್ತಿಗಿಂತ ಪಕ್ಷ ಹಾಗೂ ಪಕ್ಷಕ್ಕಿಂತ ದೇಶ ಮುಖ್ಯ. ಯಾವುದೇ ಅನುಮಾನವಿಲ್ಲ. ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ಕಾಂಗ್ರೆಸ್ ಶಾಶ್ವತವಾಗಿರುತ್ತದೆ’ ಎಂದು ತಿಳಿಸಿದರು.

‘ನಮ್ಮ ಸರ್ಕಾರವನ್ನು ಕೆಡವಲು ಬಿಜೆಪಿ-ಜೆಡಿಎಸ್ ನಾಯಕರು ಹುನ್ನಾರ ಮಾಡುತ್ತಿದ್ದಾರೆ. ರಾಜ್ಯಪಾಲರು, ರಾಜಭವನವನ್ನು ದುರ್ಬಳಕೆ ಮಾಡಿಕೊಂಡು ಚುನಾಯಿತ ಸರ್ಕಾರವನ್ನು ದುರ್ಬಲಗೊಳಿಸಲು ಯತ್ನಿಸುತ್ತಿದ್ದಾರೆ. ಸಿದ್ದರಾಮಯ್ಯ ಅವರನ್ನು ಕೆಳಗಿಳಿಸಿ, ಬೇಗ ಓಡಿ ಹೋಗಿ ಆ ಕುರ್ಚಿಯಲ್ಲಿ ಕೂರಬೇಕೆಂಬ ಕೆಲವರ ಆಸೆ ಈಡೇರದು’ ಎಂದು ಹೇಳಿದರು.

ಸುದ್ದಿ 2 ನಿಮಿಷ

ಸಚಿವೆ ವಿರುದ್ಧದ ತನಿಖೆಗೆ ತಡೆ

ಬೆಂಗಳೂರು: ಚುನಾವಣಾ ಬಾಂಡ್‌ಗಳ ಮೂಲಕ ಬಹುಕೋಟಿ ದೇಣಿಗೆ ಪಡೆಯಲು ಜಾರಿ ನಿರ್ದೇಶನಾಲಯ ದುರ್ಬಳಕೆ ಮಾಡಿಕೊಂಡ ಆರೋಪ ಆಧರಿಸಿದ ಕ್ರಿಮಿನಲ್ ಪ್ರಕರಣದ ತನಿಖೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಮಾಜಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಬಿಜೆಪಿಯ ರಾಷ್ಟ್ರೀಯ ಮತ್ತು ರಾಜ್ಯ ಘಟಕದ ಪದಾಧಿಕಾರಿಗಳ ವಿರುದ್ಧ ಇಲ್ಲಿನ ತಿಲಕ್‌ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.



‘ಎಫ್‌ಐಆರ್ ರದ್ದುಪಡಿಸಬೇಕು’ ಎಂದು ಕೋರಿ ಪ್ರಕರಣದ 4ನೇ ಆರೋಪಿಯಾದ ನಳಿನ್ ಕುಮಾರ್ ಕಟೀಲ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಕಟೀಲ್ ಪರ ಹಿರಿಯ ವಕೀಲ ಕೆ.ಜಿ.ರಾಘವನ್ ಮತ್ತು ದೂರುದಾರ ಆದರ್ಶ ಅಯ್ಯರ್ ಪರ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಪ್ರಶಾಂತ್ ಭೂಷಣ್ ಅವರ ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ಇದೇ 22ರವರೆಗೆ ಪ್ರಕರಣದ ತನಿಖೆಗೆ ತಡೆ ನೀಡಿ ಆದೇಶಿಸಿತು.

‘ಜನಾಧಿಕಾರ ಸಂಘರ್ಷ ಪರಿಷತ್’ ಸಹ ಅಧ್ಯಕ್ಷ ಆದರ್ಶ್ ಆರ್ ಐಯ್ಯರ್ ಸಲ್ಲಿಸಿದ್ದ ಖಾಸಗಿ ದೂರಿಗೆ ಸಂಬಂಧಿಸಿದಂತೆ, ‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ.ಎನ್.ಶಿವಕುಮಾರ್, ಎಫ್‌ಐಆರ್ ದಾಖಲಿಸುವಂತೆ ತಿಲಕ್ ನಗರ ಠಾಣೆ ಪೊಲೀಸರಿಗೆ ನಿರ್ದೇಶಿಸಿದ್ದರು.

ಸಿದ್ದರಾಮಯ್ಯ ಬಳಿಕ ಶಿವಕುಮಾರ್ ಸಿ.ಎಂ ಆಗಲಿ: ಶಾಸಕ ಬಾಲಕೃಷ್ಣ

ರಾಮನಗರ: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತಮವಾಗಿ ಆಡಳಿತ ನಡೆಸುತ್ತಿದ್ದಾರೆ. ಅವರ ಬಳಿಕ ರಾಮನಗರ ಜಿಲ್ಲೆಯವರಿಗೆ ಮುಖ್ಯಮಂತ್ರಿ ಸ್ಥಾನ ನೀಡುವಂತೆ ನಾವು ದನಿ ಎತ್ತುತ್ತೇವೆ’ ಎಂದು ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಹೇಳಿದ್ದಾರೆ.

ತಾಲ್ಲೂಕಿನ ಕೂಟಗಲ್‌ನಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾನತಾಡಿದ ಅವರು, ‘ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿ ಪಕ್ಷವನ್ನು ಅಧಿಕಾರಕ್ಕೆ ತರುವ ಜೊತೆಗೆ ಸಿದ್ದರಾಮಯ್ಯಗೆ ಸಾಥ್ ನೀಡುತ್ತಿದ್ದಾರೆ. ಹಾಗಾಗಿ, ಸಿದ್ದರಾಮಯ್ಯ ಬಳಿಕ ನಮ್ಮ ಜಿಲ್ಲೆಗೆ ಸಿ.ಎಂ ಸ್ಥಾನ ಸಿಗಬೇಕು ಎಂಬುದು ನನ್ನಾಸೆ’ ಎಂದರು.

ಲೋಕಾಯುಕ್ತ ಪೊಲೀಸರಿಂದ ತನಿಖೆ ಆರಂಭ

ಪ್ರಜಾವಾಣಿ ವಾರ್ತೆ

ಮೈಸೂರು: ಮುಡಾ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ನಾಲ್ವರು ಆರೋಪಿಗಳ ವಿರುದ್ಧ ಇಲ್ಲಿನ ಲೋಕಾಯುಕ್ತ ಪೊಲೀಸರು ತನಿಖೆ ಆರಂಭಿಸಿದ್ದು, ಪೂರಕ ದಾಖಲೆಗಳ ಸಂಗ್ರಹ ಶುರು ಮಾಡಿದ್ದಾರೆ.

ತನಿಖಾ ತಂಡಗಳ ನೇತೃತ್ವ ವಹಿಸಿರುವ ಮೈಸೂರು ಡಿವೈಎಸ್‌ಪಿ ಎಸ್.ಕೆ. ಮಾಲತೇಶ್, ಚಾಮರಾಜನಗರ ಡಿವೈಎಸ್‌ಪಿ ಮ್ಯಾಥ್ಯು ಥಾಮಸ್, ಇನ್‌ಸ್ಪೆಕ್ಟರ್‌ಗಳಾದ ರವಿಕುಮಾರ್ ಹಾಗೂ ಲೋಕೇಶ್‌ಕುಮಾರ್ ಜೊತೆ ಮೈಸೂರು ಲೋಕಾಯುಕ್ತ ಎಸ್.ಪಿ. ಟಿ.ಜೆ. ಉದೇಶ್ ಸೋಮವಾರ ಬೆಳಿಗ್ಗೆ ತಮ್ಮ ಕಚೇರಿಯಲ್ಲಿ ಸಭೆ ನಡೆಸಿದರು.

‘ಬಳಿಕ ಈ ಐವರ ತಂಡವು ಬೆಂಗಳೂರಿಗೆ ತೆರಳಿ, ಲೋಕಾಯುಕ್ತ ಎಡಿಜಿಪಿ ಮನೀಶ್ ಕರ್ಬೀಕರ್ ಅವರನ್ನು ಭೇಟಿ ಮಾಡಿ ಪ್ರಕರಣದ ಸದ್ಯದ ಬೆಳವಣಿಗೆಗಳ ಕುರಿತು ವಿವರಣೆ ನೀಡಿತು’ ಎಂದು ಮೂಲಗಳು ತಿಳಿಸಿವೆ.

ತನಿಖೆ ಪೂರ್ಣಗೊಳಿಸಲು 85 ದಿನಗಳಷ್ಟೇ ಉಳಿದಿವೆ. ಮೊದಲ ಹಂತದಲ್ಲಿ ಮುಡಾ ಆಯುಕ್ತರು, ಹಿಂದಿನ ಆಯುಕ್ತರಿಗೆ ನೋಟಿಸ್ ನೀಡಲಿದ್ದು, ಮೂಲ ದಾಖಲೆಗಳನ್ನು ಪರಿಶೀಲಿಸಲಿದ್ದಾರೆ. ನಂತರದಲ್ಲಿ ದೂರಿನಲ್ಲಿ ಉಲ್ಲೇಖಗೊಂಡಿರುವವರನ್ನು ವಿಚಾರಣೆಗೆ ಕರೆಯುವ ಸಾಧ್ಯತೆ ಇದೆ.

ಸಿದ್ದರಾಮಯ್ಯ ಅವರನ್ನು ಯಾವಾಗ ವಿಚಾರಣೆಗೆ ಕರೆಯಬೇಕು? ತಾವೇ ತನಿಖೆ ನಡೆಸಬೇಕೆ ಅಥವಾ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ವಿಚಾರಣೆ ನಡೆಸಬೇಕೆ ಎಂಬ ಕುರಿತು ಚಿಂತನೆಯೂ ನಡೆದಿದೆ.

ಮತ್ತೊಂದು ಮನವಿ: ದೂರುದಾರ ಸ್ನೇಹಮಯಿ ಕೃಷ್ಣ ತನಿಖೆಗೆ ಪೂರಕವಾಗಿ ಲೋಕಾಯುಕ್ತ ಎಸ್.ಪಿ. ಕಚೇರಿಗೆ ಸೋಮವಾರ ಮನವಿ ಪತ್ರ ಸಲ್ಲಿಸಿದರು. ಆರೋಪಿಗಳ ಲೋಪಗಳನ್ನು ಅವರು ಉಲ್ಲೇಖಿಸಿದ್ದಾರೆ. ಯಾರನ್ನು ಸಾಕ್ಷಿಗಳನ್ನಾಗಿ ಪರಿಗಣಿಸಬಹುದು ಎಂದು ಸಲಹೆಯನ್ನೂ ನೀಡಿದ್ದಾರೆ

‘ಮುಡಾದಲ್ಲಿ 2015ರಿಂದ ಈವರೆಗೆ ₹5ಸಾವಿರ ಕೋಟಿ ಮೊತ್ತದ ಅಕ್ರಮ ನಡೆದಿದ್ದು, ಎಲ್ಲವನ್ನೂ ತನಿಖೆಗೆ ಒಳಪಡಿಸಬೇಕು. 50:50 ಅನುಪಾತದಲ್ಲಿ ಹಂಚಿಕೆಯಾಗಿರುವ ಎಲ್ಲ ನಿವೇಶನಗಳ ನೈಜತೆ ಪರಿಶೀಲಿಸಬೇಕು’ ಎಂದು ಕೋರಿದ್ದಾರೆ.

ಇ.ಡಿಗೆ ಲಿಖಿತವಾಗಿಯೂ ದೂರು: ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ ಅಡಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಕರಣ ದಾಖಲಿಸುವಂತೆ ಕೋರಿ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಸೋಮವಾರ ಜಾರಿ ನಿರ್ದೇಶನಾಲಯದ(ಇಡಿ) ಬೆಂಗಳೂರು ವಿಭಾಗದ ಜಂಟಿ ಆಯುಕ್ತರಿಗೆ ಲಿಖಿತವಾಗಿ ದೂರು ಸಲ್ಲಿಸಿದ್ದಾರೆ.

ಸೆಪ್ಟೆಂಬರ್ 27ರಂದು ಅವರು ಇ-ಮೇಲ್ ಹಾಗೂ ಅಂಚೆ ಮೂಲಕ ದೂರು ನೀಡಿದ್ದು, ಸೋಮವಾರ ಮತ್ತೊಮ್ಮೆ ದೂರು ಸಲ್ಲಿಸಿದ್ದಾರೆ.

ಸ್ನೇಹಮಯಿ ಕೃಷ್ಣಗೆ ನೋಟಿಸ್: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಪ್ರಕರಣದಲ್ಲಿ ವಿಚಾರಣೆಗೆ ಹಾಜರಾಗುವಂತೆ ದೂರುದಾರ ಸ್ನೇಹಮಯಿ ಕೃಷ್ಣ ಅವರಿಗೆ ಲೋಕಾಯುಕ್ತ ಎಸ್.ಪಿ. ಟಿ.ಜೆ. ಉದೇಶ್ ನೋಟಿಸ್ ನೀಡಿದ್ದಾರೆ. ವಾಟ್ಸ್‌ಆ್ಯಪ್ ಮೂಲಕ ನೋಟಿಸ್ ಕಳುಹಿಸಿದ್ದು, ಮಂಗಳವಾರ (ಅ.1) ಬೆಳಿಗ್ಗೆ 7.30ಕ್ಕೆ ಕಚೇರಿಗೆ ಬರುವಂತೆ ಸೂಚಿಸಿದ್ದಾರೆ.

ಪ್ರಕರಣದಲ್ಲಿ ಪೊಲೀಸರು ನೀಡಿದ ಮೊದಲ ನೋಟಿಸ್ ಇದು.

‘ತಪ್ಪು ಮುಚ್ಚಿಕೊಳ್ಳಲು ಖರ್ಬೀಕರ್‌ಗೆ ಹುದ್ದೆ’

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಡಾ ಪ್ರಕರಣದಲ್ಲಿ ತಮ್ಮ ತಪ್ಪನ್ನು ಮುಚ್ಚಿಹಾಕುವುದಕ್ಕಾಗಿಯೇ ಮನೀಶ್ ಖರ್ಬೀಕರ್ ಅವರನ್ನು ಲೋಕಾಯುಕ್ತದ ಎಡಿಜಿಪಿಯಾಗಿ ನೇಮಿಸಿದ್ದಾರೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಆರೋಪಿಸಿದರು.

ಜುಲೈನಲ್ಲಿ ನಡೆದ ವಿಧಾನಮಂಡಲದ ಅಧಿವೇಶನದ ಕೊನೆಯ ದಿನ ಮುಖ್ಯಮಂತ್ರಿಯವರು ಈ ಸಂಬಂಧ ಆದೇಶ ಹೊರಡಿಸಿದ್ದರು ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಆ ಬಳಿಕ ಸಿದ್ದರಾಮಯ್ಯ ಅವರು ತಮ್ಮ ವಿರುದ್ಧದ ಮುಡಾ ಪ್ರಕರಣದ ಬಗ್ಗೆಯೂ ಲೋಕಾಯುಕ್ತ ತನಿಖೆ ಆಗಲಿ ಎಂದು ಹೇಳಲಾರಂಭಿಸಿದರು. ಲೋಕಾಯುಕ್ತ ಪೊಲೀಸ್ ಅಧಿಕಾರಿಗೆ ಹೆಚ್ಚುವರಿಯಾಗಿ ಸರ್ಕಾರದ ಅಧೀನ ಸಂಸ್ಥೆಗಳ ತನಿಖೆ ಜವಾಬ್ದಾರಿ ಕೊಟ್ಟ ಉದಾಹರಣೆ ಇಡೀ ದೇಶದಲ್ಲೇ ಇಲ್ಲ. ಇಂತಹ ಕೆಟ್ಟ ಪರಂಪರೆಗೆ ಸಿದ್ದರಾಮಯ್ಯ ನಾಂದಿ ಹಾಡಿದ್ದಾರೆ ಎಂದು ಅವರು ದೂರಿದರು.

ಷಡ್ಯಂತ್ರ ತಳ್ಳಿ ಹಾಕುವಂತಿಲ್ಲ: ರಾಜಣ್ಣ

ಹಾಸನ: ‘ಮುಡಾಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಮ್ಮ ಪಕ್ಷದವರು ಕೊಟ್ಟಿದ್ದಾರೋ, ಅವರ ಪಕ್ಷದವರು ಕೊಟ್ಟಿದ್ದಾರೋ ನಮಗೂ ಗೊತ್ತಿಲ್ಲ, ಅವರಿಗೂ ಗೊತ್ತಿಲ್ಲ. ಕೊಡುವಂಥದ್ದು, ತೆಗೆದುಕೊಳ್ಳುವಂಥದ್ದು ಏನೂ ಇರಲ್ಲ. ನಮ್ಮ ಪಕ್ಷದಲ್ಲೂ ಷಡ್ಯಂತ್ರಗಳು ನಡೆಯುತ್ತವೆ ಎನ್ನುವುದನ್ನು ನಾವು ತಳ್ಳಿ ಹಾಕುವಂತಿಲ್ಲ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

‘ಮುಡಾ ದಾಖಲೆ ಕೊಟ್ಟಿದ್ದೇ ಕಾಂಗ್ರೆಸ್‌ನವರು’ ಎಂಬ ಬಸನಗೌಡ ಪಾಟೀಲ ಯತ್ನಾಳ ಹೇಳಿಕೆಗೆ ತಾಲ್ಲೂಕಿನ ಗೊರೂರಿನಲ್ಲಿ ಸೋಮವಾರ ಪ್ರತಿಕ್ರಿಯಿಸಿ, ‘ಬಿಜೆಪಿಯಲ್ಲಿ ಷಡ್ಯಂತ್ರ ನಡೆಯಲ್ಲ ಎಂದು ಹೇಳುವುದಕ್ಕೂ ಆಗಲ್ಲ. ರಾಜಕಾರಣದಲ್ಲಿ ಇವೆಲ್ಲ ಇದ್ದದ್ದೆ. ಅಧಿಕಾರ ಪಡೆಯಲು ಎಲ್ಲ ಪಕ್ಷದವರು ಪ್ರಯತ್ನಿಸುತ್ತಾರೆ. ತಪ್ಪೇನಿಲ್ಲ’ ಎಂದರು.

‘ಮುಖ್ಯಮಂತ್ರಿ ಸೂಚಿಸಿದರೆ ರಾಜೀನಾಮೆ’

ಮೈಸೂರು: ‘ಸಿದ್ದರಾಮಯ್ಯನವರೇ ನನ್ನ ಮನೆದೇವರು ಮತ್ತು ಹೈಕಮಾಂಡ್. ಎಂದಿಗೂ ಅವರಿಗೆ ಹಾಗೂ ಅವರ ಕುಟುಂಬಕ್ಕೆ ದ್ರೋಹ ಬಗೆಯುವುದಿಲ್ಲ. ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡುವ ಯೋಚನೆ ಇಲ್ಲ. ಅವರು ಸೂಚಿಸಿದರೆ ಮಾತ್ರ ರಾಜೀನಾಮೆಗೆ ಸಿದ್ಧನಿದ್ದೇನೆ’ ಎಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಅಧ್ಯಕ್ಷ ಕೆ. ಮರೀಗೌಡ ಸ್ಪಷ್ಟನೆ ನೀಡಿದರು.

‘ಅವರ ಇಂದಿನ ಸ್ಥಿತಿಗೆ ನಾನೇ ಕಾರಣ ಎಂದು ಆರೋಪಿಸಿ ಕಾಂಗ್ರೆಸ್‌ನ ಕೆಲ ಕಾರ್ಯಕರ್ತರು ಇತ್ತೀಚೆಗೆ ಮೈಸೂರು ವಿಮಾನ ನಿಲ್ದಾಣದಲ್ಲಿ ನನ್ನ ಮೇಲೆ ಹಲ್ಲೆಗೆ ಯತ್ನಿಸಿದರು. ಸ್ವಪಕ್ಷೀಯರ ಈ ಗಲಾಟೆ ತೀವ್ರ ನೋವು ತಂದಿದೆ’ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಬೇಸರ ವ್ಯಕ್ತಪಡಿಸಿದರು.

‘ನಿನ್ನ ಕಾಲದಲ್ಲಿ ಏನೂ ಅವ್ಯವಹಾರವಾಗಿಲ್ಲ ಬಿಡು ಎಂದು ಸಿದ್ದರಾಮಯ್ಯ ಅವರೇ ಸಮಾಧಾನಪಡಿಸಿದ್ದಾರೆ. ನಮ್ಮ ಪಕ್ಷದವರೇ ನನ್ನ ತೇಜೋವಧೆ ಮಾಡುವುದನ್ನು ಬಿಡಬೇಕು. ಸಮುದಾಯದ ಮುಖಂಡರು ನನ್ನ ಬಗ್ಗೆ ತಪ್ಪು ಕಲ್ಪನೆಯನ್ನು ಬಿಡಬೇಕು’ ಎಂದು ಕೋರಿದರು.

‘ಸಿದ್ದರಾಮಯ್ಯ ರಾಜೀನಾಮೆ ನೀಡಲಿ’

ಹುಬ್ಬಳ್ಳಿ: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೈತಿಕತೆ ಇದ್ದರೆ ‘ಮುಡಾ’ದಲ್ಲಿ ಪಡೆದ 14 ನಿವೇಶನಗಳನ್ನು ವಾಪಸ್ ನೀಡಿ, ರಾಜೀನಾಮೆ ಕೊಡಬೇಕು’ ಎಂದು ಸಮಾಜ ಪರಿವರ್ತನಾ ಸಮುದಾಯ ಸಂಘಟನೆಯ ಮುಖ್ಯಸ್ಥ ಎಸ್.ಆರ್. ಹಿರೇಮಠ ಆಗ್ರಹಿಸಿದರು.

‘ಮೂರು ಎಕರೆ ಜಮೀನಿಗೆ ₹56 ಕೋಟಿ ಕೊಟ್ಟಿರುವುದಕ್ಕೆ ಅರ್ಥವಿದೆಯೇ? ರಾಜ್ಯದಲ್ಲಿ ಭೂಮಿ ಕಳೆದುಕೊಂಡವರಿಗೆ ಇಷ್ಟೊಂದು ಪ್ರಮಾಣದಲ್ಲಿ ಹಣ ಕೊಟ್ಟ ಉದಾಹರಣೆ ಇದೆಯೇ’ ಎಂದು ಅವರು ಸೋಮವಾರ ಪ್ರಶ್ನಿಸಿದರು.

‘ರಾಜೀನಾಮೆ ನೀಡಿದ ಬಳಿಕ ಸಿದ್ದರಾಮಯ್ಯ ಅವರು ಮುಂದಿನ ಮುಖ್ಯಮಂತ್ರಿ ಸ್ಥಾನಕ್ಕೆ ಸೂಕ್ತ ವ್ಯಕ್ತಿ ಆಯ್ಕೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಬೇಕು. ಸದ್ಯ ಉಪಮುಖ್ಯಮಂತ್ರಿ ಯಾರು? ಅವರು ಈ ಹಿಂದೆ ಏನು ಮಾಡಿದ್ದರು ಎಂಬುದು ಎಲ್ಲರಿಗೂ ಗೊತ್ತು. ಅಂಥವರು ಸಾರ್ವಜನಿಕ ಜೀವನದ ಬದಲು ಜೈಲಿನಲ್ಲಿ ಇರಬೇಕು. ಅಂಥವರನ್ನು ಮುಖ್ಯಮಂತ್ರಿ ಮಾಡಿದರೆ, ರಾಜ್ಯದ ಜನರಿಗೆ ಅನ್ಯಾಯ ಮಾಡಿದಂತಾಗುತ್ತದೆ’ ಎಂದರು.

‘ಬಿಜೆಪಿಯಲ್ಲಿ ಸಿದ್ದರಾಮಯ್ಯ ಮೋರ್ಚಾ ಸೃಷ್ಟಿ’

ಮೈಸೂರು: ‘ಬಿಜೆಪಿಯಲ್ಲಿ ಸಿದ್ದರಾಮಯ್ಯ ಮೋರ್ಚಾ ಆರಂಭವಾಗಿದೆ. ಬಸನಗೌಡ ಪಾಟೀಲ ಯತ್ನಾಳ, ಪ್ರತಾಪ ಸಿಂಹ, ರಮೇಶ್ ಜಾರಕಿಹೊಳಿ ಮುಖ್ಯಮಂತ್ರಿಯ ಪರವಾಗಿ ಮಾತನಾಡುತ್ತಿದ್ದು, ಒಂದು ಪಕ್ಷದ ನಾಯಕರೆಂದು ಕರೆದುಕೊಳ್ಳುವ ಅವರಿಗೆ ನಾಚಿಕೆಯಾಗಬೇಕು’ ಎಂದು ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಅಭಿಪ್ರಾಯಪಟ್ಟರು.

‘ಮುಡಾ ನಿವೇಶನ ಹಂಚಿಕೆ ಪ್ರಕರಣದಿಂದ ಜನರ ಗಮನವನ್ನು ಬೇರೆಡೆಗೆ ತಿರುಗಿಸುವ ಪ್ರಯತ್ನ ನಡೆಯುತ್ತಿದೆ. ಅದಕ್ಕಾಗಿ ಮಹಿಷ ದಸರಾ ಕುರಿತು ಮಾತನಾಡುತ್ತಿದ್ದಾರೆ’ ಎಂದು ಸೋಮವಾರ ಇಲ್ಲಿ ದೂರಿದರು.



ಕಲಾಕೃತಿ... ಪ್ರವಾಸೋದ್ಯಮ ದಿನದ ಪ್ರಯುಕ್ತ ಕಾರವಾರದ ಟ್ಯಾಗೋರ್ ಕಡಲತೀರದಲ್ಲಿ ಕಲಾವಿದರು ಉತ್ತರ ಕನ್ನಡ ಜಿಲ್ಲೆಯ ಯಾಣದ ಭೈರವೇಶ್ವರ ಶಿಖರ ಮತ್ತು ಜಿಲ್ಲೆಯ ಸಾಂಸ್ಕೃತಿಕ ಕಲಾ ಸಿರಿವಂತಿಕೆ ಸಾರುವ ಮರಳು ಕಲಾಕೃತಿಯನ್ನು ಸಿದ್ಧಪಡಿಸಿದರು ಪ್ರಜಾವಾಣಿ ಚಿತ್ರ:ಗಣಪತಿ ಹೆಗಡೆ



ಎಡಿಜಿಪಿ ಎಂ. ಚಂದ್ರಶೇಖರ್ ಅವರನ್ನು ಅಮಾನತು ಮಾಡುವಂತೆ ಆಗ್ರಹಿಸಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ. ಸುರೇಶ್ ಬಾಬು ನೇತೃತ್ವದ ನಿಯೋಗವು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಸೋಮವಾರ ದೂರು ನೀಡಿತು

ಸಿದ್ದರಾಮಯ್ಯಗೆ ಇ.ಡಿ. ಬಲೆ

ಒಂದನೇ ಪುಟದಿಂದ...

ಅಕ್ರಮವಾಗಿ ನಿವೇಶನಗಳನ್ನು ಪಡೆದ ಆರೋಪದ ಮೇಲೆ ಸಿದ್ದರಾಮಯ್ಯ, ಪತ್ನಿ ಬಿ.ಎಂ. ಪಾರ್ವತಿ, ಬಾಮೈದ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಜಮೀನಿನ ಮಾಲೀಕ ದೇವರಾಜ್ ವಿರುದ್ಧ ಮೈಸೂರಿನ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಅದರ ಬೆನ್ನಲ್ಲೇ, ಮುಖ್ಯಮಂತ್ರಿ ವಿರುದ್ಧ ಸ್ನೇಹಮಯಿ ಕೃಷ್ಣ ಜಾರಿ ನಿರ್ದೇಶನಾಲಯಕ್ಕೆ ದೂರು ನೀಡಿದ್ದರು. ಆದರೆ, ಇ.ಡಿ ಅಧಿಕಾರಿಗಳು ಸಿ.ಎಂ ವಿರುದ್ಧ ಸ್ವಯಂಪ್ರೇರಿತ ಪ್ರಕರಣವನ್ನೇ ದಾಖಲಿಸಿದ್ದಾರೆ.

‘ಇ.ಡಿ. ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಲು ಕಾನೂನಿನಲ್ಲಿ ಅವಕಾಶ ಇಲ್ಲ. ಇತರ ತನಿಖಾ ಸಂಸ್ಥೆಗಳು ದಾಖಲಿಸಿದ ಎಫ್‌ಐಆರ್‌ಗಳನ್ನು ಅವಲಂಬಿಸಬೇಕಾಗುತ್ತದೆ. ಲೋಕಾಯುಕ್ತ ಪೊಲೀಸರ ಎಫ್‌ಐಆರ್ ಅಧ್ಯಯನ ನಡೆಸಿದ ಬಳಿಕ ಇ.ಡಿ. ಅಧಿಕಾರಿಗಳು ಮುಖ್ಯಮಂತ್ರಿ ಮತ್ತು ಇತರರ ವಿರುದ್ಧ ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ ವಿವಿಧ ಸೆಕ್ಷನ್‌ಗಳಡಿ ಇಸಿಐಆರ್ ದಾಖಲಿಸಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಕೇಜ್ರಿವಾಲ್, ಸೊರೇನ್ ಸಾಲಿಗೆ ಸಿ.ಎಂ

ಅಧಿಕಾರದಲ್ಲಿದ್ದಾಗ ಜಾರಿ ನಿರ್ದೇಶನಾಲಯ ಸೇರಿದಂತೆ ಕೇಂದ್ರೀಯ ತನಿಖಾ ಸಂಸ್ಥೆಗಳಿಂದ ತನಿಖೆ ಎದುರಿಸಿದ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್, ದೆಹಲಿಯ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಾಲಿಗೆ ಸಿದ್ದರಾಮಯ್ಯ ಸೇರಿದ್ದಾರೆ.

ಭೂಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಸೊರೇನ್ ಅವರನ್ನು ಜನವರಿಯಲ್ಲಿ ಹಾಗೂ ಅಬಕಾರಿ ನೀತಿ ಹಗರಣದಲ್ಲಿ ಕೇಜ್ರಿವಾಲ್ ಅವರನ್ನು ಮಾರ್ಚ್‌ನಲ್ಲಿ ಬಂಧಿಸಲಾಗಿತ್ತು. ಆರು ತಿಂಗಳ ಬಳಿಕ ಉಭಯ ನಾಯಕರಿಗೆ ಜಾಮೀನು ಸಿಕ್ಕಿತ್ತು.

ದರ್ಶನ್ ಜಾಮೀನು ಅರ್ಜಿ ವಿಚಾರಣೆ ಮುಂದೂಡಿಕೆ

ಬೆಂಗಳೂರು: ಚಿತ್ರದುರ್ಗದ ರೇಣುಕ ಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ನಟ ದರ್ಶನ್ ಹಾಗೂ ಅವರ ಆಪ್ತೆ ಪವಿತ್ರಾಗೌಡ ಸಲ್ಲಿಸಿದ್ದ ಜಾಮೀನು ಅರ್ಜಿ ವಿಚಾರಣೆಯನ್ನು ನ್ಯಾಯಾಲಯವು ಅ. 4ಕ್ಕೆ ಮುಂದೂಡಿತು.

ದರ್ಶನ್‌ಗೆ ಜಾಮೀನು ಕೋರಿ ವಕೀಲ ಎಸ್.ಸುನಿಲ್ ಕುಮಾರ್ ನಗರದ 57ನೇ ಸಿಸಿಎಚ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ನ್ಯಾಯಾಧೀಶ ಜಯಶಂಕರ ಎದುರು ಸೋಮವಾರ ಈ ಅರ್ಜಿಯ ವಿಚಾರಣೆಗೆ ಬಂದಿತ್ತು.

ವಿಚಾರಣೆ ಆರಂಭ ಆಗುತ್ತಿದ್ದಂತೆ ಸುನಿಲ್ ಕುಮಾರ್ ಅವರು, ‘ವಿಶೇಷ ಪ್ರಾಸಿಕ್ಯೂಟರ್ ಆಕ್ಷೇಪಣೆ ಸಲ್ಲಿಸಿದ್ದು ವಾದ ಮಂಡಿಸಲು ಕಾಲಾವಕಾಶ ನೀಡಬೇಕು’ ಎಂದು ಕೋರಿದರು.

ಇದಕ್ಕೆ ಸಮ್ಮತಿಸಿದ ನ್ಯಾಯಾಧೀಶರು ವಿಚಾರಣೆಯನ್ನು ಮುಂದೂಡಿದರು. ಇದೇ ವೇಳೆ ಪವಿತ್ರಾಗೌಡ, ರವಿಶಂಕರ್ ಸೇರಿ ಇತರೆ ಆರೋಪಿಗಳ ಜಾಮೀನು ಅರ್ಜಿಯ ವಿಚಾರಣೆಯನ್ನೂ ನ್ಯಾಯಾಲಯ ಮುಂದೂಡಿತು.

ಪರಮೇಶ್ವರ– ಡಿಕೆಶಿ ಚರ್ಚೆ

ಬೆಂಗಳೂರು: ಮುಡಾ ಪ್ರಕರಣದ ತನಿಖೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸುತ್ತಿಕೊಳ್ಳುತ್ತಿರುವ ಬೆನ್ನಲ್ಲೆ, ಉಪ ಮುಖ್ಯಮಂತ್ರಿಯೂ ಆಗಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಗೃಹ ಸಚಿವ ಜಿ. ಪರಮೇಶ್ವರ ಚರ್ಚೆ ನಡೆಸಿರುವುದು ನಾನಾ ವ್ಯಾಖ್ಯಾನಗಳಿಗೆ ಕಾರಣವಾಗಿದೆ.

ಖುದ್ದು ಡಿ.ಕೆ. ಶಿವಕುಮಾರ್ ಅವರೇ ಪರಮೇಶ್ವರ ಅವರ ಮನೆಗೆ ಸೋಮವಾರ ಭೇಟಿ ನೀಡಿ ಒಂದು ಗಂಟೆಗೂ ಹೆಚ್ಚು ಸಮಯ ಗೋಪ್ಯವಾಗಿ ಚರ್ಚೆ ನಡೆಸಿದರು. ಆದರೆ, ಇಬ್ಬರು ಸಚಿವರೂ, ‘ನಾವು ಎತ್ತಿನಹೊಳೆ ಯೋಜನೆ ಅನುಷ್ಠಾನ ವಿಚಾರವಾಗಿ ಚರ್ಚಿಸಿದ್ದೇವೆ. ಇದಕ್ಕೆ ಬೇರೆ ಅರ್ಥ ಕಲ್ಪಿಸುವ ಅಗತ್ಯ ಇಲ್ಲ’ ಎಂದಿದ್ದಾರೆ.

‘ಶಿವಕುಮಾರ್ ಅವರು ಕೆಪಿಸಿಸಿ ಅಧ್ಯಕ್ಷರಿದ್ದಾರೆ. ನಾವು ಮಾತಾಡಿಕೊಳ್ಳದಿದ್ದರೆ ಇನ್ಯಾರು ಮಾತಾಡಿಕೊಳ್ಳಬೇಕು? ನಮ್ಮ ಸಮಸ್ಯೆಗಳ ಬಗ್ಗೆ ನಾವೇ ಚರ್ಚೆ ಮಾಡಬೇಕು. ನಾನು ಮತ್ತು ಶಿವಕುಮಾರ್ ಅವರು ಹೊಸದಾಗಿ ಭೇಟಿ ಆಗುತ್ತಿದ್ದೇವೆಯೇ? ಎಂದು ಪರಮೇಶ್ವರ ಹೇಳಿದ್ದಾರೆ.

‘ನೀವಿಬ್ಬರೂ ರಾಜಕೀಯದ ಕುರಿತು ಚರ್ಚೆ ಮಾಡಿದ್ದೀರಾ’ ಎಂಬ ಪ್ರಶ್ನೆಗೆ ಖಾರವಾಗಿ ಪ್ರತಿಕ್ರಿಯಿಸಿದ ಡಿ.ಕೆ. ಶಿವಕುಮಾರ್, ‘ನಿಮಗೆ (ಮಾಧ್ಯಮ) ರಾಜಕೀಯ ಬಿಟ್ಟು ಬೇರೆ ಗೊತ್ತಿಲ್ಲವೇ? ರಾಜಕೀಯ ಕುರಿತು ಪ್ರತಿದಿನವೂ ಮಾತನಾಡುತ್ತಲೇ ಇರುತ್ತೇವೆ. ಜನ ನಮಗೆ ಅಧಿಕಾರ ನೀಡಿದ್ದಾರೆ. ಕೊಟ್ಟ ಭರವಸೆಗಳನ್ನು ಈಡೇರಿಸುವತ್ತ ಮತ್ತು ಪ್ರಣಾಳಿಕೆಯಲ್ಲಿನ ಆಶ್ವಾಸನೆಗಳನ್ನು ಪೂರ್ಣಗೊಳಿಸಲು ಹೆಚ್ಚಿನ ಆದ್ಯತೆ ನೀಡುತ್ತೇವೆ’ ಎಂದಿದ್ದಾರೆ.

ಮುಖ್ಯಮಂತ್ರಿ ಸ್ಥಾನ– ಚರ್ಚೆ?: ‘ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳಾದ ಈ ಇಬ್ಬರು ನಾಯಕರು, ಮುಡಾ ಪ್ರಕರಣದಲ್ಲಿನ ಸದ್ಯದ ಬೆಳವಣಿಗೆಗಳು, ಬೀರಬಹುದಾದ ರಾಜಕೀಯ ಸೂಕ್ಷ್ಮ ಪರಿಣಾಮಗಳು ಮತ್ತು ಮುಖ್ಯಮಂತ್ರಿ ಬದಲಾವಣೆ ವಿಚಾರ ಕುರಿತು ಚರ್ಚೆ ನಡೆಸಿದ್ದಾರೆ. ಸಿದ್ದರಾಮಯ್ಯ ಅವರು ಕೆಳಗಿಳಿಯುವ ಸಂದರ್ಭ ಬಂದರೆ ಹೈಕಮಾಂಡ್ ಮುಂದೆ ವ್ಯಕ್ತಪಡಿಸಬೇಕಾದ ನಿಲುವಿನ ಬಗ್ಗೆ ಇಬ್ಬರೂ ವಿಚಾರ ವಿನಿಮಯ ನಡೆಸಿದ್ದಾರೆ’ ಎಂದೂ ಗೊತ್ತಾಗಿದೆ.

ಎಡಿಜಿಪಿ ಎಂ.ಚಂದ್ರಶೇಖರ್ ವಿರುದ್ಧ ಕ್ರಮಕ್ಕೆ ಒತ್ತಾಯ

ಸಿಎಸ್‌ಗೆ ಜೆಡಿಎಸ್ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೋಕಾಯುಕ್ತ ವಿಶೇಷ ತನಿಖಾ ದಳದ (ಎಸ್‌ಐಟಿ) ಮುಖ್ಯಸ್ಥ ಎಡಿಜಿಪಿ ಎಂ. ಚಂದ್ರಶೇಖರ್ ಅವರನ್ನು ತಕ್ಷಣ ಅಮಾನತು ಮಾಡಬೇಕು’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಸಿ.ಬಿ. ಸುರೇಶ್ ಬಾಬು ನೇತೃತ್ವದ ನಿಯೋಗ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಒತ್ತಾಯಿಸಿದೆ.

‘ಎಂ. ಚಂದ್ರಶೇಖರ್ ಅವರ ವಿರುದ್ಧ ದಾಖಲಾಗಿರುವ ಎಫ್‌ಐಆರ್‌ಗಳು, ಕೋರ್ಟ್ ಪ್ರಕರಣಗಳು ಮತ್ತು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಅವಹೇಳನಕಾರಿ ಪದಬಳಸಿ ವ್ಯಕ್ತಿತ್ವಕ್ಕೆ ಧಕ್ಕೆ ತಂದಿರುವ ಕಾರಣ ಅವರನ್ನು ಕರ್ತವ್ಯದಿಂದ ತಕ್ಷಣ ಅಮಾನತುಗೊಳಿಸಬೇಕು. ಅಲ್ಲದೆ, ಉನ್ನತ ಮಟ್ಟದ ತನಿಖೆ ನಡೆಸಿ ಶಿಸ್ತುಕ್ರಮ ಕೈಗೊಳ್ಳಲು ಕೇಂದ್ರ ಗೃಹ ಸಚಿವಾಲಯಕ್ಕೆ ಪ್ರಸ್ತಾವವನ್ನು ರಾಜ್ಯ ಸರ್ಕಾರದ ಶಿಫಾರಸಿನೊಂದಿಗೆ ಕಳುಹಿಸಬೇಕು’ ಎಂದು ಶಾಲಿನಿ ಅವರನ್ನು ಸೋಮವಾರ ಭೇಟಿ ಮಾಡಿದ್ದ ನಿಯೋಗ ಆಗ್ರಹಿಸಿದೆ.

‘ಹಿಮಾಚಲ ಪ್ರದೇಶ ಐಪಿಎಸ್ ಕೇಡರ್‌ಗೆ ಸೇರಿದ ಚಂದ್ರಶೇಖರ್, ತಮ್ಮ ಪತ್ನಿಯ ಅನಾರೋಗ್ಯ ಮತ್ತು ಹಿಮಾಚಲ ಪ್ರದೇಶದ ವಾತಾವರಣ ಮತ್ತು ಹವಾಗುಣ ಹೊಂದುವುದಿಲ್ಲ ಎನ್ನುವ ನೆಪ ಹೇಳಿ, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಮತ್ತು ರಾಜಕೀಯ ಪ್ರಭಾವ ಬೀರಿ ಕರ್ನಾಟಕಕ್ಕೆ ವರ್ಗಾವಣೆಗೊಂಡಿದ್ದಾರೆ. ಬಳಿಕ ಇಲ್ಲಿನ ಐಪಿಎಸ್ ಕೇಡರ್‌ನಲ್ಲಿ ವಿಲೀನಗೊಂಡಿದ್ದಾರೆ’ ಎಂದು ಪತ್ರದಲ್ಲಿ ಆರೋಪಿಸಲಾಗಿದೆ.

ಸುದ್ದಿಗಾರರ ಜೊತೆ ಮಾತನಾಡಿದ ಸುರೇಶ್ ಬಾಬು, ‘ಐಪಿಎಸ್ ಅಧಿಕಾರಿ ಲಂಗುಲಗಾಮಿಲ್ಲದೆ ನಾಲಿಗೆ ಹರಿಬಿಟ್ಟಿದ್ದಾರೆ. ಅವರ ವಿರುದ್ಧ ಮುಖ್ಯ ಕಾರ್ಯದರ್ಶಿಗೆ ದೂರು ನೀಡಿದ್ದೇವೆ. ಸರ್ಕಾರಿ ಅಧಿಕಾರಿಯೊಬ್ಬರು ಕೇಂದ್ರ ಸಚಿವರ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ. ರಾಜ್ಯಪಾಲರ ಕಚೇರಿಯನ್ನು ತನಿಖೆ ಮಾಡುತ್ತೇನೆಂಬ ಉದ್ಧಟತನ ಮೆರೆದಿದ್ದಾರೆ’ ಎಂದು ವಾಗ್ದಾಳಿ ನಡೆಸಿದರು.

‘ದುಷ್ಟರಿಗೆ ಕುಮ್ಮಕ್ಕು ನೀಡುತ್ತಿರುವ ಚಂದ್ರಶೇಖರ್ ಒಬ್ಬ ಬ್ಲ್ಯಾಕ್‌ಮೇಲರ್. ಅವರ ವಿರುದ್ಧ ಕೇಂದ್ರ ಗೃಹ ಇಲಾಖೆಗೂ ದೂರು ನೀಡುತ್ತೇವೆ. ಇಂಥ ಅಧಿಕಾರಿಗಳು ರಾಜ್ಯದಲ್ಲಿ ಇರಲು ನಾಲಾಯಕ್. ಅವರನ್ನು ರಾಜ್ಯದಿಂದ ಓಡಿಸಬೇಕು’ ಎಂದೂ ಆಗ್ರಹಿಸಿದರು. ಶಾಸಕರಾದ ಕರೆಮ್ಮ ನಾಯಕ್, ಶಾರದಾ ಪೂರ್ಯಾನಾಯ್ಕ್, ವೆಂಕಟಶಿವಾರೆಡ್ಡಿ ಮತ್ತಿತರರು ಇದ್ದರು.

ಅಧಿಕಾರಿ ವಿರುದ್ಧ ಕ್ರಮಕ್ಕೆ ಅಶೋಕ ಆಗ್ರಹ

ಎಚ್.ಡಿ.ಕುಮಾರಸ್ವಾಮಿಯವರನ್ನು ನಿಂದಿಸಿರುವ ಲೋಕಾಯುಕ್ತ ಎಡಿಜಿಪಿ ಎಂ.ಚಂದ್ರಶೇಖರ್ ವಿರುದ್ಧ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮ ತೆಗೆದುಕೊಳ್ಳಬೇಕು ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ಒತ್ತಾಯಿಸಿದ್ದಾರೆ.

‘ಕಾನೂನಿನಿಂದ ನುಣುಚಿಕೊಳ್ಳಲು ನೇರವಾಗಿ ಪತ್ರ ಬರೆಯದೆ, ಕೆಳಹಂತದ ಅಧಿಕಾರಿಗಳಿಗೆ ಪತ್ರ ಬರೆಯಲಾಗಿದೆ. ಅಧಿಕಾರಿ ತನ್ನ ಮಿತಿ ಮೀರಿ ವರ್ತಿಸಿರುವುದು ಖಂಡನೀಯ. ಸರ್ಕಾರದ ಮುಖ್ಯಕಾರ್ಯದರ್ಶಿ ಇವರ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ. ದೇಶಪಾಂಡೆ

ಬಿಪಿಎಲ್ ಮಾನದಂಡ ಪರಿಶೀಲನೆಗೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಪಿಎಲ್ (ಬಡತನ ರೇಖೆಗಿಂತ ಕೆಳಗಿನ) ಮಾನದಂಡಗಳ ಪರಿಶೀಲನೆಗೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯೂ ಆಗಿರುವ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಉಪ ಸಮಿತಿ ರಚಿಸಲಾಗಿದೆ’ ಎಂದು ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ. ದೇಶಪಾಂಡೆ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ಆದಾಯ ತೆರಿಗೆ ಪಾವತಿದಾರರು, ಸರ್ಕಾರಿ ನೌಕರರು ಬಿಪಿಎಲ್ ಪಡಿತರ ಚೀಟಿ ಹೊಂದಿರುವ ದೂರುಗಳು ಇವೆ. ಬಿಪಿಎಲ್ ಪಡಿತರ ಚೀಟಿ ಮಾನದಂಡಗಳ ಜೊತೆಗೆ, ಸರ್ಕಾರದ ಪ್ರಾಯೋಜಿತ ಯೋಜನೆಗಳನ್ನೂ ಈ ಸಮಿತಿ ಪರಿಶೀಲಿಸಿ ಸಲಹೆಗಳನ್ನು ನೀಡಲಿದೆ’ ಎಂದರು.

‘ಆಡಳಿತದಲ್ಲಿ ಸುಧಾರಣೆ, ಸರಳೀಕರಣ, ನಾಗರಿಕ ಸೇವೆಗಳ ತ್ವರಿತ ವಿಲೇವಾರಿ ದೃಷ್ಟಿಯಿಂದ ಮುಖ್ಯಮಂತ್ರಿ, ಸಚಿವರು ಮತ್ತು ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳ ಜತೆಗೆ ಚರ್ಚೆ ನಡೆಸಲಾಗಿದೆ. ಉತ್ತರ ಕನ್ನಡ, ಬೆಳಗಾವಿ, ಧಾರವಾಡ ಜಿಲ್ಲೆಗಳಿಗೆ ಭೇಟಿ ನೀಡಿ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಸಭೆ, ಸಾರ್ವಜನಿಕರಿಂದಲೂ ಅಭಿಪ್ರಾಯ ಸಂಗ್ರಹಿಸಲಾಗಿದೆ’ ಎಂದರು.

‘ಪ್ರಮುಖ ಇಲಾಖೆಗಳ ಕೆಳಹಂತದಲ್ಲಿ ಖಾಲಿಯಿರುವ ಹುದ್ದೆಗಳ ಭರ್ತಿ, ಕೆಲಸದ ಹೊರೆ ಹೆಚ್ಚಿರುವ ಜಿಲ್ಲೆಗಳಿಗೆ ಮರು ನಿಯೋಜನೆ, ಅನಗತ್ಯವೆಂದು ಪರಿಗಣಿಸಲಾಗಿರುವ ಲಿಪಿಕ ಹುದ್ದೆಗಳನ್ನು ತಾಂತ್ರಿಕ ಹುದ್ದೆಗಳಾಗಿ ಪರಿವರ್ತಿಸಲು ಸಲಹೆ ನೀಡಲಾಗಿದೆ. ಸಿಬ್ಬಂದಿಯ ಮೇಲಿನ ಕೆಲಸದ ಹೊರೆಯನ್ನು ಕಡಿಮೆ ಮಾಡಲು ಇ-ಆಫೀಸ್, ಎಂಡ್- ಟು- ಎಂಡ್ ಆನ್‌ಲೈನ್ ಸೇವೆಗಳು ಮತ್ತು ತಂತ್ರಜ್ಞಾನವನ್ನು ಬಳಸಿಕೊಳ್ಳಲು ಸಲಹೆ ನೀಡಲಾಗಿದೆ. ತ್ವರಿತ ಕಡತ ವಿಲೇವಾರಿಗೆ ಅನುಕೂಲ ಆಗುವಂತೆ, ಕಡತ ಚಲನವಲನದ ಹಂತಗಳನ್ನು 3- 4 ಹಂತಗಳಿಗೆ ಇಳಿಸಲಾಗುವುದು’ ಎಂದು ವಿವರಿಸಿದರು.

‘ಕಚೇರಿಗಳಿಗೆ ಜನರ ಅಲೆದಾಟ ತಪ್ಪಿಸಲು ಮತ್ತು ದಕ್ಷತೆ ಹೆಚ್ಚಿಸಲು 19 ಇಲಾಖೆಗಳಿಗೆ ಸಂಬಂಧಿಸಿದ 2,871 ಶಿಫಾರಸುಗಳನ್ನು ಆಯೋಗ ಮಾಡಿದೆ. ಅವುಗಳಲ್ಲಿ 853 ಶಿಫಾರಸುಗಳನ್ನು ಸರ್ಕಾರ ಅನುಷ್ಠಾನಕ್ಕೆ ತಂದಿದೆ. 592 ಶಿಫಾರಸುಗಳನ್ನು ತಿಂಗಳೊಳಗೆ ಅನುಷ್ಠಾನಕ್ಕೆ ತರಲು ನಿರ್ದೇಶನ ನೀಡಲಾಗಿದೆ’ ಎಂದೂ ದೇಶಪಾಂಡೆ ಹೇಳಿದರು.

‘ನಿಗಮ– ಮಂಡಳಿಗಳಿಗೆ ಬಲ’

‘ಕೆಲವು ಇಲಾಖೆಗಳು, ನಿಗಮ– ಮಂಡಳಿಗಳನ್ನು ವಿಲೀನಗೊಳಿಸುವ ಸಾಧ್ಯತೆಯನ್ನು ಪರಿಶೀಲಿಸಲಾಗುತ್ತಿದೆ. 160 ನಿಗಮ-ಮಂಡಳಿಗಳ ಪೈಕಿ, 53 ಮಾತ್ರ ಆರ್ಥಿಕವಾಗಿ ಲಾಭದಲ್ಲಿವೆ. ಉಳಿದ 107 ನಿಗಮ-ಮಂಡಳಿಗಳಿಗೆ ಬಲವರ್ಧನೆ ಅಥವಾ ವಿಲೀನದಂತಹ ಕ್ರಮದ ಅಗತ್ಯವಿದೆ. ಆರ್ಥಿಕವಾಗಿ ಬಲಪಡಿಸಿ, ಲಾಭದ ಹಳಿಗೆ ತರಬಹುದಾದ ನಿಗಮ– ಮಂಡಳಿಗಳನ್ನು ಗುರುತಿಸಿ ಬಲವರ್ಧನೆಗೆ ಕೈಗೊಳ್ಳಬೇಕಾದ ಕ್ರಮಗಳು, ಬೊಕ್ಕಸಕ್ಕೆ ಹೊರೆಯಾದ ನಿಗಮ-ಮಂಡಳಿಗಳ ವಿಲೀನದ ಕುರಿತು ಸಲಹೆ ನೀಡಲು ಚಿಂತನೆ ನಡೆದಿದೆ’ ಎಂದು ದೇಶಪಾಂಡೆ ಹೇಳಿದರು.

ಫುಟ್‌ಪಾತ್‌ನಿಂದ ಫಾಲ್ಕೆ ಗರಿಯವರೆಗೆ...

ನೃತ್ಯ, ಅಭಿನಯ ಪ್ರಯೋಗ, ರಾಜಕೀಯ ಸಖ್ಯ–ಮೂರರ ಸಂಗಮ ಮಿಥುನ್

● ವಿಶಾಖ ಎನ್.

1976ರಲ್ಲಿ ಸಿನಿಮಾ ನಿರ್ದೇಶಕ ಮೃಣಾಲ್ ಸೇನ್ ರಾಜಕೀಯ ಚಿತ್ರಗಳನ್ನು ಮಾಡುವುದರಿಂದ ಬಿಡುವು ಪಡೆದುಕೊಳ್ಳಲು ನಿರ್ಧರಿಸಿದರು. ಅದಕ್ಕೂ ಎರಡು ವರ್ಷಗಳ ಹಿಂದೆ ಬಂದಿದ್ದ 'ಕೋರಸ್' ಬಂಗಾಳಿ ಚಿತ್ರದಿಂದ ಅವರು ದೊಡ್ಡ ನಷ್ಟ ಅನುಭವಿಸಿದ್ದರು. ಹೀಗಾಗಿ ಒಂದು 'ಪೀರಿಯೆಡ್' ಸಿನಿಮಾ ಮಾಡಲು ಮುಂದಾದರು. ತಾರಾ ನಟ–ನಟಿಯರ ಹಂಗಿಲ್ಲದೆ, ಹೊಸಮುಖಗಳನ್ನು ನಾಯಕ–ನಾಯಕಿಯಾಗಿ ಆಯ್ಕೆ ಮಾಡಿಕೊಂಡರು. ಪುಣೆಯ ಫಿಲ್ಮ್ ಆ್ಯಂಡ್ ಟೆಲಿವಿಷನ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾನಲ್ಲಿ (ಎಫ್‌ಟಿಐಐ) ಕಲಿಯುತ್ತಿದ್ದ ಹುಡುಗನೊಬ್ಬ ಹಿಂದೊಮ್ಮೆ ಗಮನ ಸೆಳೆದಿದ್ದ. ಅವನನ್ನು ಮುಖ್ಯಪಾತ್ರಕ್ಕೆ ಹೆಕ್ಕಿಕೊಂಡರು. ಆ ನಟನಿಗೆ ಅದು ಮೊದಲ ಚಿತ್ರ. ಸಿನಿಮಾ ತೆರೆಕಂಡ ನಂತರ ಆ ಪಾತ್ರಧಾರಿಗೆ ರಾಷ್ಟ್ರ ಪ್ರಶಸ್ತಿ ಒಲಿದುಬಂತು. ಎಫ್‌ಟಿಐಐನಲ್ಲಿ ವಿದ್ಯಾರ್ಥಿಯಾಗಿದ್ದ ಆ ಹುಡುಗನೇ ಮಿಥುನ್ ಚಕ್ರವರ್ತಿ; ಈಗ 74 ವರ್ಷ ವಯಸ್ಸಿನ ಮಾಗಿದ ನಟ. ಅವರಿಗೀಗ ದಾದಾಸಾಹೇಬ್ ಫಾಲ್ಕೆ ಗೌರವದ ಗರಿ.

ಒಡಿಯಾ ಭಾಷೆಯ ಸಣ್ಣಕತೆಯೊಂದನ್ನು ಆಧರಿಸಿದ 'ಮೃಗಯಾ' ಹಿಂದಿ ಸಿನಿಮಾವನ್ನು ಮೃಣಾಲ್ ಸೇನ್ ಗೆಲ್ಲಿಸಿಕೊಂಡರು. ಅದರಿಂದ ಮಿಥುನ್ ಚಿತ್ರಬದುಕಿಗೂ ಮೊದಲ ತಿರುವು ಸಿಕ್ಕಿತು.

ಮಿಥುನ್ ಬಂಗಾಳದವರು. ಓದಿದ್ದು ಬಿ.ಎಸ್‌ಸಿ. ನಂತರ ನಕ್ಸಲ್ ಚಳವಳಿಯಲ್ಲಿ ಗುರ್ತಿಸಿಕೊಂಡರು. ಆಮೇಲೆ ಅದನ್ನು ತೊರೆದ ಅವರು, ಸಿನಿಮಾ ಕನಸು ಕಂಡರು. ಆರಂಭದ ದಿನಗಳಲ್ಲಿ ಅವಕಾಶಗಳು ಸುಲಭವಾಗಿಯೇನೂ ಸಿಗಲಿಲ್ಲ. ಆಡಿಷನ್‌ಗಳನ್ನು ಕೊಟ್ಟರು. ತಮ್ಮ ಕಪ್ಪು ಬಣ್ಣದ ಕಾರಣಕ್ಕೆ ತಿರಸ್ಕಾರಕ್ಕೆ ಒಳಗಾದರು. ಫುಟ್‌ಪಾತ್ ಮೇಲೆ ಮಲಗಿದ ರಾತ್ರಿಗಳಿದ್ದವು. ಒಂದು ಹೊತ್ತಿನ ಊಟದಲ್ಲೇ ದೂಡಿದ ದಿನಗಳನ್ನು ಅವರು ಈಗಲೂ ನೆನಪಿಸಿಕೊಳ್ಳುವುದುಂಟು. ಹಿಂದಿ ಚಿತ್ರರಂಗದಲ್ಲಿ ಒಂದು ಕಾಲು, ಬಂಗಾಳಿ ಚಿತ್ರರಂಗದಲ್ಲಿ ಇನ್ನೊಂದು ಕಾಲು ಇಟ್ಟು ಈಜಿದರು. 1982ನೇ ಇಸವಿ ಅವರಿಗೆ ಶುಕ್ರದೆಸೆ ತಂದಿತು. 'ಡಿಸ್ಕೊ ಡಾನ್ಸರ್' ಹಿಂದಿ ಸಿನಿಮಾ ದೊಡ್ಡ ಹಿಟ್ ಆಯಿತು. ಭಾರತದಲ್ಲಿ ಅಷ್ಟೇ ಅಲ್ಲದೆ ರಷ್ಯಾದಲ್ಲೂ ಜನಪ್ರಿಯತೆ ಗಳಿಸಿದ ಚಿತ್ರ ಅದು. ಮಿಥುನ್, ಡಾನ್ಸಿಂಗ್ ಸ್ಟಾರ್ ಆದರು. 'ಡಾನ್ಸ್ ಡಾನ್ಸ್' ಆ ಗುಣವಿಶೇಷಣಕ್ಕೆ ಉದಾಹರಣೆಯಾಗಿರುವ ಇನ್ನೊಂದು ಸಿನಿಮಾ. 'ಡಿಸ್ಕೊ ಡಾನ್ಸರ್' ಬಂದ ವರ್ಷವೇ 'ಟ್ರಾಯಿ' ಶೀರ್ಷಿಕೆಯ ಸಂಗೀತಪ್ರಧಾನವಾದ ಬಂಗಾಳಿ ಚಿತ್ರವೂ ತೆರೆಕಂಡು, ಮಿಥುನ್ ಗೆಲುವಿನ ಗ್ರಾಫ್ ಎದ್ದು ಕಾಣತೊಡಗಿತು.

ಮಿಥುನ್ ನಟನಾಗಿ ಮೊದಲ ದಿನಗಳಲ್ಲಿ ಸಣ್ಣಪುಟ್ಟ ಪಾತ್ರಗಳಿಗೂ ಒಲ್ಲೆ ಎನ್ನಲಿಲ್ಲ. 'ಮೃಗಯಾ' ತೆರೆಕಂಡ ವರ್ಷವೇ ಅಮಿತಾಭ್ ಬಚ್ಚನ್, ರೇಖಾ ಜೋಡಿಯಾಗಿದ್ದ 'ದೋ ಅಂಜಾನೆ' ಸಿನಿಮಾದಲ್ಲಿ ಚಿಕ್ಕ ಪಾತ್ರವೊಂದರಲ್ಲಿ ಕಾಣಿಸಿಕೊಂಡಿದ್ದೇ ಇದಕ್ಕೆ ಉದಾಹರಣೆ. ಅದಾಗಿ ಎರಡು ವರ್ಷಗಳಾದ ಮೇಲೆ, 1978ರಲ್ಲಿ 'ನದಿ ಥೇಕೆ ಸಾಗರೆ' ಚಿತ್ರದ ಮೂಲಕ ಅವರು ಬಂಗಾಳಿ ಚಿತ್ರರಂಗದಲ್ಲಿ ಇನಿಂಗ್ಸ್ ಶುರುಮಾಡಿದ್ದು.

'ಸುರಕ್ಷಾ', 'ಕಸಂ ಪೈದಾ ಕರ್ನೆ ವಾಲೆ ಕಿ', 'ಕಮಾಂಡೊ', 'ಪ್ಯಾರ್ ಝುಕ್ತಾ ನಹೀ', 'ಗುಲಾಮಿ', 'ಸ್ವರ್ಗ್ ಸೆ ಸುಂದರ್', 'ಅಗ್ನಿಪತ್' ಇವೆಲ್ಲವೂ ಮಿಥುನ್ ಅವರಿಗೆ ಹೆಸರು ತಂದುಕೊಟ್ಟ ಹಿಂದಿ ಚಿತ್ರಗಳು.

ಮಿಥುನ್ ಚಕ್ರವರ್ತಿ ಜನಪ್ರಿಯತೆಯ ದೊಡ್ಡ ಅಲೆಯ ಮೇಲೆ ಇದ್ದ ಸಂದರ್ಭದಲ್ಲಿಯೇ ದಿಲೀಪ್ ಕುಮಾರ್ ಹಾಗೂ ಸುನಿಲ್ ದತ್ ಜೊತೆಗೂಡಿ 'ಸಿನಿ ಅಂಡ್ ಟಿ.ವಿ. ಆರ್ಟಿಸ್ಟ್ಸ್ ಅಸೋಸಿಯೇಷನ್' ಎಂಬ ಟ್ರಸ್ಟ್ ಸ್ಥಾಪಿಸಿದರು. ಸಂಕಷ್ಟದಲ್ಲಿರುವ ಕಲಾವಿದರಿಗೆ ಸಹಾಯಹಸ್ತ ಚಾಚುವ ಸದುದ್ದೇಶದ ಟ್ರಸ್ಟ್ ಇದಾಗಿತ್ತು.

ವಿದ್ಯುದಾಘಾತದಿಂದ ಅಣ್ಣನು ಮೃತಪಟ್ಟ ನಂತರ ನಕ್ಸಲ್ ಚಳವಳಿಯನ್ನು ತೊರೆದು, ಮನೆಗೆ ಸೇರಿದ್ದವರು ಮಿಥುನ್. 2014ರಲ್ಲಿ ಅವರು ರಾಜಕೀಯ ಮೊಗಸಾಲೆಗೆ ಕಾಲಿಟ್ಟರು. ಎರಡು ವರ್ಷ ರಾಜ್ಯಸಭಾ ಸದಸ್ಯರಾಗಿದ್ದರು. 2021ರಲ್ಲಿ ಬಿಜೆಪಿ ಸೇರಿಕೊಂಡರು. ವಿವೇಕ್ ಅಗ್ನಿಹೋತ್ರಿ ನಿರ್ದೇಶನದ 'ಟಾಷ್ಕೆಂಟ್ ಫೈಲ್ಸ್', 'ಕಾಶ್ಮೀರ್ ಫೈಲ್ಸ್' ಸಿನಿಮಾದಲ್ಲಿ ಅಭಿನಯಿಸುವ ಮೂಲಕ ತಮ್ಮ ರಾಜಕೀಯ ನಿಲುವು ಏನು ಎನ್ನುವುದಕ್ಕೆ ಅಡಿಗೆರೆ ಎಳೆದರು.


ಇದೇ ವರ್ಷ ಅವರನ್ನು ಪದ್ಮಭೂಷಣ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿತ್ತು. ಇದೀಗ ಫಾಲ್ಕೆ ಗೌರವದ ಗರಿಯೂ ಮುಡಿಯೇರಿದೆ.

ಮೂರು ರಾಷ್ಟ್ರ ಪ್ರಶಸ್ತಿ

1990ರ ದಶಕದ ನಡುಘಟ್ಟದಲ್ಲಿ ಮಿಥುನ್ ಜನಪ್ರಿಯತೆ ಕಡಿಮೆಯಾಯಿತು. ಆಗ ಅವರು ಪರ್ಯಾಯ ಸಿನಿಮಾಗಳಲ್ಲಿ ತೊಡಗಿಕೊಂಡರು. ಅದೇ ಸಂದರ್ಭದಲ್ಲಿ ಜಿ.ವಿ. ಅಯ್ಯರ್ ನಿರ್ದೇಶನದ 'ರಾಮಕೃಷ್ಣ ಪರಮಹಂಸ' ಆತ್ಮಕಥಾ ಚಿತ್ರ ದೂರದರ್ಶನದಲ್ಲಿ ಪ್ರಸಾರವಾಗಿದ್ದು, 1998ರಲ್ಲಿ ಈ ಚಿತ್ರದಲ್ಲಿನ ಪರಮಹಂಸರ ಪಾತ್ರದ ಅಭಿನಯಕ್ಕೆ ರಾಷ್ಟ್ರ ಪ್ರಶಸ್ತಿ ಸಂದಿತು. ಅದಕ್ಕೂ ಮೊದಲು 'ತಹದೇಶ್ ಕಥಾ' ಬಂಗಾಳಿ ಚಿತ್ರದ ನಟನೆಗೂ ರಾಷ್ಟ್ರಪ್ರಶಸ್ತಿಗೆ ಭಾಜನರಾಗಿದ್ದರು. ಚೊಚ್ಚಲ ಸಿನಿಮಾ ಪ್ರಶಸ್ತಿಯೂ ಸೇರಿ ಒಟ್ಟು ಮೂರು ರಾಷ್ಟ್ರ ಪ್ರಶಸ್ತಿಗಳು ಅವರನ್ನು ಅಲಂಕರಿಸಿವೆ.

'ಅಗ್ನಿಪತ್' ಚಿತ್ರದ ಪೋಷಕ ಪಾತ್ರಕ್ಕಾಗಿ ಫಿಲ್ಮ್‌ಫೇರ್ ಪ್ರಶಸ್ತಿ ಪಡೆದಿದ್ದ ಅವರು, 1989ರಲ್ಲಿ 19 ಸಿನಿಮಾಗಳಲ್ಲಿ ನಟಿಸಿ, ಲಿಮ್ಕಾ ದಾಖಲೆಯನ್ನೂ ನಿರ್ಮಿಸಿದ್ದರು. ಸಣ್ಣ ಬಜೆಟ್‌ನ ಚಿತ್ರನಿರ್ಮಾಣದಲ್ಲಿಯೂ ತೊಡಗಿ ಕೈಸುಟ್ಟುಕೊಂಡರು.

'ಡಾನ್ಸ್ ಡಾನ್ಸ್ ಜೂನಿಯರ್', 'ಹುನರ್‌ಬಾಜ್' ರಿಯಾಲಿಟಿ ಶೋಗಳ ತೀರ್ಪುಗಾರರ ಕುರ್ಚಿ ಮೇಲೆ ಕುಳಿತ ಅನುಭವವೂ ಅವರದ್ದಾಗಿದೆ. 2000ನೇ ದಶಕದ ನಡುಘಟ್ಟದಿಂದ ಮತ್ತೆ ಹಿಂದಿ ಸಿನಿಮಾಗಳಲ್ಲಿ ಆಗೀಗ ನಟಿಸುತ್ತಾ ಬಂದ ಅವರ ಕೈಲಿ ಈಗ ಪ್ರಭಾಸ್ ಅಭಿನಯದ ತೆಲುಗು ಸಿನಿಮಾದ ಅವಕಾಶವೂ ಇದೆ.



ಫುಟ್‌ಪಾತ್ ಮೇಲಿದ್ದ ನನ್ನಂತಹ ಬಾಲಕ ಇಂತಹ ದೊಡ್ಡ ಗೌರವಕ್ಕೆ ಪಾತ್ರವಾಗಬಹುದು ಎಂಬ ಕಲ್ಪನೆಯೂ ಇರಲಿಲ್ಲ
ಮಿಥುನ್ ಚಕ್ರವರ್ತಿ, ನಟ

ನೈರುತ್ಯ ಮುಂಗಾರು: ವಾಡಿಕೆಗಿಂತ ಶೇ 8ರಷ್ಟು ಅಧಿಕ ಮಳೆ

'ಭಾರತದಲ್ಲಿ 2024ರ ನೈರುತ್ಯ ಮುಂಗಾರು ಸೋಮವಾರಕ್ಕೆ ಮುಕ್ತಾಯಗೊಂಡಿದ್ದು, ಈ ಬಾರಿ ವಾಡಿಕೆಗಿಂತ ಅಧಿಕ ಮಳೆ ಸುರಿದಿದೆ. ಈ ಅವಧಿಯಲ್ಲಿ ದೇಶದಲ್ಲಿ 93.48 ಸೆಂ.ಮೀ ನಷ್ಟು ಮಳೆಯಾಗಿದೆ. ಇದು 2020ರಿಂದ ಈಚೆಗಿನ ದಾಖಲೆ ಮಳೆ ಪ್ರಮಾಣ' ಎಂದು ಭಾರತೀಯ ಹವಾಮಾನ ಇಲಾಖೆ ಹೇಳಿದೆ. ದಕ್ಷಿಣ ಭಾರತ, ಮಧ್ಯ ಭಾರತದಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಲಿದೆ. ಈಶಾನ್ಯ ಭಾಗದಲ್ಲಿ ವಾಡಿಕೆಯಷ್ಟು ಮಳೆಯಾಗಲಿದೆ. ವಾಯವ್ಯ ಭಾಗದಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಲಿದೆ ಎಂದು ಇಲಾಖೆಯು ನೀಡಿದ್ದ ಮುನ್ಸೂಚನೆಯು ನಿಖರವಾಗಿದೆ.

ಮಧ್ಯ ಭಾರತ
ವಾಡಿಕೆಗಿಂತ **19%**ರಷ್ಟು ಹೆಚ್ಚು ಮಳೆ


ದಕ್ಷಿಣ ಭಾರತ
ವಾಡಿಕೆಗಿಂತ **14%**ರಷ್ಟು ಹೆಚ್ಚು ಮಳೆ

ವಾಯವ್ಯ ಭಾರತ
ವಾಡಿಕೆಗಿಂತ **7%**ರಷ್ಟು ಹೆಚ್ಚು ಮಳೆ

ಪೂರ್ವ ಭಾರತ
ವಾಡಿಕೆಗಿಂತ **14%**ರಷ್ಟು ಕಡಿಮೆ ಮಳೆ

ಈಶಾನ್ಯ ಭಾರತ
ವಾಡಿಕೆಗಿಂತ **14%**ರಷ್ಟು ಕಡಿಮೆ ಮಳೆ

ಜೂನ್ ಹೊತ್ತಿಗೆ ದೇಶದಲ್ಲಿ ಶೇ 11ರಷ್ಟು ಮಳೆ ಕೊರತೆಯಾಗಿತ್ತು. ಜುಲೈನಲ್ಲಿ ವಾಡಿಕೆಗಿಂತ ಶೇ 9ರಷ್ಟು ಹೆಚ್ಚು, ಆಗಸ್ಟ್‌ನಲ್ಲಿ ಶೇ 15.7ರಷ್ಟು, ಸೆಪ್ಟೆಂಬರ್‌ನಲ್ಲಿ ಶೇ 10.6ರಷ್ಟು ಹೆಚ್ಚು ಮಳೆಯಾಯಿತು. ಈ ಕಾರಣದಿಂದ ಜುಲೈನಲ್ಲಿ ಆಗಿದ್ದ ಮಳೆ ಕೊರತೆ ನಂತರದ ತಿಂಗಳುಗಳಲ್ಲಿ ನೀಗಿತು.



ಗದಗ: ಕಾಲು ಜಾರಿ ಹೊಂಡದಲ್ಲಿ ಬಿದ್ದು ಕಾಣೆಯಾಗಿದ್ದ ಬಾಲಕನ ಶವ ಪತ್ತೆ

ರಭಸದ ಮಳೆ: ವಿವಿಧೆಡೆ ಐವರ ಸಾವು

ಪ್ರಜಾವಾಣಿ ವಾರ್ತೆ

ನರಗುಂದ (ಗದಗ ಜಿಲ್ಲೆ): ರಾಜ್ಯದ ಕೆಲವೆಡೆ ಭಾನುವಾರ ರಾತ್ರಿ ಮತ್ತು ಸೋಮವಾರ ಮಳೆಯಾಗಿದೆ. ಸಿಡಿಲು ಬಡಿದು ಒಬ್ಬರು ಸೇರಿದಂತೆ ವಿವಿಧ ಪ್ರಕರಣಗಳಲ್ಲಿ ಒಟ್ಟು ಐವರು ಮೃತಪಟ್ಟಿದ್ದಾರೆ.

ತಾಲ್ಲೂಕಿನ ಹುಣಸಿಕಟ್ಟಿ–ನರಗುಂದ ಮಧ್ಯದ ಒಡ್ಡಿನ ಹಳ್ಳವು ಭಾನುವಾರ ರಾತ್ರಿ ಸುರಿದ ಮಳೆಗೆ ತುಂಬಿ ಹರಿಯುವಾಗಲೇ ಬೈಕ್‌ನಲ್ಲಿ ತೆರಳಲು ಪ್ರಯತ್ನಿಸಿದ ಹುಣಸಿ ಕಟ್ಟಿಯ ಮಣಿಕಂಠ ಅಶೋಕ ಮಲ್ಲಾಪುರ (26) ಮತ್ತು ಶಿವಪ್ಪ ಅಶೋಕ ಅವರಾದಿ (25) ನೀರಿನಲ್ಲಿ ಕೊಚ್ಚಿ ಹೋಗಿ, ಮೃತಪಟ್ಟಿದ್ದಾರೆ. ಅಗ್ನಿಶಾಮಕ ದಳಮತ್ತು ಪೊಲೀಸ್ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಇಬ್ಬರ ಶವ ಪತ್ತೆ ಮಾಡಿದರು.

ಬಾಲಕನ ಶವ ಪತ್ತೆ: ಗದಗದ ಕೊನೇರಿ ಹೊಂಡದಲ್ಲಿ ಕಾಲು ಜಾರಿ ಬಿದ್ದು ಕಾಣೆಯಾಗಿದ್ದ ಗಂಗಾಪುರ ಪೇಟೆಯ ಪ್ರಥಮ್ ಅಶೋಕ ಮಾಡಳ್ಳಿ (9) ಎಂಬ ಬಾಲಕನ ಶವವನ್ನು ಸೋಮವಾರ ಬೆಳಿಗ್ಗೆ ಅಗ್ನಿಶಾಮಕದಳದ ಸಿಬ್ಬಂದಿ ಪತ್ತೆ ಮಾಡಿದರು. ಸ್ನೇಹಿತರೊಂದಿಗೆ ಆಟ ಆಡುವಾಗ, ಪ್ರಥಮ್ ಕಾಲು ಜಾರಿ ಬಿದ್ದಿದ್ದ. ಹೊಂಡದಲ್ಲಿ ಗಣಪತಿ ಮೂರ್ತಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ವಿಸರ್ಜಿಸಿದ್ದರಿಂದ ಕೆಸರು ತುಂಬಿತ್ತು. ಸಂಜೆಯ ಮಳೆ ಆಗಿದ್ದರಿಂದ ಕಾರ್ಯಾಚರಣೆ ನಡೆಸಲು ಸಾಧ್ಯವಾಗಿರಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಕುರಿಗಾಹಿ ಸಾವು: ಲಿಂಗಸುಗೂರು (ರಾಯಚೂರು): ತಾಲ್ಲೂಕಿನ ನಡುಗಡ್ಡೆ ಗ್ರಾಮ ಹಂಚಿನಾಳದಲ್ಲಿ ಸೋಮವಾರ ಸಿಡಿಲು ಬಡಿದು ಕುರಿಗಾಹಿಯೊಬ್ಬರು ಮೃತಪಟ್ಟಿದ್ದಾರೆ.

ಕುರಿ ಕಾಯಲು ತೆರಳಿದ್ದ ದುರುಗಪ್ಪ ಹನುಮಪ್ಪ ಕರಡಕಲ್ಲ (38) ಸಿಡಿಲು ಬಡಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಂದಾಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಕೊಚ್ಚಿ ಹೋದ ವ್ಯಕ್ತಿ ಸಾವು: ಅಮೀನಗಡ (ಬಾಗಲಕೋಟೆ): ಬಸವನಾಳ ಗ್ರಾಮದ ಬಳಿ ರಭಸದಿಂದ ಹರಿಯುತ್ತಿರುವ ಹಳ್ಳದಲ್ಲಿ ಅಂಬಲಿಕೊಪ್ಪ ಗ್ರಾಮದ ಮಲ್ಲಪ್ಪ ಶಿವಪ್ಪ ಬಸವನಾಳ (38) ಎಂಬುವರು ಭಾನುವಾರ ರಾತ್ರಿ ನೀರಿನಲ್ಲಿ ಕೊಚ್ಚಿ ಹೋಗಿ, ಮೃತಪಟ್ಟಿದ್ದಾರೆ. ಅವರು ಬೈಕ್‌ನಲ್ಲಿ ಹಳ್ಳ ದಾಟುವ ವೇಳೆ ಕೊಚ್ಚಿ ಹೋಗಿದ್ದಾರೆ ಎಂದು ಅಮೀನಗಡ ಠಾಣೆ ಪೊಲೀಸರು ತಿಳಿಸಿದ್ದಾರೆ.

ದಾವಣಗೆರೆ ನಗರವೂ ಸೇರಿ ಜಿಲ್ಲೆಯ ವಿವಿಧೆಡೆ ಸೋಮವಾರ ನಸುಕಿನಲ್ಲಿ ಭಾರಿ ಮಳೆ ಸುರಿದಿದ್ದು, ಹಳ್ಳ– ಕೊಳ್ಳಗಳು ತುಂಬಿ ಹರಿದಿವೆ. ಜಲಮೂಲಗಳಿಗೆ ಜೀವಕಳೆ ಬಂದಿದೆ.

ನಸುಕಿನ 3.15ಕ್ಕೆ ಆರಂಭವಾದ ಮಳೆ ಒಂದೂವರೆ ಗಂಟೆ ಬಿರುಸಿನಿಂದ ಸುರಿಯಿತು. ನಗರದ ಆವರಗೆರೆಯ ಸರ್ಕಾರಿ ಶಾಲೆಯ ಆವರಣ ಸಂಪೂರ್ಣ ಜಲಾವೃತಗೊಂಡಿತ್ತು. ದಾವಣಗೆರೆ ಹಾಗೂ ಜಗಳೂರಿನಲ್ಲಿ 3 ಸೆಂ.ಮೀ ಮಳೆ ದಾಖಲಾಗಿದೆ.



ಎಚ್‌.ಡಿ.ಕೋಟೆ ತಾಲ್ಲೂಕಿನೆಲ್ಲೆಡೆ ಸುರಿದ ಗಾಳಿ, ಮಳೆಗೆ ದಾಸನಪುರ ಗ್ರಾಮದ ದೊರೆಸ್ವಾಮಿ ಅವರ ಜಮೀನಿನಲ್ಲಿ ಬಾಳೆ ಗಿಡ ನೆಲ ಕಚ್ಚಿದೆ

ರಾಜ್ಯದ ಹಲವೆಡೆ ಇಂದು ಸಾಧಾರಣ ಮಳೆ

ಬೆಂಗಳೂರು: ರಾಜ್ಯದ ಕರಾವಳಿ ಮತ್ತು ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮಂಗಳವಾರ ಮತ್ತು ಬುಧವಾರ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮಂಗಳವಾರ ಮೋಡ ಕವಿದ ವಾತಾವರಣವಿರಲಿದ್ದು, ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ತಿಳಿಸಿದೆ.

ಸೋಮವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ವೈ.ಎನ್.ಹೊಸಕೋಟೆ (ತುಮಕೂರು ಜಿಲ್ಲೆ) 15 ಸೆಂ.ಮೀ, ನರಗುಂದ (ಗದಗ ಜಿಲ್ಲೆ) 9 ಸೆಂ.ಮೀ, ದಾವಣಗೆರೆ ಮತ್ತು ಧಾರವಾಡದಲ್ಲಿ 5 ಸೆಂ.ಮೀ. ಮಳೆ ದಾಖಲಾಗಿದೆ.

ಸಂಕ್ಷಿಪ್ತ ಸುದ್ದಿ

ಅಮೆರಿಕ: ಭಾರತೀಯರಿಗೆ 2.5 ಲಕ್ಷ ಹೆಚ್ಚುವರಿ ವೀಸಾ

ನವದೆಹಲಿ (ಪಿಟಿಐ): ಪ್ರವಾಸಿಗರು, ನುರಿತ ಕೆಲಸಗಾರರು ಮತ್ತು ವಿದ್ಯಾರ್ಥಿಗಳು ಸೇರಿದಂತೆ ಭಾರತೀಯರಿಗೆ ಅಮೆರಿಕವು ಹೆಚ್ಚುವರಿಯಾಗಿ 2.5 ಲಕ್ಷ ಮಂದಿಗೆ ವೀಸಾ ನೀಡಲಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಇತ್ತೀಚೆಗೆ ಬಿಡುಗಡೆ ಮಾಡಲಾದ ವೀಸಾ ವಿತರಣೆಯ ಹೊಸ ಸ್ಲಾಟ್‌ಗಳು ಭಾರತೀಯ ಅರ್ಜಿದಾರರಿಗೆ ಸಕಾಲಿಕವಾಗಿ ಸಂದರ್ಶನಕ್ಕೆ ಹಾಜರಾಗಲು ನೆರವಾಗಲಿವೆ. ಅಲ್ಲದೆ, ಉಭಯ ದೇಶಗಳ ಬಾಂಧವ್ಯ ವೃದ್ಧಿಯನ್ನು ಸುಗಮಗೊಳಿಸಲಿದೆ ಎಂದು ಅಮೆರಿಕ ರಾಯಭಾರ ಕಚೇರಿ ಹೇಳಿದೆ.

ನವರಾತ್ರಿ ಮೊದಲ ದಿನ ಬಳ್ಳಾರಿಗೆ : ಜನಾರ್ದನ ರೆಡ್ಡಿ

ಬೆಂಗಳೂರು: 'ನವರಾತ್ರಿಯ ಮೊದಲ ದಿನವೇ (ಅ.3) ಬಳ್ಳಾರಿಗೆ ಭೇಟಿ ಕೊಡಲಿದ್ದೇನೆ' ಎಂದು ಶಾಸಕ ಗಾಲಿ ಜನಾರ್ದನ ರೆಡ್ಡಿ ಹೇಳಿದರು.

ಸುದ್ದಿಗಾರರ ಜತೆ ಸೋಮವಾರ ಮಾತನಾಡಿ, '14 ವರ್ಷಗಳ ನಂತರ ಬಳ್ಳಾರಿಗೆ ಹೋಗಲು ಅನುಮತಿ ನೀಡಿ ಸುಪ್ರೀಂಕೋರ್ಟ್ ಆದೇಶ ನೀಡಿದೆ. ನನ್ನ ಕೊನೆಯ ಉಸಿರು ಇರುವವರೆಗೂ ಬಳ್ಳಾರಿಯಲ್ಲೇ ಇರುತ್ತೇನೆ' ಎಂದರು.

'ಜನ್ಮಸ್ಥಳ ಪ್ರತಿಯೊಬ್ಬರಿಗೂ ಮುಖ್ಯವಾಗುತ್ತದೆ. ಯಾವುದೇ ಊರಿಗಿಂತ ನಮ್ಮ ಹುಟ್ಟೂರು ನಮಗೆ ಮೇಲು ಎಂಬುದು ಹಿರಿಯರ ಮಾತು. ಮೊದಲು ಗಂಗಾವತಿಗೆ ತೆರಳಿ, ಹನುಮಂತನ ದರ್ಶನ ಪಡೆದು ರಾಜಕೀಯ ಪುನರ್ಜನ್ಮ ನೀಡಿದ ಜನರ ಜತೆ ಮಾತನಾಡುತ್ತೇನೆ' ಎಂದು ಹೇಳಿದರು.

ಮಹಾರಾಷ್ಟ್ರದಲ್ಲಿ ದೇಸಿ ಹಸುಗಳಿಗೆ 'ರಾಜ್ಯಮಾತೆ–ಗೋಮಾತೆ' ಸ್ಥಾನ

ಪ್ರಜಾವಾಣಿ ವಾರ್ತೆ/ಪಿಟಿಐ

ಮುಂಬೈ: ದೇಸಿ ಹಸುಗಳನ್ನು 'ರಾಜ್ಯಮಾತೆ–ಗೋಮಾತೆ' ಎಂದು ಮಹಾರಾಷ್ಟ್ರ ಸರ್ಕಾರವು ಸೋಮವಾರ ಘೋಷಿಸಿದೆ. ವೇದಗಳ ಕಾಲದಿಂದಲೂ ಅವು ಹೊಂದಿರುವ ಮಹತ್ವ ಹಾಗೂ ಇತರ ಅಂಶಗಳನ್ನು ಪರಿಗಣಿಸಿ ಈ ಘೋಷಣೆ ಮಾಡಲಾಗಿದೆ ಎಂದು ಅಧಿಸೂಚನೆಯಲ್ಲಿ ಹೇಳಲಾಗಿದೆ.

ಮನುಷ್ಯನಿಗೆ ಅಗತ್ಯವಿರುವ ಪೌಷ್ಟಿಕಾಂಶಗಳನ್ನು ಒದಗಿಸುವಲ್ಲಿ, ಆಯುರ್ವೇದದಲ್ಲಿ, ಪಂಚಗವ್ಯ ಚಿಕಿತ್ಸೆಯಲ್ಲಿ ದೇಸಿ ಹಸುಗಳ ಹಾಲಿಗೆ ಇರುವ ಮಹತ್ವ, ಸಾವಯವ ಕೃಷಿಯಲ್ಲಿ ದೇಸಿ ಹಸುಗಳ ಗೊಬ್ಬರದ ಬಳಕೆಯನ್ನು ಕೂಡ ಪರಿಗಣಿಸಲಾಗಿದೆ ಎಂದು ರಾಜ್ಯದ ಕೃಷಿ, ಹೈನುಗಾರಿಕೆ ಅಭಿವೃದ್ಧಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಹೇಳಿದೆ. ರಾಜ್ಯ ವಿಧಾನಸಭೆಗೆ ಚುನಾವಣೆ ಹತ್ತಿರವಾಗುತ್ತಿರುವ ಹೊತ್ತಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ಇದು ಹಸುಗಳ ವೈಜ್ಞಾನಿಕ, ಆಧ್ಯಾತ್ಮಿಕ ಮತ್ತು ಐತಿಹಾಸಿಕ ಮಹತ್ವವನ್ನು ಒತ್ತಿಹೇಳುತ್ತದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಬಿಜೆಪಿ, ಶಿವಸೇನಾ, ಎನ್‌ಸಿಪಿ ಮೈತ್ರಿ ಸರ್ಕಾರದ ತೀರ್ಮಾನವನ್ನು ಹಲವು ಬಲಪಂಥೀಯ ಸಂಘಟನೆಗಳು ಸ್ವಾಗತಿಸಿವೆ. ಆದರೆ ವಿರೋಧ ಪಕ್ಷಗಳ ಮೈತ್ರಿಕೂಟವಾದ ಮಹಾ ವಿಕಾಸ್ ಆಘಾಡಿ ತಕ್ಷಣಕ್ಕೆ ಪ್ರತಿಕ್ರಿಯೆ ನೀಡಿಲ್ಲ.

ಹಸುವಿನ ಸಗಣಿಯಿಂದ ಕೃಷಿಗೆ ಆಗುವ ಪ್ರಯೋಜನ, ಅದರಿಂದ ಮಣ್ಣಿನ ಫಲವತ್ತತೆ ಹೆಚ್ಚಾಗುವುದು ಹಾಗೂ ಮನುಷ್ಯನಿಗೆ ಅಗತ್ಯವಿರುವ ಪೋಷಕಾಂಶಗಳು ಲಭ್ಯವಾಗುವುದರ ಬಗ್ಗೆಯೂ ಸರ್ಕಾರವು ಅಧಿಸೂಚನೆಯಲ್ಲಿ ಉಲ್ಲೇಖಿಸಿದೆ.

ಮುಖ್ಯಮಂತ್ರಿ ಏಕನಾಥ ಶಿಂದೆ, ಉಪ ಮುಖ್ಯಮಂತ್ರಿಗಳಾದ ದೇವೇಂದ್ರ ಫಡಣವೀಸ್ ಮತ್ತು ಅಜಿತ್ ಪವಾರ್ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯು, ದೇಸಿ ಹಸುಗಳ ಸಾಕಣೆಗೆ ಸಬ್ಸಿಡಿ ಯೋಜನೆ ರೂಪಿಸುವ ಬಗ್ಗೆಯೂ ಚರ್ಚೆ ನಡೆಸಿದೆ.

ಗೋಶಾಲೆ: ಆರ್ಥಿಕ ಸ್ಥಿತಿ

ಹಲವಾರು ಗೋಶಾಲೆಗಳು ಆರ್ಥಿಕವಾಗಿ ಸುಸ್ಥಿತಿಯಲ್ಲಿ ಇಲ್ಲ. ಹೀಗಾಗಿ ಅವುಗಳನ್ನು ಬಲಪಡಿಸಲು ತೀರ್ಮಾನಿಸಲಾಗಿದೆ. 2019ರಲ್ಲಿ ನಡೆದ 20ನೆಯ ಪ್ರಾಣಿ ಗಣತಿಯ ಪ್ರಕಾರ ರಾಜ್ಯದಲ್ಲಿ 46 ಲಕ್ಷಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ದೇಸಿ ಹಸುಗಳು ಇವೆ. 19ನೆಯ ಪ್ರಾಣಿ ಗಣತಿಯ ಸಂಖ್ಯೆಗೆ ಹೋಲಿಸಿದರೆ, ದೇಸಿ ಹಸುಗಳ ಸಂಖ್ಯೆಯಲ್ಲಿ ಶೇಕಡ 20.69ರಷ್ಟು ಇಳಿಕೆ ಕಂಡುಬಂದಿದೆ ಎಂದು ಮುಖ್ಯಮಂತ್ರಿ ಕಚೇರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ವಾಲ್ಮೀಕಿ ಹಗರಣ ಸಿಬಿಐ ತೆಕ್ಕೆಗೆ: ಕಾಯ್ದಿರಿಸಿದ ತೀರ್ಪು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ದುರ್ಬಳಕೆ ಪ್ರಕರಣವನ್ನು ಕೇಂದ್ರೀಯ ತನಿಖಾ ದಳದ ತನಿಖೆಗೆ ವಹಿಸಬೇಕು' ಎಂದು ಕೋರಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಸಲ್ಲಿಸಿದ್ದ ಅರ್ಜಿ ಮೇಲಿನ ತೀರ್ಪನ್ನು ಹೈಕೋರ್ಟ್ ಕಾಯ್ದಿರಿಸಿದೆ.

'ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣ ದುರ್ಬಳಕೆ ಪ್ರಕರಣವನ್ನು ಸಿಬಿಐ ತನಿಖೆಗೆ ವರ್ಗಾಯಿಸಬೇಕು' ಎಂದು ಕೋರಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಸಲ್ಲಿಸಿದ್ದ ರಿಟ್ ಅರ್ಜಿ ಸಿಂಧುತ್ವದ ಮೇಲಿನ ವಿಚಾರಣೆಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಪೂರ್ಣಗೊಳಿಸಿತು.

ರಾಜ್ಯ ಸರ್ಕಾರದ ಪರ ಹಿರಿಯ ವಕೀಲರಾದ ಬಿ.ವಿ. ಆಚಾರ್ಯ ಹಾಗೂ ವಾಲ್ಮೀಕಿ ಅಭಿವೃದ್ಧಿ ನಿಗಮದ ಪರ ರವಿವರ್ಮ ಕುಮಾರ್ ಮತ್ತು ಯೂನಿಯನ್ ಬ್ಯಾಂಕ್ ಪರ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಹಾಗೂ ಸಿಬಿಐ ಪರ ಪಿ.ಪ್ರಸನ್ನ ಕುಮಾರ್ ವಾದ ಮಂಡಿಸಿದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಧ್ಯದ ವಿವಾದ ಎಂಬುದಕ್ಕೆ ಸಂಬಂಧಿಸಿದಂತೆ ಇದನ್ನು ಸಂವಿಧಾನದ 131ನೇ ವಿಧಿಯಡಿ ಸುಪ್ರೀಂ ಕೋರ್ಟ್ ನಿರ್ಧರಿಸಬೇಕೆ? ಮತ್ತು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ–1949 ಕಲಂ 35ಎ ಅಡಿ ಹೊರಡಿಸಿರುವ ಮಾಸ್ಟರ್ ಸುತ್ತೋಲೆಯ ಪ್ರಕಾರ ನಿರ್ದಿಷ್ಟ ಮೊತ್ತದ ಹಣಕಾಸು ಅವ್ಯವಹಾರವನ್ನು ಸಿಬಿಐ ತನಿಖೆ ನಡೆಸಬೇಕೇ? ಎಂಬುದರ ಸಿಂಧುತ್ವಕ್ಕೆ ತೀರ್ಪಿನಲ್ಲಿ ಉತ್ತರಿಸಲಾಗುವುದು' ಎಂದು ವಿವರಿಸಿತು.

'ವರ್ಷದೊಳಗೆ ರಾಜ್ಯದ ಎಲ್ಲ ಗ್ರಾಮ ಆಡಳಿತ ಅಧಿಕಾರಿಗಳಿಗೂ ಟ್ಯಾಬ್'

ಪ್ರಜಾವಾಣಿ ವಾರ್ತೆ



ಕೃಷ್ಣಬೈರೇಗೌಡ

ಬೆಂಗಳೂರು: ಮುಂದಿನ ವರ್ಷದೊಳಗೆ ರಾಜ್ಯದ ಎಲ್ಲ ಗ್ರಾಮ ಆಡಳಿತ ಅಧಿಕಾರಿಗಳಿಗೂ ಟ್ಯಾಬ್ ವಿತರಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ಅಧ್ಯಕ್ಷರು, ಕಾರ್ಯಾಧ್ಯಕ್ಷರು ಮತ್ತು ಪದಾಧಿಕಾರಿಗಳು ವಿಕಾಸಸೌಧದಲ್ಲಿ ಸೋಮವಾರ ಭೇಟಿ ಮಾಡಿ ವಿವಿಧ ಬೇಡಿಕೆಗಳನ್ನು ಒಳಗೊಂಡ ಮನವಿ ಪತ್ರ ಸಲ್ಲಿಸಿದ ಸಂದರ್ಭದಲ್ಲಿ ಈ ಭರವಸೆ ನೀಡಿದರು.

ಗ್ರಾಮ ಆಡಳಿತ ಅಧಿಕಾರಿಗಳಿಗೆ ಮೊಬೈಲ್ ಅಥವಾ ಲ್ಯಾಪ್‌ಟಾಪ್ ನೀಡಬೇಕು ಎಂಬ ಬೇಡಿಕೆ ಇದೆ. ಕ್ಷೇತ್ರಗಳಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ಲ್ಯಾಪ್‌ಟಾಪ್– ಮೊಬೈಲ್ ಎರಡೂ ರೀತಿ ಕೆಲಸ ಮಾಡಬಲ್ಲ ಟ್ಯಾಬ್ ನೀಡುವ ಬಗ್ಗೆ ಚಿಂತನೆ ನಡೆಸಲಾಗಿದೆ. ಈಗಾಗಲೇ ಸಣ್ಣ ಪ್ರಮಾಣದಲ್ಲಿ ಅಧಿಕಾರಿಗಳಿಗೆ ಟ್ಯಾಬ್ ವಿತರಿಸಲಾಗಿದೆ. ಮುಂದಿನ ವರ್ಷ ಎಲ್ಲರಿಗೂ ವಿತರಿಸಲು ಸರ್ಕಾರ ಬದ್ಧವಾಗಿದೆ ಎಂದರು.

ಗ್ರಾಮ ಆಡಳಿತ ಅಧಿಕಾರಿಗಳನ್ನು ಅನಗತ್ಯವಾಗಿ ಎಸಿ–ಡಿಸಿ ಕಚೇರಿಗಳಿಗೆ ನಿಯೋಜನೆ ಮೇಲೆ ಕಳಿಸಿರುವುದನ್ನು, ರದ್ದುಗೊಳಿಸುವ ಸಂಬಂಧ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಬೀಟ್ ಆ್ಯಪ್ ಹಾಗೂ ಆಧಾರ್ ಸೀಡಿಂಗ್ ಹಾಗೂ ಪೌತಿ ಖಾತೆ ಅಭಿಯಾನದಲ್ಲೂ ಗ್ರಾಮ ಆಡಳಿತ ಅಧಿಕಾರಿಗಳ ಪಾತ್ರ ಮಹತ್ವವಾದದ್ದು, ಹೀಗಾಗಿ ಮುಂದಿನ ದಿನಗಳಲ್ಲಿ, ಅವರ ಕೆಲಸದ ಒತ್ತಡಗಳನ್ನು ಕಡಿಮೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

56 ವರ್ಷಗಳ ಬಳಿಕ ಮೃತದೇಹ ಪತ್ತೆ

ನವದೆಹಲಿ (ಪಿಟಿಐ): 56 ವರ್ಷಗಳ ಹಿಂದೆ ಭಾರತೀಯ ವಾಯುಪಡೆಯ ವಿಮಾನ ಅಪಘಾತದಲ್ಲಿ ಮೃತಪಟ್ಟಿದ್ದ ಯೋಧರಲ್ಲಿ ನಾಲ್ವರ ಮೃತದೇಹ ಪತ್ತೆಹಚ್ಚಲಾಗಿದೆ. ಈ ಮೂಲಕ ಸುದೀರ್ಘ ಅವಧಿಯಿಂದ ನಡೆಯುತ್ತಿರುವ ಶೋಧ ಕಾರ್ಯಾಚರಣೆಗೆ ಗಮನಾರ್ಹ ಯಶಸ್ಸು ಸಿಕ್ಕಂತಾಗಿದೆ.

ಭಾರತೀಯ ವಾಯುಪಡೆಯ ಎಎನ್–12 ವಿಮಾನವು 1968ರ ಫೆಬ್ರುವರಿ 7ರಂದು ಹಿಮಾಚಲ ಪ್ರದೇಶದ ರೋಹ್ತಾಂಗ್ ಪಾಸ್ ಬಳಿ ಪತನಗೊಂಡಿತ್ತು. ಚಂಡೀಗಢದಿಂದ ಲೇಹ್‌ಗೆ ಪ್ರಯಾಣಿಸುತ್ತಿದ್ದ ವಿಮಾನದಲ್ಲಿ 102 ಮಂದಿ ಇದ್ದರು.

ಭಾರತೀಯ ಸೇನೆಯ ಡೋಗ್ರಾ ಸ್ಕೌಟ್ಸ್ ಮತ್ತು ತಿರಂಗಾ ಮೌಂಟೇನ್ ರೆಸ್ಕ್ಯೂ ತಂಡಗಳ ಸಿಬ್ಬಂದಿ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಮೃತದೇಹಗಳು ಪತ್ತೆಯಾಗಿವೆ ಎಂದು ಸೇನೆಯ ಅಧಿಕಾರಿಗಳು ತಿಳಿಸಿದ್ದಾರೆ.

ಕುಣಬಿ ಜಾತಿ ಪ್ರಮಾಣಪತ್ರ: ವರದಿ ಅಂಗೀಕಾರ

ಮುಂಬೈ (ಪಿಟಿಐ): ಮಹಾರಾಷ್ಟ್ರದಲ್ಲಿ ಅರ್ಹ ಮರಾಠರಿಗೆ ಕುಣಬಿ ಜಾತಿ ಪ್ರಮಾಣಪತ್ರ ನೀಡಲು ಅನುಸರಿಸಬೇಕಾದ ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು (ಎಸ್‌ಒಪಿ) ಅಂತಿಮಗೊಳಿಸಲು ರಚಿಸಲಾದ ನ್ಯಾಯಮೂರ್ತಿ ಶಿಂದೆ ಸಮಿತಿಯು ಸಲ್ಲಿಸಿರುವ ಎರಡು ಮತ್ತು ಮೂರನೇ ವರದಿಗಳನ್ನು ಮಹಾರಾಷ್ಟ್ರ ಸಚಿವ ಸಂಪುಟ ಸೋಮವಾರ ಅಂಗೀಕರಿಸಿದೆ.

ಮಹಾರಾಷ್ಟ್ರದಲ್ಲಿ ಕುಣಬಿ ಸಮುದಾಯವನ್ನು ಇತರೆ ಹಿಂದುಳಿದ ವರ್ಗಗಳ (ಒಬಿಸಿ) ವಿಭಾಗದ ಅಡಿಯಲ್ಲಿ ವರ್ಗೀಕರಿಸಲಾಗಿದೆ. ವಿಧಾನ ಸಭೆ ಚುನಾವಣೆ ಸಮೀಪಿಸುತ್ತಿರುವುದರಿಂದ ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಸರ್ಕಾರ ಸರಣಿ ಸಂಪುಟ ಸಭೆಗಳನ್ನು ನಡೆಸುತ್ತಿದೆ. ಸೋಮವಾರ ನಡೆದ ಸಭೆಯು 38 ಪ್ರಸ್ತಾವಗಳಿಗೆ ಅನುಮೋದನೆ ನೀಡಿದೆ.

ಕಸ್ತೂರಿ ರಂಗನ್ ವರದಿ ತಿರಸ್ಕಾರ

ಕೇಂದ್ರಕ್ಕೆ ನಿಲುವು ತಿಳಿಸಿದ ರಾಜ್ಯ ಸರ್ಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಶ್ಚಿಮಘಟ್ಟದಲ್ಲಿ ಪರಿಸರ ಸೂಕ್ಷ್ಮ ಪ್ರದೇಶವನ್ನು ಘೋಷಿಸುವ ಬಗ್ಗೆ ಡಾ.ಕಸ್ತೂರಿ ರಂಗನ್ ವರದಿ ಆಧರಿಸಿದ ಕರಡು ಅಧಿಸೂಚನೆಯನ್ನು ತಿರಸ್ಕರಿಸಿರುವ ತೀರ್ಮಾನವನ್ನು ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಸೋಮವಾರ ತಿಳಿಸಿದೆ.

ಈ ಸಂಬಂಧ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್ ಅವರು ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯದ ಕಾರ್ಯದರ್ಶಿ ಲೀನಾ ನಂದನ್ ಅವರಿಗೆ ಪತ್ರ ಬರೆದು ವರದಿ ಬಗ್ಗೆ ರಾಜ್ಯದ ಆಕ್ಷೇಪಣೆಯನ್ನು ತಿಳಿಸಿದ್ದಾರೆ. ಸಚಿವಾಲಯವು ಜುಲೈ 31ರಂದು ಹೊರಡಿಸಿರುವ ಆರನೇ ಅಧಿಸೂಚನೆಯನ್ನು ವಾಪಸ್ ಪಡೆಯಬೇಕು ಎಂದು ಕೋರಿದ್ದಾರೆ.

'ಕಸ್ತೂರಿರಂಗನ್ ವರದಿಯು ರಾಜ್ಯದ 20,668 ಚ.ಕಿ.ಮೀ ಪ್ರದೇಶವನ್ನು ಪರಿಸರ ಸೂಕ್ಷ್ಮ ಪ್ರದೇಶ ಎಂದು ಗುರುತಿಸಿತ್ತು. ಪರಿಸರ ಸೂಕ್ಷ್ಮ ಪ್ರದೇಶವೆಂದು ಗುರುತಿಸಿದರೆ 10 ಜಿಲ್ಲೆಗಳ 33 ತಾಲ್ಲೂಕುಗಳ 1,499 ಗ್ರಾಮಗಳ ಲಕ್ಷಾಂತರ ಜನರಿಗೆ ಭಾರಿ ತೊಂದರೆ ಆಗಲಿದೆ. ಈ ವರದಿ ಬಗ್ಗೆ ಜನರು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ. ಜನಪ್ರತಿನಿಧಿಗಳು ಧ್ವನಿ ಎತ್ತಿದ್ದಾರೆ' ಎಂದು ಅವರು ಪತ್ರದಲ್ಲಿ ತಿಳಿಸಿದ್ದಾರೆ.

'ಸಚಿವಾಲಯ ಹೊರಡಿಸಿದ್ದ ನಾಲ್ಕು ಹಾಗೂ ಐದನೇ ಅಧಿಸೂಚನೆಯನ್ನು ರಾಜ್ಯ ತಿರಸ್ಕರಿಸಿತ್ತು. ಮುಖ್ಯಮಂತ್ರಿ ನೇತೃತ್ವದ ನಿಯೋಗವು ಕೇಂದ್ರ ಸಚಿವರನ್ನು ಭೇಟಿ ಮಾಡಿ ಸ್ಥಳೀಯ ಜನರಿಗೆ ಉಂಟಾಗುವ ತೊಂದರೆಗಳ ಬಗ್ಗೆ ಮನವರಿಕೆ ಮಾಡಿಕೊಟ್ಟಿತ್ತು' ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಮೇಲಧಿಕಾರಿಗಳು ಕಿರುಕುಳ ನೀಡುತ್ತಿದ್ದರ ಬಗ್ಗೆ ಪತ್ರದಲ್ಲಿ ಉಲ್ಲೇಖ

ಒತ್ತಡ: ಫೈನಾನ್ಸ್ ಉದ್ಯೋಗಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಲಖನೌ: ಉತ್ತರಪ್ರದೇಶದ ಝಾನ್ಸಿ ಜಿಲ್ಲೆಯಲ್ಲಿ ಫೈನಾನ್ಸ್ ಕಂಪನಿಯ ಉದ್ಯೋಗಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದು, ಮೇಲಧಿಕಾರಿಗಳ ಒತ್ತಡವೇ ಇದಕ್ಕೆ ಕಾರಣ ಎಂದು ಹೇಳಲಾಗುತ್ತಿದೆ.

'ಗುಮನಾವರ ಪಿಚೋರ್ ನಿವಾಸಿಯಾಗಿದ್ದ ತರುಣ್ ಸಕ್ಸೇನಾ (43) ಎಂಬವರು ಭಾನುವಾರ ತನ್ನ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪ್ರಾದೇಶಿಕ ಮ್ಯಾನೇಜರ್ ಆಗಿದ್ದ ತರುಣ್ ಆತ್ಮಹತ್ಯೆ ಮಾಡಿಕೊಂಡ ಸ್ಥಳದಲ್ಲಿ 5 ಪುಟಗಳ ಪತ್ರ ಪತ್ತೆಯಾಗಿದೆ' ಎಂದು ಪೊಲೀಸರು ತಿಳಿಸಿದರು.

'ಸಾಲದಾರರಿಂದ ಮರುಪಾವತಿ ಮಾಡಿಸಿಕೊಳ್ಳುವಂತೆ ಕಂಪನಿಯ ಅಧಿಕಾರಿಗಳು ತುಂಬಾ ಒತ್ತಡ ಹೇರುತ್ತಿದ್ದರು. ಈ ಬಗ್ಗೆ ನನಗೆ ಕಿರುಕುಳ ನೀಡುತ್ತಿದ್ದರು' ಎಂದು ತರುಣ್ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಫೈನಾನ್ಸ್ ಕಂಪನಿಯು ರೈತರಿಗೆ ಸಾಲ ನೀಡಿತ್ತು. ರೈತರು ಕೆಲ ತಿಂಗಳಿನಿಂದ ಸಾಲದ ಕಂತು ಮರುಪಾವತಿ ಮಾಡಿರಲಿಲ್ಲ. ಅವರಿಂದ ಸಾಲ ಮರುಪಾವತಿ ಮಾಡಿಸಿಕೊಳ್ಳುವಂತೆ ಒತ್ತಡ ಹೇರಲಾಗುತ್ತಿತ್ತು. ಸಾಲ ಮರುಪಾವತಿಯಾಗದಿದ್ದರೆ, ಸಂಬಳದಲ್ಲಿ ಕಡಿತ ಮಾಡುವುದಾಗಿ ಎಚ್ಚರಿಕೆ ನೀಡಲಾಗಿತ್ತು ಎಂದು ತರುಣ್ ಪತ್ರದಲ್ಲಿ ತಿಳಿಸಿರುವುದಾಗಿ ಮೂಲಗಳು ಹೇಳಿವೆ.

'ತರುಣ್ ಎರಡು ತಿಂಗಳುಗಳಿಂದ ತೀವ್ರ ಒತ್ತಡವನ್ನು ಅನುಭವಿಸುತ್ತಿದ್ದ' ಎಂದು ಆತನ ಸಹೋದರ ಗೌರವ್ ಸಕ್ಸೇನಾ ತಿಳಿಸಿದ್ದಾರೆ. ಈ ಬಗ್ಗೆ ತನಿಖೆ ನಡೆಸುವುದಾಗಿ ಪೊಲೀಸರು ತಿಳಿಸಿದ್ದಾರೆ.

ಐ–ಫೋನ್ ಖರೀದಿ: ಡೆಲಿವರಿ ಬಾಯ್ ಕೊಲೆ

ಲಖನೌ: ಇ–ಕಾಮರ್ಸ್ ಕಂಪನಿಯೊಂದರಿಂದ ಸುಮಾರು ₹ 1.5 ಲಕ್ಷ ಮೌಲ್ಯದ ಸೆಲ್ ಫೋನ್ ಖರೀದಿಸಿದ ವ್ಯಕ್ತಿಯು, ಅದನ್ನು ವಿತರಿಸಲು ಬಂದಿದ್ದ ಡೆಲಿವರಿ ಬಾಯ್ ಅನ್ನು ಕೊಂದಿರುವ ಘಟನೆ ಇಲ್ಲಿ ನಡೆದಿದೆ.

ಮೃತ ವ್ಯಕ್ತಿಯನ್ನು ನಿಶಾಂತ್ ಗಂಜ್ ಪ್ರದೇಶದ ನಿವಾಸಿ ಭರತ್ ಸಾಹು ಎಂದು ಗುರುತಿಸಲಾಗಿದೆ. ಇಲ್ಲಿನ ಚಿನ್ಹತ್ ಪ್ರದೇಶದ ನಿವಾಸಿ ಗಜೇಂದ್ರ ಕುಮಾರ್ ಎಂಬುವರು ₹1.5 ಲಕ್ಷ ಮೌಲ್ಯದ 'ಐ–ಫೋನ್' ಅನ್ನು ಇ–ಕಾಮರ್ಸ್ ಕಂಪನಿಯೊಂದರಿಂದ ಖರೀದಿಸಿದ್ದರು. ಅವರು 'ಕ್ಯಾಶ್ ಆನ್ ಡೆಲಿವರಿ' ವಿಧಾನವನ್ನು ಆಯ್ಕೆಯನ್ನು ಮಾಡಿಕೊಂಡಿದ್ದರು.

ಅದರಂತೆ ಡೆಲಿವರಿ ಬಾಯ್ ಫೋನ್ ಅನ್ನು ಸೆಪ್ಟೆಂಬರ್ 23ರ ಸಂಜೆ ಗಜೇಂದ್ರ ಅವರಿಗೆ ವಿತರಿಸಿ ನಗದು ಪಾವತಿಸುವಂತೆ ಕೇಳಿದಾಗ, ಮನೆಯೊಳಗೆ ಕರೆದ ಗಜೇಂದ್ರ ತನ್ನ ಸಹಚರನ ಜತೆ ಭರತ್ ಅವರ ಕತ್ತು ಹಿಸುಕಿ ಕೊಲೆ ಮಾಡಿದ್ದಾರೆ. ಬಳಿಕ ಮೃತ ದೇಹವನ್ನು ಚೀಲದಲ್ಲಿ ಕಟ್ಟಿ ಸಮೀಪದ ಇಂದಿರಾ ಕಾಲುವೆಗೆ ಎಸೆದಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದರು.


ಭರತ್ ಕಾಣೆಯಾದ ಕುರಿತು ಅವರ ಕುಟುಂಬದವರು ದೂರು ನೀಡಿದ ಬಳಿಕ ತನಿಖೆ ಕೈಗೆತ್ತಿಕೊಳ್ಳಲಾಯಿತು. ಭರತ್ ಅವರ ಮೊಬೈಲ್‌ನಿಂದ ಕೊನೆಯದಾಗಿ ಕರೆ ಹೋಗಿದ್ದ ಗಜೇಂದ್ರ ಅವರನ್ನು ತನಿಖೆಗೆ ಒಳಪಡಿಸಿದಾಗ ಕೊಲೆಯ ವಿಷಯ ಗೊತ್ತಾಯಿತು. ಬಳಿಕ ಆತನನ್ನು ಸೋಮವಾರ ಬಂಧಿಸಲಾಯಿತು ಎಂದು ಪೊಲೀಸರು ವಿವರಿಸಿದರು. ಡೆಲಿವರಿ ಬಾಯ್‌ನ ದೇಹ ಪತ್ತೆಗಾಗಿ ಕಾಲುವೆಯಲ್ಲಿ ಶೋಧ ಕಾರ್ಯ ಕೈಗೊಳ್ಳಲಾಗಿದೆ ಎಂದ ಅವರು, ಆರೋಪಿಯ ಸಹಚರನ ಪತ್ತೆಗೂ ಕ್ರಮ ತೆಗೆದುಕೊಳ್ಳಲಾಗಿದೆ ಎಂದರು.

'ಉಗ್ರರ ಸೆರೆಯಲ್ಲಿರುವವರ ಬಿಡುಗಡೆಗೆ ಕ್ರಮ'

ಇಂಫಾಲ್ (ಪಿಟಿಐ): ಉಗ್ರರಿಂದ ಅಪಹರಣಕ್ಕೆ ಒಳಗಾಗಿರುವ ಇಬ್ಬರು ಯುವಕರ ಸುರಕ್ಷಿತ ಬಿಡುಗಡೆಗಾಗಿ ಸರ್ಕಾರವು ಎಲ್ಲ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಲಿದೆ ಎಂದು ಮಣಿಪುರ ಮುಖ್ಯಮಂತ್ರಿ ಎನ್. ಬಿರೇನ್‌ಸಿಂಗ್ ಸೋಮವಾರ ಇಲ್ಲಿ ಹೇಳಿದರು.

'ಡಿಜಿಪಿ ಸ್ಥಳಕ್ಕೆ ತೆರಳಿದ್ದು, ಅಪಹರಣಕಾರರೊಂದಿಗೆ ಮಾತುಕತೆ ನಡೆಸಿದ್ದಾರೆ. ಸಕಾರಾತ್ಮಕ ಫಲಿತಾಂಶದ ನಿರೀಕ್ಷೆಯಿದೆ. ಉಗ್ರರು ಕೆಲವು ಬೇಡಿಕೆಗಳನ್ನಿಟ್ಟಿದ್ದಾರೆ. ಆದರೆ, ಸರ್ಕಾರವು ಯಾವುದೇ ಷರತ್ತುಗಳಿಲ್ಲದೆ ಯುವಕರ ಬಿಡುಗಡೆಗೆ ಪ್ರಯತ್ನಿಸುತ್ತಿದೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	26,178
ಇಂದಿನ ಅಂತ್ಯ	26,810
▼	368
ದಿನದ ಕನಿಷ್ಠ	25,794


ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹222
ಆರ್‌ಎಸ್‌ಎಸ್-5	₹218
ಗುಡ್ ಲಾಟ್	₹203

(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹550
12 ಕ್ಕೆ	₹75
ಮೈಸೂರು	
100ಕ್ಕೆ	₹555

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹311-530
ದ್ವಿತಳಿ (ಬಿ.ವಿ)	₹295-723

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1530 (1540)
ಸೋಯಾ (ರಿಫೈನ್ಡ್)	₹1280 (1275)
ಸೂರ್ಯಕಾಂತಿ (ರಿಫೈನ್ಡ್)	₹1280 (1200)
ಪಾಮೋಲಿನ್	₹1265 (1265)

ಏಪ್ರಿಲ್‌ನಿಂದ ಆಗಸ್ಟ್‌ವರೆಗೆ ₹8.7 ಲಕ್ಷ ಕೋಟಿ ತೆರಿಗೆ ವರಮಾನ ಸಂಗ್ರಹ: ಸಿಜಿಎ ವರದಿ

ಹಿಗ್ಗಿದ ವಿತ್ತೀಯ ಕೊರತೆ ಅಂತರ

ನವದೆಹಲಿ (ಪಿಟಿಐ): 2024-25ರ ಹಣಕಾಸು ವರ್ಷದ ಏಪ್ರಿಲ್-ಆಗಸ್ಟ್ ಅವಧಿಯಲ್ಲಿ ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯು ಇಡೀ ವರ್ಷದ ಗುರಿಯ ಶೇ 27ರಷ್ಟು ಆಗಿದೆ ಎಂದು ಲೆಕ್ಕಪತ್ರಗಳ ಮಹಾನಿಯಂತ್ರಕರು (ಸಿಜಿಎ) ಸೋಮವಾರ ಬಿಡುಗಡೆಗೊಳಿಸಿರುವ ವರದಿಯಲ್ಲಿ ತಿಳಿಸಿದ್ದಾರೆ.



ವರಮಾನ ಮತ್ತು ವೆಚ್ಚದ ನಡುವಣ ಅಂತರವಾದ ವಿತ್ತೀಯ ಕೊರತೆಯು ಏಪ್ರಿಲ್-ಆಗಸ್ಟ್‌ನಲ್ಲಿ ಮೌಲ್ಯದ ಲೆಕ್ಕದಲ್ಲಿ ₹4.35 ಲಕ್ಷ ಕೋಟಿಯಷ್ಟಿದೆ. ಇದು 2023-24ನೇ ಸಾಲಿನ ಬಜೆಟ್ ಅಂದಾಜಿನ ಶೇ 36ರಷ್ಟು ಆಗಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

2023-24ನೇ ಆರ್ಥಿಕ ವರ್ಷದಲ್ಲಿ ವಿತ್ತೀಯ ಕೊರತೆಯು ಶೇ 5.6ರಷ್ಟು ಇತ್ತು. ಇತ್ತೀಚೆಗೆ ಮಂಡನೆಯಾದ ಬಜೆಟ್‌ನಲ್ಲಿ 2024-25ನೇ ಆರ್ಥಿಕ ಸಾಲಿಗೆ ಜಿಡಿಪಿಯ ಶೇ 4.9ರಷ್ಟಕ್ಕೆ ತಗ್ಗಿಸುವ ಗುರಿ ನಿಗದಿಪಡಿಸಲಾಗಿದೆ. ಮೌಲ್ಯದ ಲೆಕ್ಕದಲ್ಲಿ ಇದು ₹16.13 ಲಕ್ಷ ಕೋಟಿ ಆಗಿದೆ.

ಏಪ್ರಿಲ್‌ನಿಂದ ಆಗಸ್ಟ್‌ವರೆಗೆ ₹8.7 ಲಕ್ಷ ಕೋಟಿ ನಿವ್ವಳ ತೆರಿಗೆ ವರಮಾನ ಸಂಗ್ರಹವಾಗಿದೆ. ಇದು ಪ್ರಸಕ್ತ ಆರ್ಥಿಕ ವರ್ಷದ ಬಜೆಟ್ ಅಂದಾಜಿನ ಶೇ 33ರಷ್ಟಿದೆ. ಆಗಸ್ಟ್ ಅಂತ್ಯಕ್ಕೆ ಕೇಂದ್ರ ಸರ್ಕಾರದ ಒಟ್ಟು ವೆಚ್ಚವು ₹16.5 ಲಕ್ಷ ಕೋಟಿ ಆಗಿದೆ. ಇದು ಬಜೆಟ್ ಅಂದಾಜಿನ ಶೇ 34ರಷ್ಟಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಸರ್ಕಾರದ ವೆಚ್ಚವು ಶೇ 37ರಷ್ಟಿತ್ತು.

ಮೂಲಸೌಕರ್ಯ ವಲಯದ ಬೆಳವಣಿಗೆ ಇಳಿಕೆ

ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ರಿಫೈನರಿ ಉತ್ಪನ್ನಗಳು, ಸಿಮೆಂಟ್ ಮತ್ತು ವಿದ್ಯುತ್ ವಲಯದ ಉತ್ಪಾದನೆಯಲ್ಲಿನ ಇಳಿಕೆಯಿಂದ ದೇಶದ ಪ್ರಮುಖ ಎಂಟು ಮೂಲಸೌಕರ್ಯ ವಲಯಗಳ ಬೆಳವಣಿಗೆ ಆಗಸ್ಟ್‌ನಲ್ಲಿ ಶೇ 1.8ರಷ್ಟು ಇಳಿಕೆಯಾಗಿದೆ. ಇದು ಮೂರೂವರೆ ವರ್ಷದ ಕನಿಷ್ಠ ಮಟ್ಟವಾಗಿದೆ ಎಂದು ಸರ್ಕಾರದ ಅಂಕಿ-ಅಂಶಗಳು ತಿಳಿಸಿವೆ.

ಜುಲೈನಲ್ಲಿ ಬೆಳವಣಿಗೆ ದರ ಶೇ 6.1ರಷ್ಟು ದಾಖಲಾಗಿತ್ತು.

ಕಲ್ಲಿದ್ದಲು, ಕಚ್ಚಾ ತೈಲ, ನೈಸರ್ಗಿಕ ಅನಿಲ, ರಿಫೈನರಿ ಉತ್ಪನ್ನಗಳು, ರಸಗೊಬ್ಬರ, ಉಕ್ಕು, ಸಿಮೆಂಟ್ ಮತ್ತು ವಿದ್ಯುತ್ ಈ ಎಂಟು ವಲಯಗಳಾಗಿವೆ. 2023ರ ಆಗಸ್ಟ್‌ನಲ್ಲಿ ಈ ವಲಯಗಳ ಬೆಳವಣಿಗೆ ಶೇ 13ರಷ್ಟು ದಾಖಲಾಗಿತ್ತು.

ಏಪ್ರಿಲ್-ಆಗಸ್ಟ್ ಅವಧಿಯಲ್ಲಿ ಈ ವಲಯಗಳ ಉತ್ಪಾದನೆ ಶೇ 4.6ರಷ್ಟಾಗಿದ್ದು, ಹಿಂದಿನ ವರ್ಷದ ಇದೇ ಅವಧಿಯಲ್ಲಿ ಶೇ 8ರಷ್ಟಿತ್ತು. ಈ ವಲಯಗಳು ಕೈಗಾರಿಕಾ ಉತ್ಪಾದನಾ ಸೂಚ್ಯಂಕಕ್ಕೆ (ಐಐಪಿ) ಶೇ 40ರಷ್ಟು ಕೊಡುಗೆ ನೀಡುತ್ತವೆ.

ಕಲ್ಲಿದ್ದಲು (ಶೇ 8.1), ಕಚ್ಚಾ ತೈಲ (ಶೇ 3.4), ನೈಸರ್ಗಿಕ ಅನಿಲ (ಶೇ 3.6), ರಿಫೈನರಿ ಉತ್ಪನ್ನಗಳು (ಶೇ 1), ಸಿಮೆಂಟ್ (ಶೇ 3) ಮತ್ತು ವಿದ್ಯುತ್ ಶೇ 5ರಷ್ಟು ಉತ್ಪಾದನೆ ಇಳಿಕೆಯಾಗಿದೆ. ರಸಗೊಬ್ಬರ ಮತ್ತು ಉಕ್ಕು ಕ್ರಮವಾಗಿ ಶೇ 3.2 ಮತ್ತು ಶೇ 4.5ರಷ್ಟು ಉತ್ಪಾದನೆಯಲ್ಲಿ ಏರಿಕೆ ದಾಖಲಿಸಿದೆ.

‘ಹೆಚ್ಚಿನ ಮಳೆಯು ಗಣಿ ಚಟುವಟಿಕೆಗಳ ಮೇಲೆ ಪರಿಣಾಮ ಬೀರಿದೆ. ಇದರಿಂದ ಈ ವಲಯಗಳ ಉತ್ಪಾದನೆ ಪ್ರಮಾಣ ಕುಸಿದಿದೆ’ ಎಂದು ಐಸಿಆರ್‌ಎ ಮುಖ್ಯ ಅರ್ಥಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಚಾಲ್ತಿ ಖಾತೆ ಕೊರತೆ ಏರಿಕೆ

ಮುಂಬೈ (ಪಿಟಿಐ): ದೇಶದಲ್ಲಿ ಚಾಲ್ತಿ ಖಾತೆ ಕೊರತೆಯು (ಸಿಎಡಿ) ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಒಟ್ಟು ಜಿಡಿಪಿಯ ಶೇ 1.1ಕ್ಕೆ (₹81,287 ಕೋಟಿ) ಏರಿಕೆ ಆಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ತಿಳಿಸಿದೆ.

ಕಳೆದ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹74,586 ಕೋಟಿಯಷ್ಟಾಗಿತ್ತು. ಸರಕುಗಳ ವ್ಯಾಪಾರ ಅಂತರವು ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹4.75 ಲಕ್ಷ ಕೋಟಿ ಆಗಿತ್ತು. ಅದು ಈ ಬಾರಿ ₹5.45 ಲಕ್ಷ ಕೋಟಿಗೆ ಹೆಚ್ಚಳ ಆಗಿದೆ.

ಸೇವಾ ವಲಯದ ನಿವ್ವಳ ಮೊತ್ತವು ₹3.32 ಲಕ್ಷ ಕೋಟಿಯಾಗಿದೆ. ದೇಶದಲ್ಲಿ ಕಂಪ್ಯೂಟರ್, ವ್ಯಾಪಾರ, ಪ್ರವಾಸಿ ಮತ್ತು ಪ್ರಯಾಣ ಸೇವೆಗಳು ಏರಿಕೆ ಕಂಡಿವೆ. ಆದರೆ, ನಿವ್ವಳ ವಿದೇಶಿ ಬಂಡವಾಳ ಹೂಡಿಕೆಯಲ್ಲಿ ₹7,543 ಕೋಟಿ ಇಳಿಕೆಯಾಗಿದೆ. ಅನಿವಾಸಿ ಭಾರತೀಯರ ಠೇವಣಿಗಳು ₹33,527 ಕೋಟಿ, ನಿವ್ವಳ ವಿದೇಶಿ ನೇರ ಹೂಡಿಕೆಯ ಒಳಹರಿವು ₹52,803 ಕೋಟಿಯಾಗಿದೆ ಎಂದು ಆರ್‌ಬಿಐ ಹೇಳಿದೆ.

ಸಣ್ಣ ಉಳಿತಾಯದ ಬಡ್ಡಿದರ: ಮತ್ತೆ ಯಥಾಸ್ಥಿತಿ

ನವದೆಹಲಿ (ಪಿಟಿಐ): ಅಕ್ಟೋಬರ್ 1ರಿಂದ ಆರಂಭವಾಗುವ ಮೂರನೇ ತ್ರೈಮಾಸಿಕದಲ್ಲಿ ಪಿಪಿಎಫ್, ಎನ್‌ಎಸ್‌ಸಿ ಸೇರಿದಂತೆ ವಿವಿಧ ಸಣ್ಣ ಉಳಿತಾಯ ಯೋಜನೆಗಳ ಬಡ್ಡಿದರದಲ್ಲಿ ಯಾವುದೇ ಬದಲಾವಣೆ ಮಾಡದೆ ಕೇಂದ್ರ ಸರ್ಕಾರವು, ಯಥಾಸ್ಥಿತಿ ಕಾಯ್ದುಕೊಂಡಿದೆ.

2024-25ನೇ ಹಣಕಾಸು ವರ್ಷದ ಎರಡನೇ ತ್ರೈಮಾಸಿಕದಲ್ಲಿ ನಿಗದಿಪಡಿಸಿರುವ ಬಡ್ಡಿದರವು ಅಕ್ಟೋಬರ್ 1ರಿಂದ ಡಿಸೆಂಬರ್ 31ರ ವರೆಗೆ ಮುಂದುವರಿಯಲಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಸೋಮವಾರ ತಿಳಿಸಿದೆ.

ಪ್ರಸ್ತುತ ಸುಕನ್ಯಾ ಸಮೃದ್ಧಿ ಶೇ 8.2, ಪಿಪಿಎಫ್ ಶೇ 7.1, ಅಂಚೆ ಕಚೇರಿಯ ಉಳಿತಾಯ ಠೇವಣಿ ಶೇ 4, ಕಿಸಾನ್ ವಿಕಾಸ್ ಪತ್ರ ಶೇ 7.5, ಎನ್‌ಎಸ್‌ಸಿ ಶೇ 7.7 ಹಾಗೂ ಮಾಸಿಕ ಉಳಿತಾಯ ಯೋಜನೆಗೆ ಶೇ 7.4 ಬಡ್ಡಿದರ ನಿಗದಿಪಡಿಸಲಾಗಿದೆ.

ಸುದ್ದಿ 2 ನಿಮಿಷ

ಐ.ಟಿ ಲೆಕ್ಕ ಪರಿಶೋಧನೆ ವರದಿ ಸಲ್ಲಿಕೆ: ಅವಧಿ ಅ.7ರವರೆಗೆ ವಿಸ್ತರಣೆ

ನವದೆಹಲಿ (ಪಿಟಿಐ): 2023-24ರ ಹಣಕಾಸು ವರ್ಷಕ್ಕೆ ಸಂಬಂಧಿಸಿದ ಆಡಿಟ್ (ಲೆಕ್ಕಪರಿಶೋಧನೆ) ವರದಿ ಸಲ್ಲಿಸುವ ಗಡುವನ್ನು ಅಕ್ಟೋಬರ್ 7ರ ವರೆಗೆ ವಿಸ್ತರಿಸಲಾಗಿದೆ ಎಂದು ಆದಾಯ ತೆರಿಗೆ ಇಲಾಖೆ ಸೋಮವಾರ ತಿಳಿಸಿದೆ.

ವಿವಿಧ ಆಡಿಟ್ ವರದಿ ಸಲ್ಲಿಕೆಯಲ್ಲಿ ತೆರಿಗೆದಾರರು ಎದುರಿಸುತ್ತಿರುವ ತೊಂದರೆಗಳನ್ನು ಪರಿಗಣಿಸಿ, ಗಡುವನ್ನು ವಿಸ್ತರಿಸಲಾಗಿದೆ ಎಂದು ತಿಳಿಸಿದೆ. ಈ ಮೊದಲು ಆಡಿಟ್ ಸಲ್ಲಿಕೆಯ ಗಡುವು ಸೆಪ್ಟೆಂಬರ್ 30 ಆಗಿತ್ತು.

‘ಕೆಲ ದಿನಗಳಿಂದ ಹೆಚ್ಚಿನ ತೆರಿಗೆದಾರರು ಆಡಿಟ್ ಸಲ್ಲಿಸಲು ಮುಂದಾಗುತ್ತಿರುವುದರಿಂದ ಪೋರ್ಟಲ್ ಮೇಲೆ ಒತ್ತಡ ಹೆಚ್ಚಾಗಿದೆ. ಸರ್ಕಾರವು ಇದನ್ನು ನಿರ್ವಹಿಸಲು ಪೋರ್ಟಲ್ ಅನ್ನು ನವೀಕರಿಸಬೇಕಿದೆ ಅಥವಾ ಸಮಯವನ್ನು ಮತ್ತಷ್ಟು ವಿಸ್ತರಿಸಬೇಕಿದೆ’ ಎಂದು ಮೂರ್ ಸಿಂಘಿ ಕಾರ್ಯನಿರ್ವಾಹಕ ನಿರ್ದೇಶಕ ರಜತ್ ಮೋಹನ್ ಹೇಳಿದ್ದಾರೆ.

‘ಐಫೋನ್ ದಾಸ್ತಾನು ಇದೆ’

ನವದೆಹಲಿ (ಪಿಟಿಐ): ಬೆಂಕಿ ಅವಘಡದ ನಂತರ ಐಫೋನ್ 15 ಮತ್ತು ಐಫೋನ್ 16 ತಯಾರಿಕೆಯನ್ನು ನಿಲ್ಲಿಸಲಾಗಿದೆ. ಆದರೂ ಮುಂದಿನ ಮೂರು ತಿಂಗಳಿಗೆ ಸಾಕಾಗುವಷ್ಟು ದಾಸ್ತಾನು ಲಭ್ಯವಿದೆ. ಇದು ರಫ್ತು ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಮೂಲಗಳು ಸೋಮವಾರ ತಿಳಿಸಿವೆ.

ತಮಿಳುನಾಡಿನ ಹೊಸೂರು ಬಳಿಯ ಟಾಟಾ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಐ-ಫೋನ್ ಮೊಬೈಲ್ ಬಿಡಿ ಭಾಗ ಘಟಕದಲ್ಲಿ ಇತ್ತೀಚೆಗೆ ಬೆಂಕಿ ಅವಘಡ ಸಂಭವಿಸಿದ್ದು, ಲಕ್ಷಾಂತರ ಮೌಲ್ಯದ ಎಲೆಕ್ಟ್ರಾನಿಕ್ ಬಿಡಿ ಭಾಗಗಳು ಬೆಂಕಿಗೆ ಆಹುತಿಯಾಗಿದ್ದವು.

ಆ್ಯಪಲ್ ಮತ್ತು ಟಾಟಾ ಎಲೆಕ್ಟ್ರಾನಿಕ್ಸ್ ಅಧಿಕಾರಿಗಳು ಪರಿಸ್ಥಿತಿಯನ್ನು ಪರಿಶೀಲಿಸಲು ಸಭೆಗಳನ್ನು ನಡೆಸಿದ್ದಾರೆ. ಟಾಟಾ ಎಲೆಕ್ಟ್ರಾನಿಕ್ಸ್ ಐಫೋನ್ ತಯಾರಿಕೆಯನ್ನು ಪುನರಾರಂಭಿಸಲು ಸಮಯವನ್ನು ನಿಗದಿಪಡಿಸಿಲ್ಲ ಎಂದು ಮೂಲಗಳು ಸುದ್ದಿಸಂಸ್ಥೆ ಪಿಟಿಐಗೆ ತಿಳಿಸಿವೆ.

ಆದರೆ, ಟಾಟಾ ಎಲೆಕ್ಟ್ರಾನಿಕ್ಸ್ ಮತ್ತು ಆ್ಯಪಲ್ ಇದಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಸೆನ್ಸೆಕ್ಸ್ 1,272 ಅಂಶ ಕುಸಿತ



ಮುಂಬೈ (ಪಿಟಿಐ): ಬ್ಯಾಂಕಿಂಗ್, ಹಣಕಾಸು ಮತ್ತು ಆಟೊ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ಸೋಮವಾರದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಶೇ 1.5ರಷ್ಟು ಕುಸಿದಿವೆ.

ಲಾಭ ಗಳಿಕೆಗಾಗಿ ಹೂಡಿಕೆದಾರರು ಷೇರುಗಳ ಮಾರಾಟಕ್ಕೆ ಮುಂದಾಗಿದ್ದು, ವಿದೇಶಿ ಬಂಡವಾಳದ ಹೊರಹರಿವು, ಮಧ್ಯಪ್ರಾಚ್ಯ ಬಿಕ್ಕಟ್ಟು, ಜಪಾನ್‌ನಲ್ಲಿ ಬಡ್ಡಿ ದರ ಮತ್ತೆ ಹೆಚ್ಚಳವಾಗುವ ಸಾಧ್ಯತೆ, ವಿದೇಶದ ಮಾರುಕಟ್ಟೆಗಳ ನಕಾರಾತ್ಮಕ ವಹಿವಾಟು ದೇಶದ ಷೇರುಪೇಟೆಯ ಮೇಲೆ ಪರಿಣಾಮ ಬೀರಿತು. ಇದರಿಂದ ಷೇರು ಸೂಚ್ಯಂಕಗಳು ಇಳಿಕೆಯಾಗಿವೆ.

ಷೇರು ಸೂಚ್ಯಂಕಗಳ ಇಳಿಕೆಯಿಂದ ಹೂಡಿಕೆದಾರರ ಸಂಪತ್ತು ಒಂದೇ ದಿನ ₹3.57 ಲಕ್ಷ ಕೋಟಿ ಕರಗಿದೆ. ಬಿಎಸ್‌ಇ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯವು ₹474 ಲಕ್ಷ ಕೋಟಿ ಆಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,272 ಅಂಶ (ಶೇ 1.49) ಕುಸಿದು, 84,299ಕ್ಕೆ ವಹಿವಾಟು ಅಂತ್ಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ) ನಿಫ್ಟಿ 368 ಅಂಶ (ಶೇ 1.53) ಇಳಿಕೆಯಾಗಿ 25,810ಕ್ಕೆ ಸ್ಥಿರಗೊಂಡಿತು.

ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಎಕ್ಸಿಸ್ ಬ್ಯಾಂಕ್ ಷೇರಿನ ಮೌಲ್ಯ ಶೇ 3ಕ್ಕೂ ಹೆಚ್ಚು ಕಡಿಮೆಯಾಗಿದೆ. ಐಸಿಐಸಿಐ ಬ್ಯಾಂಕ್, ಟೆಕ್ ಮಹೀಂದ್ರ, ಮಹೀಂದ್ರ ಆ್ಯಂಡ್ ಮಹೀಂದ್ರ, ಮಾರುತಿ ಸುಜುಕಿ, ಬಜಾಜ್ ಫಿನ್‌ಸರ್ವ್, ಎಸ್‌ಬಿಐ ಮತ್ತು ಟಾಟಾ ಮೋಟರ್ಸ್‌ನ ಷೇರಿನ ಮೌಲ್ಯ ಇಳಿಕೆಯಾಗಿದೆ.

ಜೆಎಸ್‌ಡಬ್ಲ್ಯು ಸ್ಟೀಲ್, ಎನ್‌ಟಿಪಿಸಿ, ಟಾಟಾ ಸ್ಟೀಲ್, ಟೈಟನ್ ಮತ್ತು ಏಷ್ಯನ್ ಪೇಂಟ್ಸ್ ಗಳಿಕೆ ಕಂಡಿವೆ. ಏಷ್ಯಾ ಮಾರುಕಟ್ಟೆಯಲ್ಲಿ ಸೋಲ್ ಮತ್ತು ಟೋಕಿಯೊ ನಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿದ್ದರೆ, ಶಾಂಘೈ ಮತ್ತು ಹಾಂಗ್‌ಕಾಂಗ್ ಸಕಾರಾತ್ಮಕ ವಹಿವಾಟು ನಡೆಸಿವೆ.

ಜಪಾನ್‌ನ ನಿಕೇಯ್ ಸೂಚ್ಯಂಕ ಶೇ 5ರಷ್ಟು ಇಳಿಕೆಯಾಗಿದೆ. ಜಾಗತಿಕ ಬ್ರೆಂಟ್ ಕಚ್ಚಾ ತೈಲ ದರ ಪ್ರತಿ ಬ್ಯಾರೆಲ್‌ಗೆ ಶೇ 0.19ರಷ್ಟು ಇಳಿಕೆಯಾಗಿ, 71.84 ಡಾಲರ್ (₹6,019) ಆಗಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಶುಕ್ರವಾರ ನಡೆದ ವಹಿವಾಟಿನಲ್ಲಿ ₹1,209 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಆಪ್ತ ಸಮಾಲೋಚನೆಗೆ ಐಸಿಎಐ ಸಹಾಯವಾಣಿ

ನವದೆಹಲಿ (ಪಿಟಿಐ): ಐಸಿಎಐ ಸದಸ್ಯರಿಗೆ ಆಪ್ತ ಸಮಾಲೋಚನೆಗಾಗಿ ಸಹಾಯವಾಣಿ ಆರಂಭಿಸಲಾಗಿದೆ ಎಂದು ಭಾರತೀಯ ಲೆಕ್ಕ ಪರಿಶೋಧಕ ಸಂಸ್ಥೆ (ಐಸಿಎಐ) ಸೋಮವಾರ ತಿಳಿಸಿದೆ.

ಸದಸ್ಯರಿಗಾಗಿ ಸಹವರ್ತಿಗಳ ಜಾಲಗಳನ್ನು ಐಸಿಎಐ ರೂಪಿಸಲಿದೆ. ಈ ಜಾಲದಲ್ಲಿ ಸದಸ್ಯರು ವೃತ್ತಿಗೆ ಸಂಬಂಧಿಸಿದ ತಮ್ಮ ಅನುಭವ ಹಂಚಿಕೊಳ್ಳಬಹುದು, ಸಲಹೆ ಪಡೆಯಬಹುದು ಮತ್ತು ಕೆಲಸದಲ್ಲಿನ ಒತ್ತಡ ನಿರ್ವಹಣೆಗೆ ಸಂಬಂಧಿಸಿದಂತೆ ಪರಸ್ಪರ ನೆರವು ನೀಡಬಹುದು.

ಪುಣೆಯ ಅರ್ನ್ಸ್ಟ್ ಆ್ಯಂಡ್ ಯಂಗ್ (ಇವೈ) ಕಂಪನಿಯಲ್ಲಿ ಲೆಕ್ಕ ಪರಿಶೋಧಕಿಯಾಗಿ ಕೆಲಸ ಮಾಡುತ್ತಿದ್ದ ಅನ್ನಾ ಸೆಬಾಸ್ಟಿಯನ್ ಪೆರಾಯಿಲ್ (26) ಅವರು ಹೆಚ್ಚಿನ ಕೆಲಸದ ಒತ್ತಡದಿಂದಾಗಿ ಮೃತಪಟ್ಟಿದ್ದಾರೆ ಎಂಬ ಆರೋಪದ ನಂತರ ಈ ಬೆಳವಣಿಗೆ ನಡೆದಿದೆ.

ಐಸಿಎಐನ ರಾಷ್ಟ್ರೀಯ ಸಹಾಯವಾಣಿ 9997599975ಗೆ ಕರೆ ಮಾಡಬಹುದಾಗಿದೆ. ಐಸಿಎಐ, ಆರೋಗ್ಯ ಸಂಸ್ಥೆಗಳ ಸಹಯೋಗದೊಂದಿಗೆ ಒತ್ತಡ ನಿರ್ವಹಣೆ ಕಾರ್ಯಕ್ರಮಗಳನ್ನು ಏರ್ಪಡಿಸಲಿದೆ. ಜೊತೆಗೆ, ಉದ್ಯೋಗಿಗಳಿಗೆ ಅನುಕೂಲಕರ ಕೆಲಸದ ವಾತಾವರಣ ರೂಪಿಸಲು ಪ್ರಯತ್ನಿಸಲಿದೆ. ಐಸಿಎಐ 4 ಲಕ್ಷಕ್ಕೂ ಹೆಚ್ಚು ಸದಸ್ಯರು ಮತ್ತು 8 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳನ್ನು ಹೊಂದಿದೆ.

ಬೆಳ್ಳಿ ದರ ಕೆ.ಜಿಗೆ ₹2 ಸಾವಿರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನದ ದರವು ಯಥಾಸ್ಥಿತಿಯಲ್ಲಿದ್ದರೆ, ಬೆಳ್ಳಿ ಧಾರಣೆಯಲ್ಲಿ ಇಳಿಕೆಯಾಗಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹2 ಸಾವಿರ ಇಳಿಕೆಯಾಗಿ ₹92,500ರಂತೆ ಮಾರಾಟವಾಗಿದೆ. ಚಿನ್ನದ ದರವು 10 ಗ್ರಾಂಗೆ ₹78,300 ಇದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಅರಸೀಕೆರೆ	₹14000-15500
ಬೆಂಗಳೂರು	₹12500-13500
ತಿಪಟೂರು	₹16030-16300
ತುರುವೇಕೆರೆ	₹15800-16000

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-40500
ಹಳತು	40500-48000
ಚಿತ್ರದುರ್ಗ	
ಅಪಿ	48619-49059
ಬೆಟ್ಟೆ	33029-33499
ಕೆಂಪುಗೋಟು	27609-28010
ರಾಶಿ	48139-48569
ಕಾರ್ಕಳ	
ಹೊಸತು	25000-40500
ಹಳತು	30000-48000
ಕುಮಟ	
ಚಿಪ್ಪು	23089-26019
ಕೋಕ	7019-21099
ಫ್ಯಾಕ್ಟರಿ	6019-16419
ಹಳೆಚಾಲಿ	36899-39599
ಹೊಸಚಾಲಿ	30010-34599
ಸಾಗರ	
ಬಿಳಿಗೋಟು	19837-19837
ಚಾಲಿ	28632-31099
ಕೋಕ	13927-13927
ಕೆಂಪುಗೋಟು	28899-28899
ರಾಶಿ	31509-48001
ಸಿಪ್ಪೆಗೋಟು	8290-16469
ಶಿವಮೊಗ್ಗ	
ಬೆಟ್ಟೆ	46169-55710
ಗೊರಬಲು	17009-34109
ರಾಶಿ	32836-49058
ಸರಕು	64009-89110
ಸಿದ್ದಾಪುರ	
ಬಿಳಿಗೋಟು	24969-27899
ಚಾಲಿ	31099-34099
ಕೋಕ	21909-24699
ರಾಶಿ	41099-45899
ತಟ್ಟಿಬೆಟ್ಟೆ	25789-25789
ಶಿರಸಿ	
ಬೆಟ್ಟೆ	25219-38289
ಬಿಳಿಗೋಟು	24009-30869
ಚಾಲಿ	32129-35698
ಕೆಂಪುಗೋಟು	20089-22123
ರಾಶಿ	40088-45509
ಯಲ್ಲಾಪುರ	
ಅಪಿ	58679-58679
ಬಿಳಿಗೋಟು	16899-28699
ಚಾಲಿ	29699-34729
ಕೋಕ	4141-12899
ಕೆಂಪುಗೋಟು	15910-21899
ರಾಶಿ	40109-53899
ತಟ್ಟಿಬೆಟ್ಟೆ	23199-38912

ತರಂಗಾಂತರ ಖರೀದಿ ಬಾಕಿ ಪಾವತಿಸಿದ ಏರ್‌ಟೆಲ್

ನವದೆಹಲಿ (ಪಿಟಿಐ): ದೇಶದ ಪ್ರಮುಖ ದೂರಸಂಪರ್ಕ ಸೇವಾ ಸಂಸ್ಥೆ ಭಾರ್ತಿ ಏರ್‌ಟೆಲ್, ತರಂಗಾಂತರ ಖರೀದಿಗೆ ಸಂಬಂಧಿಸಿದ ಬಾಕಿ ಮೊತ್ತ ₹8,465 ಕೋಟಿಯನ್ನು ಅವಧಿಗೆ ಮೊದಲೇ ದೂರಸಂಪರ್ಕ ಇಲಾಖೆಗೆ ಪಾವತಿ ಮಾಡಿದೆ.

2016ರಲ್ಲಿ ನಡೆದಿದ್ದ ತರಂಗಾಂತರ ಹರಾಜಿಗೆ ಸಂಬಂಧಿಸಿದಂತೆ ಈ ಬಾಕಿ ಮೊತ್ತ ಪಾವತಿಸಿದೆ. ಕಂತನ್ನು ಶೇ 9.3ರ ಬಡ್ಡಿದರದ ಜೊತೆಗೆ ಪಾವತಿಸಲಾಗಿದೆ ಎಂದು ಕಂಪನಿಯು ಸೋಮವಾರ ತಿಳಿಸಿದೆ.

ಸುನಿತಾ, ಬುಚ್ ಕರೆತರಲು ಬಾಹ್ಯಾಕಾಶ ನಿಲ್ದಾಣ ತಲುಪಿದ ಡ್ರ್ಯಾಗನ್



ಸುನಿತಾ ವಿಲಿಯಮ್ಸ್ ಮತ್ತು ಬುಚ್ ವಿಲ್‌ಮೋರ್

ಕೇಪ್ ಕೆನವೆರಾಲ್ (ಎಪಿ): ಸ್ಪೇಸ್ ಎಕ್ಸ್ ಸಂಸ್ಥೆಯ ‘ಡ್ರ್ಯಾಗನ್’ ಗಗನನೌಕೆಯು ಯಶಸ್ವಿಯಾಗಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣವನ್ನು ತಲುಪಿದ್ದು, ಕಳೆದ ಜೂನ್‌ನಿಂದ ಬಾಹ್ಯಾಕಾಶದಲ್ಲಿ ಸಿಲುಕಿರುವ ಸುನಿತಾ ವಿಲಿಯಮ್ಸ್ ಮತ್ತು ಬುಚ್ ವಿಲ್‌ಮೋರ್ ಅವರನ್ನು ಮುಂದಿನ ವರ್ಷ ಭೂಮಿಗೆ ಮರಳಿ ಕರೆತರಲಿದೆ.

ಇಬ್ಬರು ಗಗನಯಾತ್ರಿಗಳು ಮತ್ತು ಸುನಿತಾ ಹಾಗೂ ಬುಚ್ ಅವರಿಗಾಗಿ ಮೀಸಲಿಟ್ಟ ಎರಡು ಆಸನ ವ್ಯವಸ್ಥೆ ಇರುವ ನೌಕೆಯನ್ನು ಸ್ಪೇಸ್ ಎಕ್ಸ್ ಸಂಸ್ಥೆಯು ಶನಿವಾರ ಉಡಾವಣೆ ಮಾಡಿದೆ.

ನಾಸಾದ ನಿಕ್ ಹೇಗ್ ಮತ್ತು ರಷ್ಯಾದ ಅಲೆಕ್ಸಾಂಡರ್ ಗೋರ್ಬುನೊವ್ ಅವರನ್ನು ಹೊತ್ತ ಡ್ರ್ಯಾಗನ್ ನೌಕೆಯು ಮುಂದಿನ ವರ್ಷ ಫೆಬ್ರುವರಿವರೆಗೂ ಬಾಹ್ಯಾಕಾಶ ನಿಲ್ದಾಣದಲ್ಲಿಯೇ ಇರಲಿದೆ.

ಸುನಿತಾ ಮತ್ತು ಬುಚ್ ಅವರು ಕಳೆದ ಜೂನ್‌ನಲ್ಲಿ ಬೋಯಿಂಗ್‌ನ ‘ಸ್ಟಾರ್ ಲೈನರ್’ ನೌಕೆಯಲ್ಲಿ ಬಾಹ್ಯಾಕಾಶ ನಿಲ್ದಾಣ ತಲುಪಿದ್ದರು. ಆದರೆ, ನೌಕೆಯಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡ ಕಾರಣ ಅವರು ಪುನಃ ಭೂಮಿಗೆ ಹಿಂದಿರುಗಲು ಸಾಧ್ಯವಾಗಿಲ್ಲ.

ಸಂಕ್ಷಿಪ್ತ ಸುದ್ದಿ

ಅಕ್ರಮ ಮೀನುಗಾರಿಕೆ: 17 ಭಾರತೀಯ ಮೀನುಗಾರರ ಬಂಧನ

ಕೊಲಂಬೊ (ಪಿಟಿಐ): ‘ಗಡಿ ದಾಟಿ ಮೀನುಗಾರಿಕೆಯಲ್ಲಿ ತೊಡಗಿದ್ದ 17 ಮಂದಿ ಭಾರತೀಯ ಮೀನುಗಾರರನ್ನು ಶ್ರೀಲಂಕಾ ನೌಕಾಪಡೆಯು ಬಂಧಿಸಿದ್ದು, ದ್ವೀಪರಾಷ್ಟ್ರದಲ್ಲಿ ಈ ವರ್ಷ ಬಂಧನಕ್ಕೆ ಒಳಗಾದ ಭಾರತೀಯ ಮೀನುಗಾರರ ಸಂಖ್ಯೆ 413ಕ್ಕೆ ಏರಿಕೆಯಾಗಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇಲ್ಲಿನ ಉತ್ತಮ ಮನ್ನಾರ್‌ನಲ್ಲಿ ಮೀನುಗಾರರನ್ನು ಬಂಧಿಸಿದ್ದು, ಬೋಟ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಶ್ರೀಲಂಕಾ ನೌಕಾಪಡೆಯು ಬಿಡುಗಡೆಗೊಳಿಸಿದ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ. ‘ಶ್ರೀಲಂಕಾ ನೌಕಾಪಡೆ ನಡೆಸಿದ ವಿಶೇಷ ಕಾರ್ಯಾಚರಣೆಯಲ್ಲಿ ಈ ಮೀನುಗಾರರನ್ನು ಬಂಧಿಸಿದೆ. ಬಂಧಿತರನ್ನು ತಲೈಮನ್ನಾರ್‌ನಲ್ಲಿ ಬಂಧಿಸಿ, ಮುಂದಿನ ಕ್ರಮ ತೆಗೆದುಕೊಳ್ಳುವ ಮುನ್ನಾರ್‌ನ ಮೀನುಗಾರಿಕಾ ಇನ್‌ಸ್ಪೆಕ್ಟರ್‌ಗೆ ಹಸ್ತಾಂತರಿಸಲಾಗಿದೆ’ ಎಂದು ಅವರು ಮಾಹಿತಿ ನೀಡಿದರು.

ಪಾಕ್ ಜಲಸಂಧಿಯು ತಮಿಳುನಾಡು ಹಾಗೂ ಶ್ರೀಲಂಕಾ ನಡುವೆ ಸಮುದ್ರಮಾರ್ಗವನ್ನು ಪ್ರತ್ಯೇಕಿಸುತ್ತದೆ. ಹೆಚ್ಚು ಮೀನು ಸಿಗುವ ಕಾರಣ, ಎರಡೂ ರಾಷ್ಟ್ರಗಳ ಮೀನುಗಾರರ ನಡುವೆ ತಿಕ್ಕಾಟಕ್ಕೆ ಸಾಕ್ಷಿಯಾಗುತ್ತಿದೆ.

ಇಂದು ಜೈಶಂಕರ್ ಬ್ಲಿಂಕೆನ್ ಭೇಟಿ

ವಾಷಿಂಗ್ಟನ್ (ಪಿಟಿಐ): ಭಾರತೀಯ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರು ಮಂಗಳವಾರ ಅಮೆರಿಕ ವಿದೇಶಾಂಗ ವ್ಯವಹಾರ ಸಚಿವ ಅಂಟೋನಿ ಬ್ಲಿಂಕೆನ್ ಅವರನ್ನು ಭೇಟಿ ಮಾಡಲಿದ್ದಾರೆ.

ಈ ಭೇಟಿಯಲ್ಲಿ ಉಕ್ರೇನ್ ಯುದ್ಧ ಮತ್ತು ಮಧ್ಯಪ್ರಾಚ್ಯ ಬಿಕ್ಕಟ್ಟು ಸೇರಿದಂತೆ ವ್ಯಾಪಕವಾದ ದ್ವಿಪಕ್ಷೀಯ ಮತ್ತು ಜಾಗತಿಕ ಸಮಸ್ಯೆಗಳ ಕುರಿತು ಚರ್ಚಿಸುವ ಸಾಧ್ಯತೆಗಳಿವೆ.ಅಂಟೋನಿ ಬ್ಲಿಂಕೆನ್ ಅವರನ್ನು ಭೇಟಿ ಮಾಡುವ ಜೊತೆಗೆ ಚಿಂತಕರೊಂದಿಗೆ ಸಂವಾದ ನಡೆಸಲು ಜೈಶಂಕರ್ ನಿರ್ಧರಿಸಿದ್ದಾರೆ.

ಜೈಶಂಕರ್ ಅವರು ಭಾನುವಾರ ವಾಷಿಂಗ್ಟನ್‌ಗೆ ಆಗಮಿಸಿದ್ದು, ಕ್ಯಾಬಿನೆಟ್ ಮತ್ತು ಬೈಡನ್ ಸರ್ಕಾರದ ಅಧಿಕಾರಿಗಳನ್ನು ಭೇಟಿ ಮಾಡಲಿದ್ದಾರೆ.

ಉಗ್ರರ ದಾಳಿಗೆ ಇರಾನ್‌ನ ಮೂವರು ಭದ್ರತಾ ಸಿಬ್ಬಂದಿ ಬಲಿ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಗಡಿಭಾಗಕ್ಕೆ ಹೊಂದಿಕೊಂಡಿರುವ ಸಿಸ್ತಾನ್- ಬಲೂಚಿಸ್ತಾನ್ ಪ್ರಾಂತ್ಯದಲ್ಲಿ ಭಯೋತ್ಪಾದಕರು ನಡೆಸಿದ ದಾಳಿಗೆ ಇರಾನ್‌ನ ಗಡಿಭದ್ರತಾ ಪಡೆಯ ಮೂವರು ಯೋಧರು ಮೃತಪಟ್ಟಿದ್ದಾರೆ.

‘ಇರಾನ್, ಪಾಕಿಸ್ತಾನದ ಗಡಿಭಾಗದಲ್ಲಿ ವಿವಿಧ ಉಗ್ರಗಾಮಿ ಸಂಘಟನೆಗಳು ಆಗಾಗ್ಗೆ ದಾಳಿ ನಡೆಸುತ್ತಿವೆ. ಪರುದ್, ಖಾಶ್, ಹಿರ್ಮಾಂಡ್ ಹಾಗೂ ಡೊಮಾಕ್ ಪ್ರಾಂತ್ಯದಲ್ಲಿ ಕಳೆದ ನಾಲ್ಕು ರಾತ್ರಿ ನಿರಂತರ ದಾಳಿ ನಡೆಸಿದ್ದು, ಮೂವರು ಯೋಧರು ಮೃತಪಟ್ಟಿದ್ದಾರೆ. ಹಲವರು ಗಾಯಗೊಂಡಿದ್ದಾರೆ’ ಎಂದು ಇರಾನ್ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸುನ್ನಿ ಬಹುಸಂಖ್ಯಾತ ಗುಂಪಾದ ‘ಜೈಶ್-ಉಲ್-ಅದ್ಲ್’ ಸಂಘಟನೆಯು ದಾಳಿಯ ಹೊಣೆ ಹೊತ್ತುಕೊಂಡಿದೆ. 2012ರಲ್ಲಿ ಈ ಗುಂಪು ತಲೆಯೆತ್ತಿದ್ದು, ಬಲೂಚಿಸ್ತಾನದ ಮತ್ತೊಂದು ಉಗ್ರಗಾಮಿ ಸಂಘಟನೆ ‘ಜುನ್‌ದುಲ್ಲಾ’ ಕೂಡ ಈ ಭಾಗದಲ್ಲಿ ಸಕ್ರಿಯವಾಗಿದೆ.



ನೇಪಾಳದ ಕಠ್ಮಂಡುವಿನ ಬಾಗ್‌ಮತಿ ನದಿಯ ತಟದಲ್ಲಿ ಇರುವ ಟಿನ್ ಶೆಡ್ ಒಂದು ಪ್ರವಾಹದಿಂದಾಗಿ ಅರ್ಧದಷ್ಟು ಮುಳುಗಿತ್ತು –ಪಿಟಿಐ ಚಿತ್ರ

ನೇಪಾಳ: ಸಾವಿನ ಸಂಖ್ಯೆ 200ಕ್ಕೆ ಏರಿಕೆ

ಕಠ್ಮಂಡು (ಪಿಟಿಐ): ನೇಪಾಳದಾದ್ಯಂತ ಸಂಭವಿಸಿದ ಪ್ರವಾಹ ಮತ್ತು ಭೂಕುಸಿತದಲ್ಲಿ ಸಿಲುಕಿ ಮೃತಪಟ್ಟವರ ಸಂಖ್ಯೆ ಸುಮಾರು 200ಕ್ಕೆ ಏರಿಕೆಯಾಗಿದೆ. ಕನಿಷ್ಠ 30 ಮಂದಿ ಇನ್ನೂ ನಾಪತ್ತೆಯಾಗಿದ್ದು, ಮೂರನೇ ದಿನ ಸೋಮವಾರವೂ ರಕ್ಷಣಾ ಕಾರ್ಯಾಚರಣೆ ನಡೆಯಿತು.

ಭಾರಿ ಮಳೆ, ಪ್ರವಾಹ, ಭೂಕುಸಿತದ ಪರಿಣಾಮವಾಗಿ ಕನಿಷ್ಠ 192 ಮಂದಿ ಮೃತಪಟ್ಟಿದ್ದಾರೆ. 194 ಮಂದಿ ಗಾಯಗೊಂಡಿದ್ದಾರೆ ಎಂದು ಗೃಹ ಇಲಾಖೆ ವಕ್ತಾರ ರಿಷಿರಾಮ್ ತಿವಾರಿ ತಿಳಿಸಿದರು.

ಪ್ರಧಾನಿ ಪ್ರಕಾಶ್ ಮಾನ್ ಸಿಂಗ್ ಅವರು ಪ್ರಧಾನ ಮಂತ್ರಿಗಳ ಕಾರ್ಯಾಲಯದಲ್ಲಿ ಭಾನುವಾರ ಸರ್ವಪಕ್ಷಗಳ ಸಭೆ ಕರೆದಿದ್ದು, ರಕ್ಷಣೆ, ಪರಿಹಾರ ಮತ್ತು ಪುನರ್‌ವಸತಿ ಕಾರ್ಯಾಚರಣೆ ಮುಂದುವರಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ. ನೇಪಾಳ ಸೇನೆ, ನೇಪಾಳ ಪೊಲೀಸ್ ಮತ್ತು ಸಶಸ್ತ್ರ ಪೊಲೀಸ್ ಪಡೆ ಸಿಬ್ಬಂದಿ ಈವರೆಗೆ 4,500 ಮಂದಿಯನ್ನು ರಕ್ಷಿಸಿದ್ದಾರೆ.

ಇಸ್ರೇಲ್ ವಿರುದ್ಧ ಹೋರಾಟ ಮುಂದುವರಿಯಲಿದೆ: ಹಿಜ್ಬುಲ್ಲಾ

ಬೈರೂತ್/ಜೆರುಸಲೇಂ (ಎಪಿ): ಇಸ್ರೇಲ್ ವಿರುದ್ಧ ಹೋರಾಟ ಮುಂದುವರಿಯುತ್ತದೆ ಎಂದು ಹೇಳಿರುವ ಹಿಜ್ಬುಲ್ಲಾ ಸಂಘಟನೆಯ ಉಪ ಮಹಾ ಕಾರ್ಯದರ್ಶಿ ನಯೀಂ ಕಾಸಿಂ, ಸುದೀರ್ಘ ಅವಧಿಯ ಯುದ್ಧಕ್ಕೆ ಸಿದ್ಧವಾಗಿರುವುದಾಗಿ ಹೇಳಿದ್ದಾರೆ.

ಇಸ್ರೇಲ್ ಸೇನೆಯು ಕಳೆದ 10 ದಿನಗಳಲ್ಲಿ ನಡೆಸಿದ ದಾಳಿಗಳಲ್ಲಿ ಸಂಘಟನೆಯ ನಾಯಕ ಹಸನ್ ನಸ್ರಲ್ಲಾ ಮತ್ತು ಆರು ಮಂದಿ ಪ್ರಮುಖರು ಹತ್ಯೆಗೀಡಾಗಿದ್ದಾರೆ. ಇಸ್ರೇಲ್ ಸೇನೆಯು ಭೂದಾಳಿ ನಡೆಸಿದರೆ ಲೆಬನಾನ್ ರಕ್ಷಣೆಗೆ ಹಿಜ್ಬುಲ್ಲಾ ಹೋರಾಟಗಾರರು ಸಜ್ಜಾಗಿದ್ದಾರೆ ಎಂದು ಕಾಸಿಂ ಹೇಳಿದ್ದಾರೆ.

ನಸ್ರಲ್ಲಾ ಅವರ ಸ್ಥಾನಕ್ಕೆ ಹಿಜ್ಬುಲ್ಲಾ ಸಂಘಟನೆಯು ಇನ್ನೊಬ್ಬರನ್ನು ನೇಮಕ ಮಾಡುವವರೆಗೆ ಕಾಸಿಂ ಅವರು ಸಂಘಟನೆಯ ನಾಯಕತ್ವ ವಹಿಸಿಕೊಳ್ಳಲಿದ್ದಾರೆ. ಹಿಜ್ಬುಲ್ಲಾ ಸಂಘಟನೆಯ ಪ್ರಮುಖ ಕಮಾಂಡರ್‌ಗಳ ಹತ್ಯೆ ಆಗಿದ್ದರೂ ಸಂಘಟನೆಯು ಹೊಸ ಕಮಾಂಡರ್‌ಗಳನ್ನು ಈಗ ನೆಚ್ಚಿಕೊಂಡಿದೆ ಎಂದು ಕಾಸಿಂ ತಿಳಿಸಿದ್ದಾರೆ.

‘ನಮ್ಮ ಮಿಲಿಟರಿ ಸಾಮರ್ಥ್ಯದ ಮೇಲೆ ಪರಿಣಾಮ ಉಂಟುಮಾಡಲು ಇಸ್ರೇಲ್‌ಗೆ ಆಗಿಲ್ಲ’ ಎಂದು ಕೂಡ ಅವರು ಹೇಳಿದ್ದಾರೆ.

ಕಾಸಿಂ ಅವರು ಟಿ.ವಿ. ಮೂಲಕ ಮಾತನಾಡುವ ಮೊದಲು ಬೈರೂತ್‌ನ ಕೇಂದ್ರ ಭಾಗದ ಮೇಲೆ ನಡೆದ ದಾಳಿಯಿಂದಾಗಿ ಅಪಾರ್ಟ್‌ಮೆಂಟ್ ಕಟ್ಟಡವೊಂದು ನೆಲಸಮಗೊಂಡಿದ್ದು, ಪ್ಯಾಲೆಸ್ಟೀನ್‌ನ ಮೂವರು ಬಂಡುಕೋರರು ಹತರಾಗಿದ್ದಾರೆ. ಸುಮಾರು ಒಂದು ವರ್ಷದಿಂದ ನಡೆಯುತ್ತಿರುವ ಯುದ್ಧದಲ್ಲಿ ಬೈರೂತ್‌ನ ಕೇಂದ್ರ ಭಾಗದ ಮೇಲೆ ದಾಳಿ ನಡೆದಿರುವುದು ಇದೇ ಮೊದಲು.

105 ಮಂದಿ ಸಾವು: ಭಾನುವಾರ ನಡೆದ ದಾಳಿಗಳಲ್ಲಿ ಒಟ್ಟು 105 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ ಎಂದು ಲೆಬನಾನ್‌ನ ಆರೋಗ್ಯ ಸಚಿವಾಲಯ ಹೇಳಿದೆ. ಬಂಡುಕೋರರನ್ನು ಮಾತ್ರ ಗುರಿಯಾಗಿಸಿಕೊಳ್ಳುವುದಾಗಿ ಇಸ್ರೇಲ್ ಹೇಳುತ್ತಿದೆ. ಆದರೆ ದಾಳಿಗಳಲ್ಲಿ ನಾಗರಿಕರು ಕೂಡ ಬಲಿಯಾಗಿದ್ದಾರೆ. ದಾಳಿಗಳಲ್ಲಿ ಬಲಿಯಾದವರ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ.

ಲೆಬನಾನ್ ಮೇಲೆ ಇಸ್ರೇಲ್ ಸೋಮವಾರ ನಡೆಸಿದ ದಾಳಿಯಲ್ಲಿ ತನ್ನ ಕಮಾಂಡರ್ ಫತಾ ಶರೀಫ್ ಮೃತಪಟ್ಟಿದ್ದಾರೆ ಎಂದು ಹಮಾಸ್ ಬಂಡುಕೋರ ಸಂಘಟನೆ ತಿಳಿಸಿದೆ. ಅಲ್-ಬಸ್ ನಿರಾಶ್ರಿತರ ಶಿಬಿರದ ಮೇಲೆ ನಡೆದ ದಾಳಿಯಲ್ಲಿ ಶರೀಫ್ ಬಲಿಯಾಗಿದ್ದಾರೆ. ಅವರ ಪತ್ನಿ, ಮಗ ಮತ್ತು ಮಗಳು ಕೂಡ ಮೃತಪಟ್ಟಿದ್ದಾರೆ ಎಂದು ಸಂಘಟನೆ ತಿಳಿಸಿದೆ.

ಭಯೋತ್ಪಾದನೆಗೆ ಸ್ಥಾನವಿಲ್ಲ (ನವದೆಹಲಿ ವರದಿ): ಪಶ್ಚಿಮ ಏಷ್ಯಾದಲ್ಲಿನ ಇತ್ತೀಚಿನ ಬೆಳವಣಿಗೆಗಳ ಕುರಿತು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಜತೆ ಸೋಮವಾರ ಮಾತನಾಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, ‘ಜಗತ್ತಿನಲ್ಲಿ ಭಯೋತ್ಪಾದನೆಗೆ’ ಸ್ಥಾನವಿಲ್ಲ ಎಂದು ಹೇಳಿದ್ದಾರೆ.

‘ಪ್ರಾದೇಶಿಕ ಉದ್ವಿಗ್ನತೆ ತಡೆಯುವುದರ ಜತೆಗೆ ಒತ್ತೆಯಾಳುಗಳ ಸುರಕ್ಷಿತ ಬಿಡುಗಡೆಯನ್ನು ಖಚಿತಪಡಿಸಿಕೊಳ್ಳಬೇಕಿದೆ’ ಎಂದು ಅವರು ತಿಳಿಸಿದ್ದಾರೆ.

ಒಂದು ವಾರದಲ್ಲಿ ಹತ್ಯೆಯಾದ ಹಿಜ್ಬುಲ್ಲಾ ನಾಯಕರು

ಹಸನ್ ನಸ್ರಲ್ಲಾ (ಸಂಘಟನೆಯ ಮುಖ್ಯಸ್ಥ), ಇಬ್ರಾಹಿಂ ಖುಬೈಸಿ (ಕಮಾಂಡರ್ ಹಾಗೂ ರಾಕೆಟ್ ವಿಭಾಗದ ಮುಖ್ಯಸ್ಥ), ಇಬ್ರಾಹಿಂ ಅಕೀಲ್ (ಕಾರ್ಯಾಚರಣೆ ವಿಭಾಗದ ಕಮಾಂಡರ್), ಫಾದ್ ಶುಕ್ರ್ (ಕಮಾಂಡರ್, ನಸ್ರಲ್ಲಾ ಅವರ ಆಪ್ತ)

ನಬೀಲ್ ಕೌಕ್ (ಹಿಜ್ಬುಲ್ಲಾ ಕೇಂದ್ರ ಪರಿಷತ್ತಿನ ಉಪ ಮುಖ್ಯಸ್ಥ), ಅಹಮದ್ ವಹಬಿ (ರಾದ್ವಾನ್ ಪಡೆಯ ಕಮಾಂಡರ್), ಅಲಿ ಕರಾಕಿ (ಹಿಜ್ಬುಲ್ಲಾ ಪಡೆಯ ದಕ್ಷಿಣದ ಮುಖ್ಯಸ್ಥ), ಮೊಹಮ್ಮದ್ ಸುರೂರ್ (ಹಿಜ್ಬುಲ್ಲಾ ಡ್ರೋನ್ ಘಟಕದ ಮುಖ್ಯಸ್ಥ)


ಈಗಿನ ಪ್ರಮುಖ ಕಮಾಂಡರ್‌ಗಳು: ನಯೀಂ ಕಾಸಿಂ, ಹಾಶಿಂ ಸಫೀದಿನ್ (ಇವರು ನಸ್ರಲ್ಲಾ ಸ್ಥಾನಕ್ಕೆ ಬರಲಿದ್ದಾರೆ ಎಂಬ ಮಾತು ಇದೆ), ತಲಾಲ್ ಹಮೀ, ಅಬು ಅಲಿ ರೆದಾ.





ಸಂಕ್ಷಿಪ್ತ ಸುದ್ದಿ

ಸಿದ್ದಿಕ್‌ಗೆ ಬಂಧನದಿಂದ ಮಧ್ಯಂತರ ರಕ್ಷಣೆ



ನವದೆಹಲಿ(ಪಿಟಿಐ): ಅತ್ಯಾಚಾರ ಪ್ರಕರಣದಲ್ಲಿ ಮಲಯಾಳ ಚಿತ್ರನಟ ಸಿದ್ದಿಕ್ ಅವರನ್ನು ಬಂಧಿಸದಂತೆ ಸುಪ್ರೀಂ ಕೋರ್ಟ್ ಮಧ್ಯಂತರ ರಕ್ಷಣೆ ನೀಡಿದೆ.

ನಿರೀಕ್ಷಣಾ ಜಾಮೀನು ನಿರಾಕರಿಸಿದ ಕೇರಳ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಿದ್ದಿಕ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬೇಲಾ ಎಂ.ತ್ರಿವೇದಿ ಮತ್ತು ಸತೀಶ್ ಚಂದ್ರ ಶರ್ಮಾ ಅವರಿದ್ದ ಪೀಠವು, ಕೇರಳ ಸರ್ಕಾರ ಮತ್ತು ಪ್ರಕರಣದ ಸಂತ್ರಸ್ತರಿಗೆ ನೋಟಿಸ್ ಜಾರಿ ಮಾಡಿದೆ.

ಸಿದ್ದಿಕ್ ವಿರುದ್ಧ ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 376 (ಅತ್ಯಾಚಾರ) ಮತ್ತು 506 (ಕ್ರಿಮಿನಲ್ ಬೆದರಿಕೆ) ಅಡಿ ಮೊಕದ್ದಮೆ ದಾಖಲಾಗಿದೆ.

ಗೊಗೊಯಿ ಪ್ರತಿವಾದಿಯಾಗಿಸಿ ಅರ್ಜಿ: ತರಾಟೆ



ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೊಯಿ ಅವರನ್ನು ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದರಲ್ಲಿ (ಪಿಐಎಲ್) ಪ್ರತಿವಾದಿಯನ್ನಾಗಿಸಿದ್ದಕ್ಕೆ ಹಾಗೂ ಸೇವಾ ತಕರಾರಿಗೆ ಸಂಬಂಧಿಸಿದ ಅರ್ಜಿಯೊಂದನ್ನು ವಜಾಗೊಳಿಸಿದ್ದಕ್ಕಾಗಿ ಅವರ ವಿರುದ್ಧ ಆಂತರಿಕ ವಿಚಾರಣೆಗೆ ಆದೇಶಿಸುವಂತೆ ಕೋರಿದ್ದಕ್ಕಾಗಿ ಸುಪ್ರೀಂ ಕೋರ್ಟ್ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

‘ನ್ಯಾಯಮೂರ್ತಿಯೊಬ್ಬರನ್ನು ಪ್ರತಿವಾದಿಯನ್ನಾಗಿಸಿ ನೀವು ಪಿಐಎಲ್ ಸಲ್ಲಿಸಿದ್ದು ಹೇಗೆ? ತುಸುವಾದರೂ ಘನತೆ ಇರಬೇಕು. ನ್ಯಾಯಮೂರ್ತಿಯೊಬ್ಬರ ವಿರುದ್ಧ ಆಂತರಿಕ ವಿಚಾರಣೆ ಆಗಬೇಕು ಎಂದು ಹೀಗೇ ಸುಮ್ಮನೆ ಹೇಳಲು ಅವಕಾಶವಿಲ್ಲ. ಗೊಗೊಯಿ ಅವರು ಸುಪ್ರೀಂ ಕೋರ್ಟ್‌ನ ನ್ಯಾಯ ಮೂರ್ತಿ ಆಗಿದ್ದವರು’ ಎಂದು ಸಿಜೆಐ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ಪುಣೆ ಮೂಲದ ಅರ್ಜಿದಾರರಿಗೆ ಹೇಳಿದೆ.

ಮಣಿಪುರ: ಎಎಫ್‌ಎಸ್‌ಪಿಎ 6 ತಿಂಗಳು ವಿಸ್ತರಣೆ

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆಯನ್ನು (ಎಎಫ್‌ಎಸ್‌ಪಿಎ) ಮತ್ತೆ ಆರು ತಿಂಗಳು ವಿಸ್ತರಿಸಲು ರಾಜ್ಯ ಗೃಹ ಇಲಾಖೆ ನಿರ್ಧರಿಸಿದೆ.

‘ಅವಧಿ ವಿಸ್ತರಣೆಯು ಅಕ್ಟೋಬರ್ 1ರಿಂದ ಜಾರಿಗೆ ಬರಲಿದೆ. ಇಂಫಾಲ್ ಕಣಿವೆಯ 19 ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶ ಗಳನ್ನು ಎಎಫ್ ಎಸ್‌ಪಿಎಯಿಂದ ಹೊರಗಿಡಲಾಗಿದೆ’ ಎಂದು ಸರ್ಕಾರದ ಅಧಿಸೂಚನೆ ತಿಳಿಸಿದೆ.

‘19 ಪೊಲೀಸ್ ಠಾಣೆಗಳ ವ್ಯಾಪ್ತಿಯ ಪ್ರದೇಶ ಹೊರತುಪಡಿಸಿ ಇಡೀ ರಾಜ್ಯವನ್ನು ಇನ್ನೂ ಆರು ತಿಂಗಳು ಸಂಘರ್ಷಪೀಡಿತ ಪ್ರದೇಶ ಎಂದು ಘೋಷಿಸಲು ಮಣಿಪುರ ರಾಜ್ಯಪಾಲರು ಒಪ್ಪಿಗೆ ಸೂಚಿಸಿದ್ದಾರೆ’ ಎಂದು ಹೇಳಿದೆ.

ಸಂಘರ್ಷ ಪೀಡಿತ ಪ್ರದೇಶ ಗಳಲ್ಲಿ ಶಾಂತಿ ಸ್ಥಾಪಿಸುವ ನಿಟ್ಟಿನಲ್ಲಿ ಸೇನೆಗೆ ಶೋಧ ಕಾರ್ಯಾಚರಣೆ, ಬಂಧನ ಮತ್ತು ಕಂಡಲ್ಲಿ ಗುಂಡು ಹಾರಿಸಲು ವಿಶೇಷಾಧಿಕಾರ ಕಾಯ್ದೆಯಡಿ ಸಂಪೂರ್ಣ ಅಧಿಕಾರವಿದೆ.

‘ದಲಿತ ಯುವಕನಿಗೆ ಪ್ರವೇಶ ನೀಡಿ’

ಶುಲ್ಕ ಪಾವತಿಸಿಲ್ಲ ಎಂದು ಪ್ರವೇಶ ನಿರಾಕರಿಸಿದ್ದ ಐಐಟಿ ● ‘ಸುಪ್ರೀಂ’ ಮೆಟ್ಟಿಲೇರಿದ್ದ ಪೋಷಕರು

ಪ್ರಜಾವಾಣಿ ವಾರ್ತೆ/ಪಿಟಿಐ



ನವದೆಹಲಿ: ‘ದಲಿತ ಸಮುದಾಯಕ್ಕೆ ಸೇರಿದ ದಿನಗೂಲಿ ನೌಕರನ ಮಗನಿಗೆ ಪ್ರವೇಶ ನೀಡಿ’ ಎಂದು ಸುಪ್ರೀಂ ಕೋರ್ಟ್ ತನ್ನ ವಿಶೇಷಾಧಿಕಾರ ಬಳಸಿ, ಧನಬಾದ್‌ನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ (ಐಐಟಿ) ಸೋಮವಾರ ಆದೇಶಿಸಿದೆ. ಸಮಯಕ್ಕೆ ಸರಿಯಾಗಿ ಶುಲ್ಕ ಪಾವತಿಸಲಿಲ್ಲ ಎಂಬ ಕಾರಣಕ್ಕೆ ಯುವಕನಿಗೆ ಪ್ರವೇಶ ನಿರಾಕರಿಸಲಾಗಿತ್ತು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ಪೀಠವು ಈ ಆದೇಶ ಹೊರಡಿಸಿದೆ. ‘ಈ ವಿದ್ಯಾರ್ಥಿಗಾಗಿ ಕಾಲೇಜಿನಲ್ಲಿ ಸೀಟೊಂದನ್ನು ಸೃಷ್ಟಿಸಿ. ಅವರಿಗೆ ಹಾಸ್ಟೆಲ್ ಸೌಲಭ್ಯ ಸೇರಿದಂತೆ ಎಲ್ಲ ಸೌಲಭ್ಯಗಳನ್ನು ಒದಗಿಸಬೇಕು’ ಎಂದೂ ಹೇಳಿದೆ. ಯುವಕನ ಇಬ್ಬರೂ ಅಣ್ಣಂದಿರು ಐಐಟಿ ಕಾನ್ಪುರ ಹಾಗೂ ಎನ್‌ಐಟಿ ಹಮೀರ್‌ಪುರದ ವಿದ್ಯಾರ್ಥಿಗಳಾಗಿದ್ದರು.

‘ಇಂಥ ಪ್ರತಿಭಾನ್ವಿತ ಹಾಗೂ ಸಮಾಜದ ತಳಸಮುದಾಯದ ಹುಡುಗನೊಬ್ಬನ ಭವಿಷ್ಯವನ್ನು ಹಾಳುಗೆಡವಲು ಸಾಧ್ಯವಿಲ್ಲ. ನ್ಯಾಯಕ್ಕಾಗಿ ದಲಿತ ಯುವಕನನ್ನು ಅಲ್ಲಿಂದ ಇಲ್ಲಿಗೆ ಅಲೆಯುವಂತೆ ಮಾಡಲಾಗಿದೆ. ಕೆಲವು ಪ್ರಕರಣಗಳಲ್ಲಿ ಎಲ್ಲವನ್ನೂ ಕಾನೂನಿನ ನೆಲಗಟ್ಟಿನಲ್ಲೇ ನೋಡಲಾಗದು’ ಎಂದು ಸಿಜೆಐ ಚಂದ್ರಚೂಡ್ ಅಭಿಪ್ರಾಯಪಟ್ಟರು.

ಹಿನ್ನೆಲೆ ಏನು?: ದಲಿತ ಯುವಕನ ಹೆಸರು ಅತುಲ್ ಕುಮಾರ್. ಈತನ ತಂದೆ ದಿನಗೂಲಿ ನೌಕರ. ಇವರು ಉತ್ತರ ಪ್ರದೇಶದ ಮುಜಾಫರ್‌ನಗರದ ಖತೌಲೀ ಗ್ರಾಮದವರು. ತಂದೆಯ ಸಂಬಳ ₹450. ಐಐಟಿಗೆ ದಾಖಲಾಗಲು ಅತುಲ್‌ಗೆ ₹17,500 ಅಗತ್ಯ ಇತ್ತು. ಶುಲ್ಕವನ್ನು ಜೂನ್ 24, ಸಂಜೆ 5 ಗಂಟೆ ಒಳಗೆ ಆನ್‌ಲೈನ್ ಮೂಲಕ ಪಾವತಿಸಬೇಕಿತ್ತು. ಗ್ರಾಮಸ್ಥರಿಂದ ಸಾಲ ಪಡೆದ ಪೋಷಕರು ಜೂನ್ 24, ಸಂಜೆ 4.45ರ ಹೊತ್ತಿಗೆ ಹಣ ಹೊಂದಿಸಿದರು. ಆದರೆ, ಆನ್‌ಲೈನ್ ಮೂಲಕ ಹಣ ವರ್ಗಾವಣೆ ಆಗಲಿಲ್ಲ.

ಪರಿಶಿಷ್ಟ ಜಾತಿ ಕೋಟಾದಲ್ಲಿ ವಿದ್ಯಾರ್ಥಿಯು ಜೆಇಇ ಪರೀಕ್ಷೆಯನ್ನು 1,455 ರ‍್ಯಾಂಕ್‌ನೊಂದಿಗೆ ಪಾಸು ಮಾಡಿದ್ದ. ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಯುವಕನಿಗೆ ಧನಬಾದ್‌ನ ಐಐಟಿಯಲ್ಲಿ ಸೀಟು ಕೂಡ ದೊರಕಿತ್ತು.

ಸೀಟು ದೊರಕಿಸಿಕೊಡುವಂತೆ ಪೋಷಕರು ಪರಿಶಿಷ್ಟ ಜಾತಿಯ ರಾಷ್ಟ್ರೀಯ ಆಯೋಗವನ್ನು, ಜಾರ್ಖಂಡ್ ಕಾನೂನು ಸೇವಾ ಪ್ರಾಧಿಕಾರವನ್ನು ಹಾಗೂ ಮದ್ರಾಸ್ ಹೈಕೋರ್ಟ್ ಮೆಟ್ಟಿಲನ್ನೂ ಹತ್ತಿದ್ದರು. ಜೆಇಇ ಪರೀಕ್ಷೆಯನ್ನು ಅತುಲ್ ಜಾರ್ಖಂಡ್‌ನಲ್ಲಿ ಬರೆದಿದ್ದ. ಈ ಪರೀಕ್ಷೆಯನ್ನು ಐಐಟಿ ಮದ್ರಾಸ್ ನಡೆಸಿತ್ತು. ಆದ್ದರಿಂದಲೇ ಪೋಷಕರು ಮದ್ರಾಸ್ ಮೆಟ್ಟಿಲೇರಿದ್ದರು. ಆದರೆ, ಪರಿಶಿಷ್ಟ ಜಾತಿಯ ರಾಷ್ಟ್ರೀಯ ಆಯೋಗವು, ‘ನಿಮಗೆ ಸಹಾಯ ಮಾಡಲು ಸಾಧ್ಯವಿಲ್ಲ’ ಎಂದಿತು. ನಂತರ, ಸುಪ್ರೀಂ ಕೋರ್ಟ್ ಮೊರೆ ಹೋಗುವಂತೆ ಮದ್ರಾಸ್ ಹೈಕೋರ್ಟ್ ಸೂಚಿಸಿತ್ತು.

ಚೆನ್ನಾಗಿ ಓದು: ಸಿಜೆಐ ಕಿವಿಮಾತು

ಅರ್ಜಿ ಸಂಬಂಧ ಆದೇಶ ನೀಡಿದ ಬಳಿಕ, ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಯುವಕ ಅತುಲ್‌ನನ್ನು ತಮ್ಮ ಕೊಠಡಿಗೆ ಕರೆಸಿಕೊಂಡು, ಆತನೊಂದಿಗೆ ಮಾತುಕತೆ ನಡೆಸಿದರು. ಬಳಿಕ, ‘ಆಲ್ ದಿ ಬೆಸ್ಟ್, ಚೆನ್ನಾಗಿ ಓದು’ ಎಂದು ಹೇಳಿದರು.

‘ವಕೀಲರ ಸಂಘವು ಯುವಕನ ಕಾಲೇಜು ಶುಲ್ಕವನ್ನು ಭರಿಸಲು ಸಿದ್ಧವಿದೆ ಎಂದು ತಿಳಿಸಿದೆ. ಹಿರಿಯ ವಕೀಲ ಆನಂದ್ ಪದ್ಮನಾಭನ್ ಹಾಗೂ ಸಂಘದ ಇತರ ಹಿರಿಯ ಸದಸ್ಯರೂ ಶುಲ್ಕ ಭರಿಸುವುದಾಗಿ ಹೇಳಿದ್ದಾರೆ’ ಎಂದು ವಾದ ಮಂಡಿಸುವ ವೇಳೆ ಯುವಕನ ತಂದೆಯ ಪರ ವಕೀಲರು ನ್ಯಾಯಾಲಯಕ್ಕೆ ತಿಳಿಸಿದರು.

ಯಾವುದದು ವಿಶೇಷಾಧಿಕಾರ?: ತನ್ನ ಮುಂದಿರುವ ಯಾವುದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಪೂರ್ಣ ನ್ಯಾಯ ಒದಗಿಸಲು ಸಂವಿಧಾನದ 142ನೇ ವಿಧಿ ಅಡಿಯಲ್ಲಿ, ಸುಪ್ರೀಂ ಕೋರ್ಟ್ ಯಾವುದೇ ತೀರ್ಪು ಹಾಗೂ ಆದೇಶವನ್ನೂ ನೀಡಬಹುದು.

ಕೇಜ್ರಿವಾಲ್, ಆತಿಶಿ ವಿರುದ್ಧದ ಮೊಕದ್ದಮೆ: ವಿಚಾರಣೆಗೆ ತಡೆ

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಆತಿಶಿ ಮತ್ತು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ವಿರುದ್ಧದ ಮಾನನಷ್ಟ ಪ್ರಕರಣದ ವಿಚಾರಣೆಗೆ ಸುಪ್ರೀಂ ಕೋರ್ಟ್ ಸೋಮವಾರ ತಡೆ ನೀಡಿದೆ.

ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್ ಮತ್ತು ಎಸ್.ವಿ.ಎನ್ ಭಟ್ಟಿ ಅವರಿದ್ದ ಪೀಠವು ಎಎಪಿ ನಾಯಕರಿಗೆ ಮಧ್ಯಂತರ ಪರಿಹಾರ ನೀಡಿತು. 2018ರ ಡಿಸೆಂಬರ್‌ನಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾಡಿದ ಆರೋಪಗಳ ಕುರಿತು ಇಲ್ಲಿನ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ ದಾಖಲಿಸಿರುವ ಬಿಜೆಪಿ ನಾಯಕ ರಾಜೀವ್ ಬಬ್ಬರ್ ಅವರಿಂದ ಪ್ರತಿಕ್ರಿಯೆ ಕೇಳಿತು.

‘ಬಿಜೆಪಿಯು ಕೆಲ ಸಮುದಾಯಗಳಿಗೆ ಸೇರಿದ 30 ಲಕ್ಷ ಜನರ ಹೆಸರನ್ನು ಮತದಾರರ ಪಟ್ಟಿಯಿಂದ ಅಳಿಸಿ ಹಾಕಿದೆ’ ಎಂದು ಆರೋಪಿಸಿ ಆತಿಶಿ, ಕೇಜ್ರಿವಾಲ್ ಹಾಗೂ ಇತರ ಎಎಪಿ ನಾಯಕರಾದ ಸುನಿಲ್ ಕುಮಾರ್ ಗುಪ್ತಾ ಹಾಗೂ ಮನೋಜ್ ಕುಮಾರ್ ಹೇಳಿಕೆ ನೀಡಿದ್ದರು. ಇದರ ವಿರುದ್ಧ ರಾಜೀವ್ ಬಬ್ಬರ್ ಮೊಕದ್ದಮೆ ದಾಖಲಿಸಿದ್ದಾರೆ.

ವಿಚಾರಣಾ ನ್ಯಾಯಾಲಯದಲ್ಲಿ ಪ್ರಕರಣವು ಬಾಕಿ ಇರುವಂತೆಯೇ ತಮ್ಮ ವಿರುದ್ಧದ ಮೊಕದ್ದಮೆಯನ್ನು ಪ್ರಶ್ನಿಸಿ ಆತಿಶಿ, ಕೇಜ್ರಿವಾಲ್ ಸೇರಿ ನಾಲ್ವರೂ ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಸೆ.2ರಂದು ತೀರ್ಪು ನೀಡಿದ್ದ ಹೈಕೋರ್ಟ್ ‘ಬಿಜೆಪಿಯನ್ನು ನಿಂದಿಸುವ ಹಾಗೂ ಅನಗತ್ಯ ರಾಜಕೀಯ ಲಾಭ ಗಳಿಸುವ ಉದ್ದೇಶದಿಂದ ಮಾಡಿರುವ ಆರೋಪಗಳು ಪ್ರಾಥಮಿಕವಾಗಿ ಮಾನಹಾನಿಕರವಾಗಿವೆ’ ಎಂದು ಹೇಳಿ ಅರ್ಜಿ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಆತಿಶಿ ಮತ್ತು ಕೇಜ್ರಿವಾಲ್ ಹಾಗೂ ಇತರರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಆತಿಶಿ, ಕೇಜ್ರಿವಾಲ್ ಪರ ವಾದ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ, ‘ಬಿಜೆಪಿ ದೆಹಲಿಯ ಅಧಿಕೃತ ಪ್ರತಿನಿಧಿಯಾಗಿ ಬಬ್ಬರ್ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ. ಆ ಪಕ್ಷದ ಕೇಂದ್ರ ಅಥವಾ ದೆಹಲಿ ಘಟಕ ಸೇರಿದಂತೆ ಯಾರೂ ದೂರು ದಾಖಲಿಸಿಲ್ಲ. ಅಲ್ಲದೆ ಬಬ್ಬರ್ ಮಾನಹಾನಿಗೆ ಒಳಗಾಗಿರುವ ವ್ಯಕ್ತಿಯಲ್ಲ’ ಎಂದು ಪೀಠಕ್ಕೆ ತಿಳಿಸಿದರು.

‘ಎಮರ್ಜೆನ್ಸಿ ಚಿತ್ರದಲ್ಲಿ ಬದಲಾವಣೆಗೆ ಒಪ್ಪಿಗೆ’

ಮುಂಬೈ (ಪಿಟಿಐ): ‘ಎಮರ್ಜೆನ್ಸಿ’ ಸಿನಿಮಾದಲ್ಲಿ ತರಲು ಸೂಚಿಸಿರುವ ಬದಲಾವಣೆಗಳಿಗೆ ಚಿತ್ರದ ನಿರ್ಮಾಪಕಿ ಕೂಡ ಆಗಿರುವ ನಟಿ ಕಂಗನಾ ರನೌತ್ ಅವರು ಒಪ್ಪಿದ್ದಾರೆ ಎಂದು ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿಯು (ಸಿಬಿಎಫ್‌ಸಿ) ಬಾಂಬೆ ಹೈಕೋರ್ಟ್‌ಗೆ ಸೋಮವಾರ ತಿಳಿಸಿದೆ.

ನ್ಯಾಯಮೂರ್ತಿಗಳಾದ ಬಿ.ಪಿ. ಕೊಲಾಬಾವಾಲಾ ಮತ್ತು ಫಿರ್ದೋಷ್ ಪೂನಿವಾಲಾ ಅವರು ಇರುವ ವಿಭಾಗೀಯ ಪೀಠವು, ‘ಎಮರ್ಜೆನ್ಸಿ’ ಚಿತ್ರದ ಸಹ ನಿರ್ಮಾಪಕ ಸಂಸ್ಥೆ ಜೀ ಎಂಟರ್‌ಟೈನ್‌ಮೆಂಟ್ ಎಂಟರ್‌ಪ್ರೈಸಸ್ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸುತ್ತಿದೆ. ಚಿತ್ರಕ್ಕೆ ಪ್ರಮಾಣಪತ್ರ ನೀಡುವಂತೆ ಸಿಬಿಎಫ್‌ಸಿಗೆ ಸೂಚನೆ ನೀಡಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಈ ಸಿನಿಮಾ ಸೆಪ್ಟೆಂಬರ್ 6ಕ್ಕೆ ಬಿಡುಗಡೆ ಆಗಬೇಕಿತ್ತು. ಆದರೆ ಚಿತ್ರಕ್ಕೆ ಸಿಬಿಎಫ್‌ಸಿ ಕಡೆಯಿಂದ ಪ್ರಮಾಣಪತ್ರ ಸಿಕ್ಕಿಲ್ಲ. ಸಿನಿಮಾ ಬಿಡುಗಡೆ ವಿಳಂಬ ಆಗಲಿ ಎಂಬ ಉದ್ದೇಶದಿಂದ ಸಿಬಿಎಫ್‌ಸಿ ಪ್ರಮಾಣಪತ್ರ ನೀಡುತ್ತಿಲ್ಲ ಎಂದು ಕಂಗನಾ ಅವರು ಆರೋಪಿಸಿದ್ದಾರೆ.

ಸಿಬಿಎಫ್‌ಸಿ ಹೇಳಿರುವ ಬದಲಾವಣೆಗಳು ಸಿನಿಮಾದ ಒಟ್ಟು ಅವಧಿಯನ್ನು ಒಂದು ನಿಮಿಷ ಕೂಡ ಕಡಿಮೆ ಮಾಡುವುದಿಲ್ಲ ಎಂದು ಮಂಡಳಿ ಪರ ವಕೀಲ ಅಭಿನವ್ ಚಂದ್ರಚೂಡ್ ಅವರು ಪೀಠಕ್ಕೆ ತಿಳಿಸಿದರು. ಪ್ರಕರಣದ ವಿಚಾರಣೆಯನ್ನು ಅಕ್ಟೋಬರ್ 3ಕ್ಕೆ ಮುಂದೂಡಲಾಗಿದೆ.



ಕಂಗನಾ ರನೌತ್

ಲಾಡು ವಿವಾದ: ಕಲಬೆರಕೆ ತುಪ್ಪ ಬಳಸಿದ್ದಕ್ಕೆ ಪುರಾವೆ ಇದೆಯೇ?

ನಾಯ್ಡುಗೆ ಸುಪ್ರೀಂ ಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ತಿರುಪತಿ ಲಾಡು ತಯಾರಿಸಲು ಪ್ರಾಣಿಗಳ ಕೊಬ್ಬಿನ ಅಂಶ ಹೊಂದಿದ್ದ ತುಪ್ಪ ಬಳಸಲಾಗಿದೆ ಎಂಬ ಹೇಳಿಕೆಯನ್ನು ಪ್ರಬಲ ಪುರಾವೆಗಳು ಇಲ್ಲದೆಯೇ ನೀಡಿದ್ದಕ್ಕೆ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಎನ್.ಚಂದ್ರಬಾಬು ನಾಯ್ಡು ಅವರನ್ನು ಸುಪ್ರೀಂ ಕೋರ್ಟ್ ಸೋಮವಾರ ತೀವ್ರ ತರಾಟೆಗೆ ತೆಗೆದುಕೊಂಡಿದೆ.

‘ಈ ಪ್ರಕರಣದ ಸಂಬಂಧ ಎಫ್‌ಐಆರ್ ದಾಖಲಿಸುವ ಮತ್ತು ಎಸ್‌ಐಟಿ ತನಿಖೆಗೆ ಆದೇಶಿಸುವ ಮುನ್ನವೇ ಮಾಧ್ಯಮಗಳ ಬಳಿ ಹೋಗಿದ್ದೇಕೆ’ ಎಂದು ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಮತ್ತು ಕೆ.ವಿ. ವಿಶ್ವನಾಥನ್ ಅವರನ್ನೊಳಗೊಂಡ ಪೀಠ ಪ್ರಶ್ನಿಸಿತು.

ತಿರುಪತಿ ಲಾಡು ವಿವಾದದ ಬಗ್ಗೆ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಯಬೇಕೆಂದು ಕೋರಿ ಬಿಜೆಪಿ ಮುಖಂಡ ಸುಬ್ರಮಣ್ಯನ್ ಸ್ವಾಮಿ ಒಳಗೊಂಡಂತೆ ಹಲವರು ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ಪೀಠವು ನಡೆಸಿತು.

‘ತುಪ್ಪ ಕಲಬೆರಕೆಯಾಗಿರುವುದಕ್ಕೆ ಸಂಬಂಧಿಸಿದ ಪ್ರಯೋಗಾಲಯದ ವರದಿ ಸ್ಪಷ್ಟವಾಗಿಲ್ಲ. ಕಳಪೆ ಗುಣಮಟ್ಟದ ಕಾರಣ ತಿರಸ್ಕರಿಸಲಾದ ತುಪ್ಪವನ್ನು ಪರೀಕ್ಷೆಗೆ ಒಳಪಡಿಸಲಾಗಿದೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ. ಈ ಬಗ್ಗೆ ನೀವು ತನಿಖೆಗೆ ಆದೇಶಿಸಿದ್ದೀರಿ. ಅದರ ವರದಿ ಬರುವ ಮುನ್ನವೇ ಈ ವಿಷಯ ಬಹಿರಂಗಪಡಿಸುವ ಅಗತ್ಯವಾದರೂ ಏನಿತ್ತು’ ಎಂದು ಆಂಧ್ರ ಪ್ರದೇಶ ಸರ್ಕಾರದ ಪರ ವಾದ ಮಂಡಿಸಿದ ಹಿರಿಯ ವಕೀಲ ಮುಕುಲ್ ರೋಹಟಗಿ ಅವರನ್ನು ಪ್ರಶ್ನಿಸಿತು.

‘ಲಾಡುಗಳ ತಯಾರಿಕೆಗೆ ಕಲಬೆರಕೆ ತುಪ್ಪ ಬಳಸಿರುವ ಬಗ್ಗೆ ಯಾವುದೇ ಪ್ರಬಲ ಪುರಾವೆಗಳು ಇಲ್ಲದೇ ಇದ್ದರೂ ಸೆಪ್ಟೆಂಬರ್ 18ರಂದು ಮಾಧ್ಯಮಗಳ ಮುಂದೆ ಹೇಳಿಕೆ ನೀಡಿದ್ದೇಕೆ? ಲಾಡು ತಯಾರಿಕೆಗೆ ಐದು ಸಂಸ್ಥೆಗಳು ತುಪ್ಪ ಪೂರೈಸುತ್ತಿದ್ದು, ಒಂದು ಸಂಸ್ಥೆ ಪೂರೈಸಿದ ತುಪ್ಪ ಮಾತ್ರ ಕಲಬೆರಕೆಯಾಗಿರುವುದು ಕಂಡುಬಂದಿದೆ’ ಎಂದು ಹೇಳಿತು.

ರಾಜ್ಯ ಸರ್ಕಾರ ನೇಮಿಸಿರುವ ಎಸ್‌ಐಟಿ ಈ ವಿವಾದದ ಕುರಿತ ತನಿಖೆಯನ್ನು ಮುಂದುವರಿಸಬೇಕೇ ಅಥವಾ ಸ್ವತಂತ್ರ ಸಂಸ್ಥೆಯಿಂದ ತನಿಖೆ ನಡೆಸಬೇಕೇ ಎಂಬುದನ್ನು ನಿರ್ಧರಿಸಲು ನೆರವಾಗುವಂತೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಕೇಳಿಕೊಂಡಿತು.

‘ಇದು ನಂಬಿಕೆಗೆ ಸಂಬಂಧಿಸಿದ ವಿಷಯವಾಗಿದ್ದು, ಲಾಡು ತಯಾರಿಕೆಯಲ್ಲಿ ಕಲಬೆರಕೆ ತುಪ್ಪವನ್ನು ಬಳಸಿದ್ದರೆ ಅದನ್ನು ಒಪ್ಪಲಾಗದು’ ಎಂದು ಮೆಹ್ತಾ, ಪೀಠಕ್ಕೆ ತಿಳಿಸಿದರು. ಮುಂದಿನ ವಿಚಾರಣೆಯನ್ನು ಅಕ್ಟೋಬರ್ 3ಕ್ಕೆ ನಿಗದಿಪಡಿಸಿದೆ.

ರಾಜ್ಯದಲ್ಲಿ ಹಿಂದಿದ್ದ ವೈಎಸ್‌ಆರ್ ಸಿಪಿ ಸರ್ಕಾರವು ತಿರುಪತಿಯ ಪ್ರಸಾದ ತಯಾರಿಕೆಗೆ ಅಗ್ಗದ ಬೆಲೆಯ ಕಲಬೆರಕೆ ತುಪ್ಪ ಖರೀದಿಸುವ ಮೂಲಕ ಟಿಟಿಡಿಯ ಪಾವಿತ್ರ್ಯಕ್ಕೆ ಧಕ್ಕೆ ತಂದಿದೆ ಎಂದು ಚಂದ್ರಬಾಬು ನಾಯ್ಡು ಅವರು ಎನ್‌ಡಿಎ ಶಾಸಕಾಂಗ ಪಕ್ಷದ ಸಭೆಯಲ್ಲಿ ಇತ್ತೀಚೆಗೆ ಆರೋಪ ಮಾಡಿದ್ದರು.

ಅದಕ್ಕೆ ಪೂರಕವಾಗಿ, ಟಿಟಿಡಿಗೆ ಪೂರೈಕೆಯಾಗಿದ್ದ ತುಪ್ಪದಲ್ಲಿ ಹಂದಿ ಮತ್ತು ಇತರ ಪ್ರಾಣಿಗಳ ಕೊಬ್ಬಿನ ಅಂಶ ಪತ್ತೆಯಾಗಿರುವ ಕುರಿತು ಗುಜರಾತ್‌ನ ಎನ್‌ಡಿಡಿಬಿ ಪ್ರಯೋಗಾಲಯದ ವರದಿಯನ್ನು ಟಿಡಿಪಿ ಪ್ರಕಟಿಸಿತ್ತು.

ಪೀಠ ಹೇಳಿದ್ದು...

- ಕನಿಷ್ಠ, ದೇವರನ್ನಾದರೂ ರಾಜಕೀಯದಿಂದ ದೂರವಿಡಬೇಕೆಂದು ನಾವು ನಿರೀಕ್ಷಿಸುತ್ತೇವೆ.
- ಉನ್ನತ ಸಾಂವಿಧಾನಿಕ ಹುದ್ದೆಯಲ್ಲಿರುವ ವ್ಯಕ್ತಿಯೊಬ್ಬರು ಇಂತಹ ಹೇಳಿಕೆ ನೀಡುವುದು ಸೂಕ್ತವಲ್ಲ. ಇದು ಕೋಟ್ಯಂತರ ಜನರ ಭಾವನೆಗಳ ಮೇಲೆ ಪರಿಣಾಮ ಬೀರಬಹುದು.
- ಒಟ್ಟು ಐದು ಸಂಸ್ಥೆಗಳು ತುಪ್ಪ ಪೂರೈಸಿದ್ದು, ಲಾಡು ತಯಾರಿಸಲು ಎಲ್ಲ ಸಂಸ್ಥೆಗಳು ಪೂರೈಕೆ ಮಾಡಿರುವ ತುಪ್ಪವನ್ನು ಮಿಶ್ರಣ ಮಾಡಲಾಗಿದೆಯೇ?



ಸಚಿವ ಬಾಲಾಜಿ ಕೋರ್ಟ್‌ಗೆ ಹಾಜರು

ಚೆನ್ನೈ (ಪಿಟಿಐ): ತಮಿಳುನಾಡು ಸಚಿವ ವಿ. ಸೆಂಥಿಲ್ ಬಾಲಾಜಿ ಅವರು ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಸೆಷನ್ಸ್ ನ್ಯಾಯಾಲಯಕ್ಕೆ ಸೋಮವಾರ ಹಾಜರಾದರು.

ಪ್ರಧಾನ ಸೆಷನ್ಸ್ ನ್ಯಾಯಾಧೀಶ ಎಸ್. ಕಾರ್ತಿಕೇಯನ್ ಅವರು ಪ್ರಕರಣವನ್ನು ಅಕ್ಟೋಬರ್ 4ಕ್ಕೆ ಮುಂದೂಡಿದರು. ಸುಪ್ರೀಂ ಕೋರ್ಟ್ ಜಾಮೀನು ಮಂಜೂರು ಮಾಡಿದ ನಂತರ ಕಳೆದ ವಾರ ಪುಳಲ್ ಜೈಲಿನಿಂದ ಸೆಂಥಿಲ್ ಅವರು ಬಿಡುಗಡೆಯಾಗಿದ್ದರು.

ಪ್ರಕರಣವು ವಿಚಾರಣೆಗೆ ಬಂದಾಗ, ಇ.ಡಿಯು, ಹಣ ಅಕ್ರಮ ವರ್ಗಾವಣೆಯಾದ ಅವಧಿಯಲ್ಲಿ ಕೆಲಸ ಮಾಡಿದ ಬ್ಯಾಂಕ್ ಅಧಿಕಾರಿಗಳ ವಿವರಗಳನ್ನು ಕೋರಿ ಸಚಿವರು ಸಲ್ಲಿಸಿದ್ದ ಅರ್ಜಿಗೆ ಪ್ರತಿ ಪ್ರಮಾಣಪತ್ರ ಸಲ್ಲಿಸಿತು.

ಇ.ಡಿ ಪರ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಎನ್.ರಮೇಶ್, ಸೆಂಥಿಲ್ ಬಾಲಾಜಿ ಸಲ್ಲಿಸಿರುವ ಅರ್ಜಿ ಸೂಕ್ತವಲ್ಲ. ಅರ್ಜಿದಾರರು ವಿಚಾರಣೆಯನ್ನು ಇನ್ನಷ್ಟು ಎಳೆದುಕೊಂಡು ಹೋಗಲು ಪ್ರಯತ್ನಿಸುತ್ತಿದ್ದಾರೆ. ಹಾಗಾಗಿ, ನ್ಯಾಯಾಲಯವು ಅವರ ಅರ್ಜಿಯನ್ನು ವಜಾಗೊಳಿಸಬೇಕು ಎಂದು ಮನವಿ ಮಾಡಿದರು.

‘ಉದ್ಯೋಗಕ್ಕಾಗಿ ಹಣ’ ಹಗರಣದಲ್ಲಿ ಬಾಲಾಜಿ ಅವರನ್ನು 2023ರ ಜೂನ್‌ನಲ್ಲಿ ಬಂಧಿಸಲಾಗಿತ್ತು.

ಅಮಿತ್ ಶಾ–ಖರ್ಗೆ ವಾಕ್ಸಮರ

ಬೆಂಗಳೂರು: ‘ಪ್ರಧಾನಿ ನರೇಂದ್ರ ಮೋದಿ ಅವರನ್ನು ಅಧಿಕಾರದಿಂದ ಕೆಳಗಿಳಿಸುವವರೆಗೂ ನಾನು ಸಾಯುವುದಿಲ್ಲ’ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಭಾನುವಾರ ಜಮ್ಮುವಿನಲ್ಲಿ ನಡೆದ ಪ್ರಚಾರ ಸಭೆಯೊಂದಲ್ಲಿ ಹೇಳಿದ್ದರು. ತಮ್ಮ ಭಾಷಣದ ವೇಳೆ ಅಸ್ವಸ್ಥರಾಗಿದ್ದ ಅವರು, ಚೇತರಿಸಿಕೊಂಡು ಬಳಿಕ ಈ ಮಾತುಗಳನ್ನಾಡಿದ್ದರು. ಖರ್ಗೆ ಅವರು ಈ ಹೇಳಿಕೆಗೆ ಬಿಜೆಪಿಯು ಸೋಮವಾರ ತೀವ್ರ ವಿರೋಧ ವ್ಯಕ್ತಪಡಿಸಿದೆ. ಬಿಜೆಪಿ ವಿರೋಧಕ್ಕೆ ಖರ್ಗೆ ಅವರೂ ಪ್ರತಿಕ್ರಿಯಿಸಿದ್ದಾರೆ


‘ಕೆಟ್ಟ ಅಭಿರುಚಿಯ ಮಾತು’



ಮಲ್ಲಿಕಾರ್ಜುನ ಖರ್ಗೆ ಅವರು ಭಾರಿ ಉತ್ಸಾಹದಿಂದ ಕೆಟ್ಟ ಅಭಿರುಚಿಯ ಹಾಗೂ ಅವಮಾನಕರ ರೀತಿಯ ಮಾತುಗಳನ್ನಾಡಿದ್ದಾರೆ. ಖರ್ಗೆ ಅವರ ಭಾಷಣವು, ಹೀನ ಅಭಿರುಚಿಯ ಭಾಷಣ ಮಾಡುವ ತಮ್ಮ ಪಕ್ಷದ ನಾಯಕರನ್ನು ಅದೇ ಪಕ್ಷದ ಅಧ್ಯಕ್ಷರೇ ಮೀರಿಸಿದಂತಾಗಿದೆ. ತಮ್ಮ ವೈಯಕ್ತಿಕ ಆರೋಗ್ಯದ ವಿಚಾರದಲ್ಲಿ ಅನಗತ್ಯವಾಗಿ ಪ್ರಧಾನಿ ಮೋದಿ ಅವರ ವಿಚಾರವನ್ನು ಪ್ರಸ್ತಾಪಿಸಿರುವುದು, ಖರ್ಗೆ ಅವರೊಳಗಿರುವ ಹಗೆಯನ್ನು ತೋರಿಸುತ್ತದೆ. ಪ್ರಧಾನಿ ಮೋದಿ ಅವರ ಕುರಿತು ಕಾಂಗ್ರೆಸ್‌ನವರಿಗೆ ಎಷ್ಟು ದ್ವೇಷ ಹಾಗೂ ಭಯ ಇದೆ ಎನ್ನುವುದು ಖರ್ಗೆ ಅವರ ಈ ಮಾತುಗಳಿಂದ ತಿಳಿಯುತ್ತದೆ.

ಅಮಿತ್ ಶಾ, ಗೃಹ ಸಚಿವ

‘ಗಂಭೀರ ವಿಚಾರಗಳತ್ತ ಗಮನಹರಿಸಿ’



ಮಣಿಪುರ, ಜನಗಣತಿ ಮತ್ತು ಜಾತಿ ಗಣತಿಯಂಥ ಗಂಭೀರ ವಿಚಾರಗಳ ಬಗ್ಗೆ ಗೃಹ ಸಚಿವ ಅಮಿತ್ ಶಾ ಅವರು ಗಮನ ಹರಿಸಬೇಕು. ನಗರ ಪ್ರದೇಶದ ಪೌರಕಾರ್ಮಿಕರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಒಬಿಸಿಗೆ ಸೇರಿದ ಶೇ 92ರಷ್ಟು ಜನರು ಇದ್ದಾರೆ ಎಂದು ನಿಮ್ಮ ಸರ್ಕಾರವೇ ನಡೆಸಿದ ಸಮೀಕ್ಷೆ ಹೇಳುತ್ತಿದೆ.

ಬಿಜೆಪಿಯು ಜಾತಿ ಗಣತಿಯ ವಿರುದ್ಧ ಇದೆ. ಏಕೆಂದರೆ, ಜಾತಿ ಗಣತಿ ನಡೆಸಿದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಒಬಿಸಿ ಹಾಗೂ ಇಡಬ್ಲ್ಯುಎಸ್ ಅವರು ತಮ್ಮ ಜೀವನ ಸಾಗಿಸುವುದಕ್ಕೆ ಯಾವ ರೀತಿಯ ಉದ್ಯೋಗ ಮಾಡುತ್ತಿದ್ದಾರೆ ಎಂದು ತಿಳಿದುಬಿಡುತ್ತದೆ. ಈ ವರ್ಗದವರ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿ ಏನು? ಇವರಿಗೆ ಸರ್ಕಾರವು ಯಾವೆಲ್ಲಾ ಯೋಜನೆಗಳನ್ನು ಒದಗಿಸಿದೆ ಎಂಬುದೂ ತಿಳಿದುಬಿಡುತ್ತದೆ. ಇದಕ್ಕಾಗಿಯೇ ಬಿಜೆಪಿ ವಿರೋಧಿಸುತ್ತಿದೆ.

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಮೋದಿ ಮೇಲೆ ದ್ವೇಷ

ಅಮಿತ್ ಶಾ ಅವರೆ, ನೀವು ಸರಿಯಾಗಿಯೇ ಹೇಳಿದ್ದೀರಿ. ನರೇಂದ್ರ ಮೋದಿ ಅವರ ಮೇಲೆ ದ್ವೇಷ ಕಾರುವ ಯಾವ ಅವಕಾಶವನ್ನೂ ಕಾಂಗ್ರೆಸ್ ಬಿಟ್ಟುಕೊಡುವುದಿಲ್ಲ. ಖರ್ಗೆ ಅವರ ಭಾಷಣ ಕೂಡ ಇಂಥದ್ದೇ ಒಂದು ಅವಕಾಶ. ಖರ್ಗೆ ಅವರು ಬಹುಕಾಲ ಜೀವಿಸಲಿ ಎಂದು ನಾವೂ ಪ್ರಾರ್ಥಿಸುತ್ತೇವೆ. 2047ರ ವಿಕಸಿತ ಭಾರತವನ್ನು ಅವರು ನೋಡುವಂತಾಗಲಿ

ನಿರ್ಮಲಾ ಸೀತಾರಾಮನ್, ಹಣಕಾಸು ಸಚಿವೆ



8 ಕೋಟಿ ಉದ್ಯೋಗ– ಅರ್ಧ ಸತ್ಯ: ಕಾಂಗ್ರೆಸ್



ಜೈರಾಮ್ ರಮೇಶ್

ನವದೆಹಲಿ (ಪಿಟಿಐ): 2021ರಿಂದ 2024ರವರೆಗೆ 8 ಕೋಟಿ ಉದ್ಯೋಗ ಸೃಷ್ಟಿಸಿರುವುದಾಗಿ ಮತ್ತು 6.2 ಕೋಟಿ ಇಪಿಎಫ್‌ಒ ಬಳಕೆದಾರರು ಇರುವುದಾಗಿ ಕೇಂದ್ರ ಸರ್ಕಾರವು ಹೇಳಿಕೊಂಡಿದೆ. ಅದರೆ ವಾಸ್ತವದಲ್ಲಿ 2014–24ರವರೆಗೆ ‘ಉದ್ಯೋಗನಷ್ಟ ಬೆಳವಣಿಗೆ’ಯನ್ನು ಕಂಡಿದ್ದೇವೆ ಎಂದು ಕಾಂಗ್ರೆಸ್ ಸೋಮವಾರ ವಾಗ್ದಾಳಿ ನಡೆಸಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು,‘ಯು–ಟರ್ನ್ ಮತ್ತು ಹಗರಣ’ಗಳ ಮಧ್ಯೆ ಸರ್ಕಾರ, ಮನುಷ್ಯಾತೀತ ಪ್ರಧಾನಿ ಮತ್ತು ಅವರ ಒಡ್ಡೋಲಗವು 2021-24ರ ಅವಧಿಯಲ್ಲಿ 8 ಕೋಟಿ ಉದ್ಯೋಗ ಸೃಷ್ಟಿಸಿರುವುದಾಗಿ ಹೇಳಿಕೊಂಡು ನೂತನ ಆರ್ಥಿಕ ದಾಖಲೆ ನಿರ್ಮಿಸಲು ಯತ್ನಿಸುತ್ತಿದೆ ಎಂದು ಹರಿಹಾಯ್ದರು.

ಇಪಿಎಫ್‌ಒ ಚಂದಾದಾರಿಕೆ ಮತ್ತು ಉದ್ಯೋಗ ಸೃಷ್ಟಿ ವಿಚಾರದಲ್ಲಿ ಸರ್ಕಾರದ ಹೇಳಿಕೆಗಳು ‘ಅರ್ಧ ಸತ್ಯ’ವಷ್ಟೆ. ಉದ್ಯೋಗ ಸೃಷ್ಟಿ ವಿಚಾರದಲ್ಲಿ ತನ್ನ ವಾಗ್ದಾನವನ್ನು ಸಮರ್ಥಿಸಿಕೊಳ್ಳಲು ಸರ್ಕಾರವು ಉದ್ಯೋಗದ ವ್ಯಾಖ್ಯಾನವನ್ನೇ ಬದಲಾಯಿಸಿದೆ ಎಂದರು.



ಪ್ರವಾಹ

ಬಿಹಾರದ ಸುಪೌಲ್ ಜಿಲ್ಲೆಯ ಪ್ರವಾಹ ಪೀಡಿತ ಪ್ರದೇಶದಲ್ಲಿ ಎನ್‌ಡಿಆರ್‌ಎಫ್ ಸಿಬ್ಬಂದಿ ಮಹಿಳೆಯರು ಮತ್ತು ಮಕ್ಕಳನ್ನು ರಕ್ಷಣೆ ಮಾಡಿದರು – ಪಿಟಿಐ ಚಿತ್ರ

ನಿಧಾನಗತಿಗೆ ‘ಸುಪ್ರೀಂ’ ಅತೃಪ್ತಿ

ನವದೆಹಲಿ (ಪಿಟಿಐ): ವೈದ್ಯಕೀಯ ಸೌಲಭ್ಯಗಳು ಲಭ್ಯವಿರುವ ಕಡೆಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮರಾ ಅಳವಡಿಕೆ, ಪ್ರತ್ಯೇಕ ಶೌಚಾಲಯ ಮತ್ತು ವಿಶ್ರಾಂತಿ ಕೊಠಡಿಗಳನ್ನು ನಿರ್ಮಿಸುವ ವಿಚಾರದಲ್ಲಿ ಪಶ್ಚಿಮ ಬಂಗಾಳ ಸರ್ಕಾರವು ನಿಧಾನಗತಿಯಲ್ಲಿ ಕೆಲಸ ಮಾಡುತ್ತಿದೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ಅತೃಪ್ತಿ ವ್ಯಕ್ತಪಡಿಸಿದೆ. ಈಗ ನಡೆಯುತ್ತಿರುವ ಕೆಲಸಗಳನ್ನು ಅಕ್ಟೋಬರ್ 15ಕ್ಕೆ ಮೊದಲು ಪೂರ್ಣಗೊಳಿಸಬೇಕು ಎಂದು ಅದು ಸರ್ಕಾರಕ್ಕೆ ಸೂಚನೆ ನೀಡಿದೆ.

ಕೋಲ್ಕತ್ತದ ಆರ್.ಜಿ. ಕರ್ ವೈದ್ಯಕೀಯ ಕಾಲೇಜಿನಲ್ಲಿ ನಡೆದ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಹಾಗೂ ಆಕೆಯ ಹತ್ಯೆಗೆ ಸಂಬಂಧಿಸಿದ ಪ್ರಕರಣದ ವಿಚಾರಣೆಯನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ನಡೆಸುತ್ತಿದೆ. ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರೂ ಈ ಪೀಠದಲ್ಲಿದ್ದಾರೆ.

ಹತ್ಯೆಗೀಡಾದ ವಿದ್ಯಾರ್ಥಿನಿಯ ಭಾವಚಿತ್ರ ಮತ್ತು ಆಕೆಯ ಹೆಸರನ್ನು ಸಾಮಾಜಿಕ ಜಾಲತಾಣಗಳಲ್ಲಿ ಮತ್ತೆ ಮತ್ತೆ ಹಂಚಿಕೊಳ್ಳುತ್ತಿರುವುದನ್ನು ಕಂಡು ಆಕೆಯ ತಂದೆ–ತಾಯಿ ವಿಚಲಿತರಾಗಿದ್ದಾರೆ ಎಂದು ವಕೀಲೆ ವೃಂದಾ ಗ್ರೋವರ್ ಅವರು ಪೀಠಕ್ಕೆ ತಿಳಿಸಿದರು.

ಈ ವಿಚಾರವಾಗಿ ಈಗಾಗಲೇ ಆದೇಶವೊಂದನ್ನು ಹೊರಡಿಸಲಾಗಿದೆ, ಕಾನೂನು ಜಾರಿ ಸಂಸ್ಥೆಗಳು ಅದನ್ನು ಅನುಷ್ಠಾನಕ್ಕೆ ತರಬೇಕು ಎಂದು ಪೀಠವು ಸ್ಪಷ್ಟಪಡಿಸಿತು. ಹಣಕಾಸಿನ ಅಕ್ರಮಗಳನ್ನು ನಡೆಸಿದ ಆರೋಪ ಎದುರಿಸುತ್ತಿದ್ದರೂ ಈಗಲೂ ಆರ್.ಜಿ. ಕರ್ ಆಸ್ಪತ್ರೆಯ ನೌಕರರಾಗಿ ಮುಂದುವರಿದಿರುವವರು ಯಾರು ಎಂಬ ಮಾಹಿತಿಯನ್ನು ಬಯಸಿತು. ಅಂಥವರ ಹೆಸರನ್ನು ಸೂಕ್ತ ಕ್ರಮಕ್ಕಾಗಿ ರಾಜ್ಯ ಸರ್ಕಾರದ ಜೊತೆ ಹಂಚಿಕೊಳ್ಳಬೇಕು ಎಂದು ಸಾಲಿಸಿಟರ್ ಜನರಲ್‌ಗೆ ಸೂಚಿಸಿತು. ವಿಚಾರಣೆಯನ್ನು ಅಕ್ಟೋಬರ್ 14ಕ್ಕೆ ಮುಂದೂಡಿದೆ.

ಇನ್ನಷ್ಟು ಜನ ಭಾಗಿ: ಕೋರ್ಟ್

ನವದೆಹಲಿ: ವೈದ್ಯಕೀಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ, ಆಕೆಯ ಹತ್ಯೆ ಪ್ರಕರಣದಲ್ಲಿ ಹಾಗೂ ಅಲ್ಲಿ ನಡೆದಿರುವ ಹಣಕಾಸಿನ ಅಕ್ರಮಗಳಲ್ಲಿ ಇನ್ನಷ್ಟು ಜನ ಭಾಗಿಯಾಗಿರುವುದನ್ನು ಸಿಬಿಐ ತನಿಖೆ ತೋರಿಸಿಕೊಟ್ಟಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಸಿಬಿಐ ತನಿಖೆಯಲ್ಲಿ ಗಮನಾರ್ಹ ಮುನ್ನಡೆ ಕಂಡುಬಂದಿದೆ ಎಂದು ಅದು ಹೇಳಿದೆ.

ಸಿಬಿಐ ತನಿಖೆ ಎದುರಿಸುತ್ತಿರುವ ಏಳು ಮಂದಿ ಈಗಲೂ ಆರ್.ಜಿ. ಕರ್ ಆಸ್ಪತ್ರೆ ಯಲ್ಲಿ ನೌಕರಿಯಲ್ಲಿ ಇದ್ದಾರೆ ಎಂಬ ಮಾಹಿತಿಯನ್ನು ಪೀಠಕ್ಕೆ ನೀಡಲಾಯಿತು. ತನಿಖೆ ಪೂರ್ಣಗೊಳ್ಳುವವರೆಗೆ ಅವರನ್ನು ಅಮಾನತಿನಲ್ಲಿ ಇರಿಸಬೇಕು ಎಂದು ವೈದ್ಯರ ಸಂಘಟನೆಯೊಂದನ್ನು ಪ್ರತಿನಿಧಿಸುತ್ತಿರುವ ಹಿರಿಯ ವಕೀಲರಾದ ಇಂದಿರಾ ಜೈಸಿಂಗ್ ಮತ್ತು ಕರುಣಾ ನಂದಿ ಅವರು ಪೀಠವನ್ನು ಕೋರಿದರು.

ವೈದ್ಯ ವಿದ್ಯಾರ್ಥಿನಿಯು ಕನ್ನಡಕ ಧರಿಸಿದ್ದುದು ಆಕೆಯ ಮೇಲೆ ಗಾಯಗಳು ಹೆಚ್ಚಾಗಲು ಕಾರಣವಾಯಿತೇ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಪ್ರಶ್ನಿಸಿತು. ಆ ಸಂದರ್ಭದಲ್ಲಿ ಆಕೆ ಕನ್ನಡಕ ಧರಿಸಿದ್ದುದು ಹೇಗೆ, ಆಕೆ ನಿದ್ರಿಸುತ್ತಿದ್ದಾಗ ದಾಳಿ ನಡೆಯಿತೇ ಎಂದೂ ಕೇಳಿತು.

ಆಕೆ ಕನ್ನಡಕ ಧರಿಸಿರಲಿಲ್ಲ, ಕನ್ನಡ ಒಡೆದಿತ್ತು. ಅದು ಆಕೆಯ ಪಕ್ಕದಲ್ಲಿ ಸಿಕ್ಕಿದೆ ಎಂದು ಮೆಹ್ತಾ ತಿಳಿಸಿದರು. ‘ಕೆಲವರು ಅಪರಾಧ ನಡೆದ ಸ್ಥಳದಲ್ಲಿ ಇದ್ದವರ ಕೆಲವು ಹೆಸರುಗಳನ್ನು ನೀಡುತ್ತೇನೆ. ಅವರು ಅಂದು ಕರ್ತವ್ಯದಲ್ಲಿ ಇದ್ದವರಲ್ಲ, ಅವರಿಗೂ ಕಾಲೇಜಿಗೂ ಸಂಬಂಧ ಇಲ್ಲ. ಆದರೆ ಅವು ಪೊಲೀಸರು ಅಲ್ಲಿಗೆ ಬರುವ ಮೊದಲೇ ತಲುಪಿದ್ದರು’ ಎಂದು ಇಂದಿರಾ ತಿಳಿಸಿದರು.

‘ಹಿಂದುತ್ವ ವಾಚ್’ಗೆ ತಡೆ ತಪ್ಪು: ಎಕ್ಸ್

ನವದೆಹಲಿ (ಪಿಟಿಐ): ನಿಂದನಾತ್ಮಕ ಎನ್ನಲಾದ ಕೆಲವು ಪೋಸ್ಟ್‌ಗಳನ್ನು ಆಧಾರವಾಗಿ ಇಟ್ಟುಕೊಂಡು, ‘ಹಿಂದುತ್ವ ವಾಚ್’ನ ಸಾಮಾಜಿಕ ಜಾಲತಾಣ ಖಾತೆಯನ್ನು ಸಂಪೂರ್ಣವಾಗಿ ತಡೆಹಿಡಿಯಲು ಕೇಂದ್ರ ಸರ್ಕಾರ ತೀರ್ಮಾನಿಸಿರುವುದು ‘ಬಹಳ ತೀವ್ರವಾದ’ ಕ್ರಮ ಎಂದು ‘ಎಕ್ಸ್’ ಹೇಳಿದೆ. ಕೇಂದ್ರದ ತೀರ್ಮಾನವು ಕಾನೂನಿಗೆ ವಿರುದ್ಧ ಕೂಡ ಹೌದು ಎಂದು ಕಂಪನಿಯು ದೆಹಲಿ ಹೈಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಹೇಳಿದೆ. ‘ಹಿಂದುತ್ವ ವಾಚ್’ನ ಸಾಮಾಜಿಕ ಜಾಲತಾಣ ಖಾತೆಯನ್ನು ತಡೆಹಿಡಿಯಲು ಕೇಂದ್ರ ಸರ್ಕಾರ ಹೊರಡಿಸಿದ ಆದೇಶದಲ್ಲಿ ಕಾರಣಗಳನ್ನು ದಾಖಲಿಸಿಲ್ಲ ಎಂದು ಕೂಡ ಎಕ್ಸ್ ಹೇಳಿದೆ.

ಕೇಂದ್ರ ಸರ್ಕಾರವು ಅಗತ್ಯ ಮಾಹಿತಿಯನ್ನು ‘ಹಿಂದುತ್ವ ವಾಚ್’ಗೆ ತಿಳಿಸದೆ ಇರುವುದರಿಂದಾಗಿ, ಸಂಬಂಧಪಟ್ಟವರಿಗೆ ತಮ್ಮ ವಾದ ಮಂಡಿಸಲು ಅವಕಾಶ ಇರಬೇಕು ಎಂಬ ಮಾತು ಅರ್ಥಹೀನವಾಗಿದೆ. ‘ಹಿಂದುತ್ವ ವಾಚ್’ಗೆ ತನ್ನ ವಿರುದ್ಧ ಇರುವ ಪುರಾವೆಗಳು ಏನು ಎಂಬುದು ಗೊತ್ತಿಲ್ಲ, ಅದಕ್ಕೆ ಆ ಪುರಾವೆಗಳನ್ನು ಸಮರ್ಪಕವಾಗಿ ಅಲ್ಲಗಳೆಯಲು ಸಾಧ್ಯವಾಗುತ್ತಿಲ್ಲ ಎಂದು ಕೂಡ ಎಕ್ಸ್ ಹೇಳಿದೆ.

40 ವಿಧಾನಸಭಾ ಕ್ಷೇತ್ರಗಳ 415 ಅಭ್ಯರ್ಥಿಗಳ ಭವಿಷ್ಯ ನಿರ್ಧಾರ

ಜಮ್ಮು–ಕಾಶ್ಮೀರ: 3ನೇ ಹಂತದ ಮತದಾನ ಇಂದು

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿ ಮಂಗಳವಾರ ಮೂರನೇ ಮತ್ತು ಕೊನೆಯ ಹಂತದ ಮತದಾನ ನಡೆಯಲಿದ್ದು, ಕೇಂದ್ರಾಡಳಿತ ಪ್ರದೇಶದ ಏಳು ಜಿಲ್ಲೆಗಳಲ್ಲಿ 20,000 ಚುನಾವಣಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೊನೆಯ ಹಂತದ ಚುನಾವಣೆಯು ಇಬ್ಬರು ಮಾಜಿ ಉಪ ಮುಖ್ಯಮಂತ್ರಿಗಳು ಸೇರಿ 415 ಅಭ್ಯರ್ಥಿಗಳ ಭವಿಷ್ಯವನ್ನು ನಿರ್ಧರಿಸಲಿದೆ.

ನಿರ್ಣಾಯಕ ಹಂತವು 40 ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದ್ದು, 5,060 ಮತಗಟ್ಟೆಗಳಲ್ಲಿ 39.18 ಲಕ್ಷ ಮತದಾರರಿದ್ದಾರೆ.

ಸಂವಿಧಾನದ 370ನೇ ವಿಧಿಯಡಿಯಲ್ಲಿ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದು ಮಾಡಿದ ನಂತರ ಪಾಕಿಸ್ತಾನದ ನಿರಾಶ್ರಿತರು, ವಾಲ್ಮೀಕಿ ಸಮಾಜ ಮತ್ತು ಗೋರ್ಖಾ ಸಮುದಾಯವು ವಿಧಾನಸಭೆ, ನಗರ ಸಭೆ ಮತ್ತು ಗ್ರಾಮಪಂಚಾಯಿತಿ ಚುನಾವಣೆಗಳಲ್ಲಿ ಮತದಾನ ಮಾಡುವ ಹಕ್ಕು ಪಡೆದಿದೆ. ಹೀಗಾಗಿ ಈ ಚುನಾವಣೆಯು ಮಹತ್ವ ಪಡೆದಿದೆ.

ಚುನಾವಣೆ ನಡೆಯುವ ಪ್ರದೇಶಗಳಲ್ಲಿ ಹೆಚ್ಚುವರಿ ಭದ್ರತಾ ಕ್ರಮವನ್ನು ಕೈಗೊಳ್ಳಲಾಗಿದೆ ಎಂದು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಆನಂದ್ ಜೈನ್ ತಿಳಿಸಿದ್ದಾರೆ.

50 ಮತಗಟ್ಟೆಗಳನ್ನು ಮಹಿಳೆಯರು, 43 ಮತಗಟ್ಟೆಗಳನ್ನು ಅಂಗವಿಕಲರು ಮತ್ತು 40 ಮತಗಟ್ಟೆಗಳನ್ನು ಯುವಜನರು ನಿರ್ವಹಿಸಲಿದ್ದಾರೆ ಎಂದು ಜಮ್ಮು–ಕಾಶ್ಮೀರದ ಮುಖ್ಯ ಚುನಾವಣಾಧಿಕಾರಿ ಪಾಂಡುರಂಗ ಕೆ. ಪೋಲೆ ಅವರು ತಿಳಿಸಿದ್ದಾರೆ.



ಮೂರನೇ ಹಂತದ ಮತದಾನಕ್ಕಾಗಿ ಚುನಾವಣಾ ಅಧಿಕಾರಿಗಳು ಮತಗಟ್ಟೆಯತ್ತ ತೆರಳಿದರು –ಪಿಟಿಐ ಚಿತ್ರ

ಪ್ರಜಾ ಮತ
ಜನತಂತ್ರದ ಹಬ್ಬ

ಪ್ರಮುಖ ಅಂಶಗಳು	
ಒಟ್ಟು ಮತದಾರರು	39,18,220
ಮಹಿಳಾ ಮತದಾರರು	19,09,130
ಪುರುಷ ಮತದಾರರು	20,09,033
ಲೈಂಗಿಕ ಅಲ್ಪಸಂಖ್ಯಾತರು	57

ಸಂವಿಧಾನ ಬದಲಾಯಿಸುವವರನ್ನು ಬದಲಾಯಿಸಿ: ಪ್ರಿಯಾಂಕಾ



ಪ್ರಿಯಾಂಕಾ ಗಾಂಧಿ

ಅಂಬಾಲಾ (ಪಿಟಿಐ): ಸಂವಿಧಾನವನ್ನು ‘ಬದಲಾಯಿಸುವ’ ಮಾತನಾಡುವವರು ಮತ್ತು ಪ್ರತಿ ಹಂತದಲ್ಲೂ ಅವಮಾನಿಸುವವರನ್ನು (ಬಿಜೆಪಿ ಸರ್ಕಾರ) ಹರಿಯಾಣ ರಾಜ್ಯದ ಜನರು ಬದಲಾಯಿಸಬೇಕು ಎಂದು ಕಾಂಗ್ರೆಸ್ ನಾಯಕಿ ಪ್ರಿಯಂಕಾ ಗಾಂಧಿ ವಾದ್ರಾ ಕರೆ ನೀಡಿದರು.

ರಾಜ್ಯದಲ್ಲಿ ತಮ್ಮ ಮೊದಲ ಚುನಾವಣಾ ರ‍್ಯಾಲಿ ಉದ್ದೇಶಿಸಿ ಮಾತನಾಡಿದ ಅವರು, ‘ಹರಿಯಾಣ ರಾಜ್ಯದ ಜನರು ಯಾವಾಗಲೂ ದೇಶವನ್ನು ರಕ್ಷಿಸುತ್ತಾರೆ. ರೈತರು, ಸೈನಿಕರು, ಕ್ರೀಡಾಪಟುಗಳು ದೇಶದ ಘನತೆಯನ್ನು ಕಾಪಾಡಿದ್ದಾರೆ’ ಎಂದು ಹೇಳಿದರು.

‘ಕಳೆದ ಹತ್ತು ವರ್ಷಗಳಿಂದ ಬಿಜೆಪಿಯು ಆಡಳಿತ ನಡೆಸುತ್ತಿದೆ. ಇದಕ್ಕೆ ಪ್ರತಿಯಾಗಿ ಅದು ನಿಮಗೇನು ನೀಡಿದೆ? ಪ್ರತಿ ಹಂತದಲ್ಲೂ ನಿಮ್ಮನ್ನು ಅವಮಾನಿಸಿದೆ’ ಎಂದು ಆರೋಪಿಸಿದರು.

‘ಇಲ್ಲಿ ನಿರುದ್ಯೋಗ ಇದೆ. ನಿಮ್ಮಲ್ಲಿ ಎಷ್ಟು ಜನರಿಗೆ ಉದ್ಯೋಗ ಇದೆ’ ಎಂದು ಪ್ರಶ್ನಿಸಿದರು. ರೈತರ ಪ್ರತಿಭಟನೆ ವಿಚಾರವಾಗಿ ಬಿಜೆಪಿ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅವರು, ‘ಅವರ ವಿರುದ್ಧ ಪ್ರತಿಭಟನೆ ನಡೆಸಿದ್ದಕ್ಕಾಗಿ ನಿಮ್ಮ ಮೇಲೆ ಲಾಠಿ ಮತ್ತು ಅಶ್ರುವಾಯು ಷೆಲ್ ಪ್ರಯೋಗವಾಯಿತು’ ಎಂದು ಹೇಳಿದರು. ‘ಸರ್ಕಾರವು ನಿಮಗಾಗಿ ಏನನ್ನೂ ಮಾಡಿಲ್ಲ. ಎಲ್ಲಿ ನೋಡಿದರೂ ಹಗರಣವೇ ನಡೆಯುತ್ತಿದೆ. ಹೀಗಾದರೆ ನಿಮ್ಮ ಭವಿಷ್ಯದ ಕತೆ ಏನು’ ಎಂದು ಕೇಳಿದರು. ‘ನ್ಯಾಯ ಬೇಕಾದಲ್ಲಿ ಈ ಸರ್ಕಾರವನ್ನು ಕಿತ್ತೊಗೆಯಿರಿ. ಸಂವಿಧಾನವು ನಿಮಗೆ ಗೌರವ, ಹಕ್ಕುಗಳನ್ನು ನೀಡಿದೆ. ಹೀಗಾಗಿ ಸಂವಿಧಾನ ಬದಲಾಯಿಸುವ ಮಾತನಾಡುವವರನ್ನು ನೀವು ಬದಲಾಯಿಸಬೇಕು’ ಎಂದು ಕೇಳಿಕೊಂಡರು.

ಎರಡನೇ ಟೆಸ್ಟ್ • ಬ್ಯಾಟರ್‌ಗಳ ಅಬ್ಬರದ ಆಟ • ಜೈಸ್ವಾಲ್, ರಾಹುಲ್ ಅರ್ಧಶತಕ • ಒತ್ತಡದಲ್ಲಿ ಬಾಂಗ್ಲಾದೇಶ ತಂಡ

ಜಯಕ್ಕೆ ವೇದಿಕೆ ಸಿದ್ಧಪಡಿಸಿದ ಭಾರತ



ಬಿರುಸಿನ ಆಟವಾಡಿ ಅರ್ಧಶತಕ ಗಳಿಸಿದ ಯಶಸ್ವಿ ಜೈಸ್ವಾಲ್ —ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ಕಾನ್ಪುರ: ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯದ ಸತತ ಎರಡು ದಿನಗಳ ಆಟ ರದ್ದುಗೊಂಡ ಮೇಲೆ ಭಾರತ ಗೆಲುವಿನ ಉಮೇದು ಉಳಿಸಿಕೊಳ್ಳುವ ಬಗ್ಗೆ ಅನುಮಾನ ಮೂಡಿತ್ತು. ಮೊದಲ ದಿನ ಸಾಧ್ಯವಾಗಿದ್ದು 35 ಓವರುಗಳ ಆಟ. ತವರಿನ ಪಂದ್ಯಗಳಲ್ಲಿ ಭಾರತ ಪ್ರಾಬಲ್ಯ ಮೆರೆದರೂ, ಎರಡು ದಿನಗಳಷ್ಟೇ ಉಳಿದಿದ್ದು, ಫಲಿತಾಂಶ ಕ್ಷೀಣವೆಂದೇ ಭಾವಿಸಲಾಗಿತ್ತು.

ಗ್ರೀನ್‌ಪಾರ್ಕ್ ಕ್ರೀಡಾಂಗಣದ ಪಿಚ್ ಬ್ಯಾಟಿಂಗ್‌ಗೆ ಇನ್ನೂ ಉತ್ತಮವಾಗಿಯೇ ಇತ್ತು. ಬಾಂಗ್ಲಾದೇಶ 3 ವಿಕೆಟ್‌ಗೆ 107 ರನ್ ಗಳಿಸಿ ಆಟ ಮುಂದುವರಿಸಿತು ಕೂಡ. ಆದರೆ ನಾಲ್ಕನೇ ದಿನ ಭಾರತ ತಂಡ ಯಾರೂ ನಿರೀಕ್ಷಿಸದ ಹಾಗೆ ಆಕ್ರಮಣಕಾರಿ ಆಟವಾಡಿ ಬಾಂಗ್ಲಾದೇಶವನ್ನು ಇಕ್ಕಟ್ಟಿಗೆ ಸಿಲುಕಿಸಿತು. ದೂರವಾದಂತೆ ಕಂಡಿದ್ದ ಫಲಿತಾಂಶದ ಸಾಧ್ಯತೆ ಈಗ ದಟ್ಟವಾಗಿದೆ.

ಮೊದಲು ಬೌಲರ್‌ಗಳು ಅಮೋಘ ಪ್ರದರ್ಶನ ನೀಡಿ ಬಾಂಗ್ಲಾದೇಶವನ್ನು 75 ಓವರುಗಳ ಒಳಗೆ 233 ರನ್‌ಗಳಿಗೆ ಉರುಳಿಸಿದರು. ಭೋಜನ ವಿರಾಮ ಕಳೆದು ಒಂದು ಗಂಟೆಯ ನಂತರ ಭಾರತ ಎರಡನೇ ಇನಿಂಗ್ಸ್‌ಗೆ ಸಜ್ಜಾಯಿತು. ವೇಗಿಗಳಾದ ಜಸ್‌ಪ್ರೀತ್ ಬೂಮ್ರಾ (50ಕ್ಕೆ3) ಮತ್ತು ಮೊಹಮ್ಮದ್ ಸಿರಾಜ್ (57ಕ್ಕೆ2) ಅವರು ಚೆಂಡಿನಲ್ಲಿ ಕರಾಮತ್ತು ಪ್ರದರ್ಶಿಸಿದರು. ಫೀಲ್ಡಿಂಗ್ ಕೂಡ ಮೆಚ್ಚುವಂತಿತ್ತು. ರೋಹಿತ್ ಶರ್ಮಾ ಮತ್ತು ಸಿರಾಜ್ ಹಿಡಿದ ಕ್ಯಾಚ್‌ಗಳು ಇದಕ್ಕೆ ನಿದರ್ಶನ. ಬಾಂಗ್ಲಾದೇಶ ನಿರೀಕ್ಷೆಗಿಂತ ಬೇಗ ಆಲೌಟ್ ಆಯಿತು. ಇದರ ನಡುವೆಯೂ ಬೆಳ್ಳಿ ರೇಖೆಯಂತೆ ಮೊಮಿನುಲ್ ಹಕ್ (ಔಟಾಗದೇ 107) ಮಾತ್ರ ಸ್ಫೂರ್ತಿಯುತ ಪ್ರದರ್ಶನ ನೀಡಿ ಶತಕ ಬಾರಿಸಿದರು. ಜಡೇಜ ಒಂದು ವಿಕೆಟ್ ಪಡೆದು 300ರ ಮೈಲಿಗಲ್ಲು ತಲುಪಿದರು.

ನಂತರ ಭಾರತದ ಬ್ಯಾಟರ್‌ಗಳದ್ದೇ ಅಬ್ಬರ, ಪ್ರವಾಸಿ ತಂಡವನ್ನು ಕಕ್ಕಾಬಿಕ್ಕಿಗೊಳಿಸಿತು. ಟಿ20 ಇನಿಂಗ್ಸ್ ರೀತಿ ಆಟಗಾರರು ಆಕ್ರಮಣಕ್ಕಿಳಿದರು. ಪಂದ್ಯ ಗೆದ್ದು ಟೆಸ್ಟ್ ಚಾಂಪಿಯನ್‌ಷಿಪ್ ಪಟ್ಟಿಯಲ್ಲಿ ತನ್ನ ಸ್ಥಾನ ಇನ್ನಷ್ಟು ಬಲಪಡಿಸಿಕೊಳ್ಳುವ ಇರಾದೆಯಿಂದ ಭಾರತ ಆಡಿದಂತೆ ಇತ್ತು.

ಯಶಸ್ವಿ ಜೈಸ್ವಾಲ್ (72, 51ಎ, 4x12, 6x2) ಮತ್ತು ಕೆ.ಎಲ್.ರಾಹುಲ್ (68, 43ಎ, 4x7, 6x2) ಮಿಂಚಿನ ಅರ್ಧ ಶತಕಗಳನ್ನು ಬಾರಿಸಿದರು. ರೋಹಿತ್ ಶರ್ಮಾ (23), ಶುಭಮನ್ ಗಿಲ್ (39) ಮತ್ತು ವಿರಾಟ್ ಕೊಹ್ಲಿ (47) ಅವರೂ ಆಕ್ರಮಣಕಾರಿ ಆಟದ ಲಹರಿಯಲ್ಲಿದ್ದು ಭಾರತದ ಸಾಂಘಿಕ ಪ್ರದರ್ಶನಕ್ಕೆ ಅಡಿಗೆರೆ ಎಳೆಯಿತು. ಭಾರತ ಬರೇ 34.4 ಓವರುಗಳಲ್ಲಿ 9 ವಿಕೆಟ್‌ಗೆ 285 ರನ್ ಗಳಿಸಿ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು. ಆಗ 45 ನಿಮಿಷಗಳ ಆಟ ಉಳಿದಿತ್ತು.

ಫಲಿತಾಂಶಕ್ಕೆ ತಂಡವೊಂದು ಎರಡನೇ ಇನಿಂಗ್ಸ್‌ನಲ್ಲಿ ವೇಗದ ಆಟವಾಡುವುದು ಮಾಮೂಲು. ಆದರೆ ಫಲಿತಾಂಶ ಪಡೆಯಲು ಮೊದಲ ಇನಿಂಗ್ಸ್‌ನಲ್ಲೇ ಬಿರುಸಿನ ಆಟಕ್ಕಿಳಿದು ಓವರಿನಲ್ಲಿ ಎಂಟು ರನ್‌ಗೂ ಹೆಚ್ಚು ವೇಗದಲ್ಲಿ ಆಡುವುದು ಅತ್ಯಪರೂಪ.

ಜೈಸ್ವಾಲ್ ಮತ್ತು ರೋಹಿತ್ ಅವರಿಂದ ಶುರುವಾದ ಆಕ್ರಮಣದ ಆಟವನ್ನು ಉಳಿದವರು ಎಗ್ಗಿಲ್ಲದೇ ಮುಂದುವರಿಸಿದ್ದು ಎದ್ದುಕಂಡಿತು. ಏಳನೇ ಕ್ರಮಾಂಕದಲ್ಲಿ ಆಡಿದ ಆಕಾಶ್ ದೀಪ್ ಎರಡು ಭರ್ಜರಿ ಸಿಕ್ಸರ್‌ಗಳನ್ನು ಬಾರಿಸಿದ್ದು ಗಮನಾರ್ಹ. ಜೈಸ್ವಾಲ್, ಮೊದಲ ಓವರ್‌ನಲ್ಲೇ– ಹಸನ್ ಮಹಮುದ್ ಬೌಲಿಂಗ್‌ನಲ್ಲಿ ಸತತ ಮೂರು ಬೌಂಡರಿಗಳನ್ನು ಹೊಡೆದರು. ಸ್ಪಿನ್ನರ್‌ಗಳನ್ನು ದಂಡಿಸುವ ರೀತಿಯಲ್ಲೇ ರೋಹಿತ್ ವೇಗದ ಬೌಲರ್‌ಗಳನ್ನೂ ಆಡಿದರು. ಖಾಲಿದ್ ಅಹ್ಮದ್ ಬೌಲಿಂಗ್‌ನಲ್ಲಿ ಅವರು ಎರಡು ಸತತ ಭರ್ಜರಿ ಸಿಕ್ಸರ್‌ಗಳನ್ನು ಎತ್ತಿದರು.

ಭಾರತ ದಾಖಲೆ ವೇಗದಲ್ಲಿ 50, 100, 150, 200 ಮತ್ತು 250 ರನ್‌ಗಳನ್ನು ದಾಟಿತು. ಈ ಸುಂಟರಗಾಳಿಯ ಆಟಕ್ಕೆ ತತ್ತರಿಸಿದ ಬಾಂಗ್ಲಾದೇಶ ಆರು ಮಂದಿ ಫೀಲ್ಡರ್‌ಗಳನ್ನು ಸೀಮಾರೇಖೆಯಲ್ಲಿ ನಿಯೋಜಿಸಬೇಕಾಯಿತು.

ಬಾಂಗ್ಲಾದೇಶ ಎರಡನೇ ಇನಿಂಗ್ಸ್‌ನಲ್ಲಿ 2 ವಿಕೆಟ್‌ಗೆ 26 ರನ್ ಗಳಿಸಿದೆ. ಭಾರತ 26 ರನ್ ಮುಂದಿದ್ದು, 2–0 ಸರಣಿ ಗೆಲುವಿನ ಸುವಾಸನೆ ಕಾಣುತ್ತಿದೆ.



ಶತಕದ ಖುಷಿಯಲ್ಲಿ ಮೊಮಿನುಲ್ ಹಕ್ ಪಿಟಿಐ ಚಿತ್ರ

ಟೆಸ್ಟ್: ತಂಡವೊಂದರ ವೇಗದ 50 ರನ್

ತಂಡ	ಓವರ್	ಎದುರಾಳಿ	ವರ್ಷ
ಭಾರತ	3.0	ಬಾಂಗ್ಲಾದೇಶ	2024
ಇಂಗ್ಲೆಂಡ್	4.2	ವೆಸ್ಟ್‌ಇಂಡೀಸ್	2024
ಇಂಗ್ಲೆಂಡ್	4.3	ದಕ್ಷಿಣ ಆಫ್ರಿಕಾ	1994
ಇಂಗ್ಲೆಂಡ್	4.6	ಶ್ರೀಲಂಕಾ	2002
ಶ್ರೀಲಂಕಾ	5.2	ಪಾಕಿಸ್ತಾನ	2004

ಟೆಸ್ಟ್: ತಂಡವೊಂದರ ವೇಗದ 100 ರನ್

ತಂಡ	ಓವರ್	ಎದುರಾಳಿ	ವರ್ಷ
ಭಾರತ	10.1	ಬಾಂಗ್ಲಾದೇಶ	2024
ಭಾರತ	12.2	ವೆಸ್ಟ್‌ಇಂಡೀಸ್	2023
ಶ್ರೀಲಂಕಾ	13.1	ಬಾಂಗ್ಲಾದೇಶ	2001
ಬಾಂಗ್ಲಾದೇಶ	13.4	ವೆಸ್ಟ್‌ಇಂಡೀಸ್	2012
ಇಂಗ್ಲೆಂಡ್	13.4	ಪಾಕಿಸ್ತಾನ	2022

ಟೆಸ್ಟ್: ಭಾರತೀಯರ ವೇಗದ ಅರ್ಧಶತಕ

ಆಟಗಾರ	ಎಸೆತ	ಎದುರಾಳಿ	ವರ್ಷ
ರಿಷಭ್ ಪಂತ್	28	ಶ್ರೀಲಂಕಾ	2022
ಕಪಿಲ್ ದೇವ್	30	ಪಾಕಿಸ್ತಾನ	1982
ಶಾರ್ದೂಲ್ ಠಾಕೂರ್	31	ಇಂಗ್ಲೆಂಡ್	2021
ಯಶಸ್ವಿ ಜೈಸ್ವಾಲ್	31	ಬಾಂಗ್ಲಾದೇಶ	2024
ವೀರೇಂದ್ರ ಸೆಹ್ವಾಗ್	32	ಇಂಗ್ಲೆಂಡ್	2008

ಟೆಸ್ಟ್: 300ಕ್ಕೂ ಅಧಿಕ ವಿಕೆಟ್ ಪಡೆದ ಭಾರತೀಯರು

ಬೌಲರ್‌ಗಳು	ಪಂದ್ಯ	ಪಡೆದ ವಿಕೆಟ್
ಅನಿಲ್ ಕುಂಬ್ಳೆ	132	619
ಆರ್.ಅಶ್ವಿನ್	102*	524
ಕಪಿಲ್ ದೇವ್	131	434
ಹರಭಜನ್ ಸಿಂಗ್	103	417
ಇಶಾಂತ್ ಶರ್ಮಾ	105	311
ಜಹೀರ್ ಖಾನ್	92	311
ರವೀಂದ್ರ ಜಡೇಜ	74*	300

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಬಾಂಗ್ಲಾದೇಶ 233 (74.2 ಓವರ್‌ಗಳಲ್ಲಿ) (ಶುಕ್ರವಾರ 35 ಓವರ್‌ಗಳಲ್ಲಿ 3ಕ್ಕೆ 107)

ಮೊನಿಮಲ್ ಹಕ್ ಔಟಾಗದೇ 107 (194ಎ, 4x17, 6x1)
ಮುಷ್ಫೀಕುರ್ ಬಿ ಬೂಮ್ರಾ 11 (32ಎ, 4x2)
ಲಿಟನ್ ಸಿ ಶರ್ಮಾ ಬಿ ಸಿರಾಜ್ 13 (30ಎ, 4x3)
ಶಕೀಬ್ ಸಿ ಸಿರಾಜ್ ಬಿ ಅಶ್ವಿನ್ 9 (17ಎ, 4x2)
ಮೆಹಿದಿ ಸಿ ಶುಭಮನ್ ಬಿ ಬೂಮ್ರಾ 20 (42ಎ, 4x4)
ತೈಜುಲ್ ಬಿ ಬೂಮ್ರಾ 5 (8ಎ, 4x1)
ಹಸನ್ ಎಲ್‌ಬಿಡಬ್ಲ್ಯು ಸಿರಾಜ್ 1 (4ಎ)
ಖಲೀದ್ ಸಿ ಅಂಡ್ ಬಿ ಜಡೇಜ 0 (4ಎ)
ಇತರೆ: 12 (ಬೈ 4, ಲೆಗ್‌ಬೈ 6, ನೋಬಾಲ್ 2)
ವಿಕೆಟ್ ಪತನ: 4-112 (ಮುಷ್ಫೀಕುರ್ ರಹೀಂ, 40.2), 5-148 (ಲಿಟನ್ ದಾಸ್, 49.4), 6-170 (ಶಕೀಬ್ ಅಲ್ ಹಸನ್, 55.6), 7-224 (ಮೆಹಿದಿ ಹಸನ್ ಮಿರಾಜ್, 69.4), 8-230 ತೈಜುಲ್ ಇಸ್ಲಾಂ, 71.1), 9-231 (ಹಸನ್ ಮಹಮುದ್, 72.2), 10-233 (ಖಾಲಿದ್ ಅಹ್ಮದ್, 74.2)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 18–7–50–3, ಮೊಹಮ್ಮದ್ ಸಿರಾಜ್ 17–2–57–2, ರವಿಚಂದ್ರನ್ ಅಶ್ವಿನ್ 15–1–45–2, ಆಕಾಶ್ ದೀಪ್ 15–6–43–2, ರವೀಂದ್ರ ಜಡೇಜ 9.2–0–28–1

ಭಾರತ: 9ಕ್ಕೆ 285 ಡಿಕ್ಲೇರ್ (34.4 ಓವರ್‌ಗಳಲ್ಲಿ)

ಜೈಸ್ವಾಲ್ ಬಿ ಹಸನ್ 72 (51ಎ, 4x12, 6x2)
ರೋಹಿತ್ ಬಿ ಮೆಹಿದಿ 23 (11ಎ, 4x1, 6x3)
ಶುಭಮನ್ ಸಿ ಹಸನ್ ಬಿ ಶಕೀಬ್ 39 (36ಎ, 4x4, 6x1)
ರಿಷಭ್ ಸೊ ಹಸನ್ ಬಿ ಶಕೀಬ್ 9 (11ಎ)
ವಿರಾಟ್ ಬಿ ಶಕೀಬ್ 47 (35ಎ, 4x4, 6x1)
ರಾಹುಲ್ ಸ್ಟಂಪ್ ಲಿಟನ್ ಬಿ ಮೆಹಿದಿ 68 (43ಎ, 4x7, 6x2)
ಜಡೇಜ ಸಿ ನಜ್ಮುಲ್ ಬಿ ಮೆಹಿದಿ 8 (13ಎ)
ಅಶ್ವಿನ್ ಸಿ ಶಕೀಬ್ 1 (4ಎ)
ಆಕಾಶ್ ಸಿ ಖಾಲಿದ್ ಬಿ ಮೆಹಿದಿ 12 (5ಎ, 6x2)
ಬೂಮ್ರಾ ಔಟಾಗದೇ 1 (1ಎ)
ಇತರೆ: 5 (ಬೈ 3, ನೋಬಾಲ್ 2)
ವಿಕೆಟ್ ಪತನ: 1-55 (ರೋಹಿತ್ ಶರ್ಮಾ, 3.5), 2-127 (ಯಶಸ್ವಿ ಜೈಸ್ವಾಲ್, 14.2), 3-141 (ಶುಭಮನ್ ಗಿಲ್, 17.1), 4-159 (ರಿಷಭ್ ಪಂತ್, 19.2), 5-246 (ವಿರಾಟ್ ಕೊಹ್ಲಿ, 29.1), 6-269 (ರವೀಂದ್ರ ಜಡೇಜ, 32.2), 7-272 (ರವಿಚಂದ್ರನ್ ಅಶ್ವಿನ್, 33.3), 8-284 (ಕೆ.ಎಲ್.ರಾಹುಲ್, 34.1), 9-285 (ಆಕಾಶ್ ದೀಪ್, 34.4)
ಬೌಲಿಂಗ್: ಹಸನ್ ಮಹಮುದ್ 6–0–66–1, ಖಾಲಿದ್ ಅಹ್ಮದ್ 4–0–43–0, ಮೆಹಿದಿ ಹಸನ್ ಮಿರಾಜ್ 6.4–0–41–4, ತೈಜುಲ್ ಇಸ್ಲಾಂ 7–0–54–0, ಶಕೀಬ್ ಅಲ್ ಹಸನ್ 11–0–78–4

ಎರಡನೇ ಇನಿಂಗ್ಸ್ ಬಾಂಗ್ಲಾದೇಶ 2ಕ್ಕೆ 26 (11 ಓವರ್‌ಗಳಲ್ಲಿ)

ಶಾದ್ಮನ್ ಔಟಾಗದೇ 7 (40ಎ, 4x1)
ಝಾಕಿರ್ ಎಲ್‌ಬಿಡಬ್ಲ್ಯು ಅಶ್ವಿನ್ 10 (15ಎ, 4x1)
ಹಸನ್ ಬಿ ಅಶ್ವಿನ್ 4 (9ಎ, 4x1)
ಮೊನಿಮಲ್ ಔಟಾಗದೇ 0 (2ಎ)
ಇತರೆ: 5 (ಬೈ 1, ಲೆಗ್‌ಬೈ 4)
ವಿಕೆಟ್ ಪತನ: 1-18 (ಝಾಕಿರ್ ಹಸನ್, 7.1), 2-26 (ಹಸನ್ ಮಹಮುದ್, 9.4)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 3-1-3-0, ಅಶ್ವಿನ್ 5-2-14-2, ಆಕಾಶ್ ದೀಪ್ 3-2-4-0



ಟೆಸ್ಟ್‌ನಲ್ಲಿ **3000** ರನ್ ಮತ್ತು **300** ವಿಕೆಟ್ ಗಳಿಸಿದ ಎರಡನೇ ಅತಿ ವೇಗದ ಆಲ್‌ರೌಂಡರ್ ಜಡೇಜ. ಇಂಗ್ಲೆಂಡ್‌ನ ಇಯಾನ್ ಬೋಥಂ (**72** ಟೆಸ್ಟ್) ಮೊದಲನೆಯವರು. ಭಾರತದಲ್ಲಿ ಜಡೇಜಗಿಂತ ಮೊದಲು ಕಪಿಲ್ ದೇವ್ ಮತ್ತು ಅಶ್ವಿನ್ ಈ 'ಡಬಲ್ ಮೈಲಿಗಲ್ಲು' ದಾಟಿದ್ದಾರೆ.

ಅಂಧರ ವಿಶ್ವ ಮಹಿಳಾ ಮತ್ತು ಜೂನಿಯರ್ ಚೆಸ್

ಮುನ್ನಡೆಯಲ್ಲಿ ಲಿಸೆಂಕೊ ಲುಬೊವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 12ನೇ ಐಬಿಎಸ್‌ಎ ಅಂಧ ಮತ್ತು ದೃಷ್ಟಿದೋಷವುಳ್ಳವರ ಮಹಿಳಾ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಆಡುತ್ತಿರುವ 20 ಮಂದಿಯಲ್ಲಿ ಕೆಲವರು 60 ವರ್ಷ ಮೀರಿದವರು. ಆದರೆ ಉತ್ಸಾಹದಲ್ಲಿ, ಕೌಶಲದಲ್ಲಿ ಅವರು ಕಡಿಮೆಯಿರಲಿಲ್ಲ. 12ನೇ ಐಬಿಎಸ್‌ಎ ಅಂಧ ಮತ್ತು ದೃಷ್ಟಿದೋಷವುಳ್ಳವರ ಮಹಿಳಾ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಅಗ್ರಸ್ಥಾನದಲ್ಲಿರುವ ಆಟಗಾರ್ತಿ ಝಿಲ್ಟ್‌ರ್ಝೋವಾ ಲಿಸೆಂಕೊ ಲುಬೊವ್ ಅವರ ವಯಸ್ಸು 68!.

ಉಕ್ರೇನ್‌ನ ಲುಬೊವ್ ಅವರು ಸೋಮವಾರ, ನಾಲ್ಕನೇ ಸುತ್ತಿನ ನಂತರ ಗರಿಷ್ಠ ನಾಲ್ಕು ಅಂಕ ಗಳಿಸಿದ್ದು ಒಂಟಿಯಾಗಿ ಮುನ್ನಡೆಗೇರಿದ್ದಾರೆ. ಸಮೀಪದ ಸ್ಪರ್ಧಿಗಳಿಗಿಂತ ಒಂದು ಪೂರ್ಣ ಪಾಯಿಂಟ್ ಮುನ್ನಡೆ ಪಡೆದಿರುವ ಅವರು ಆಡುತ್ತಿರುವ ಆಟ ನೋಡಿದರೆ ತಮ್ಮ ಪಾರಮ್ಯ ಮುಂದುವರಿಸುವಂತೆ ಕಾಣುತ್ತಿದೆ.




ಝಿಲ್ಟ್‌ರ್ಝೋವಾ ಲಿಸೆಂಕೊ ಲುಬೊವ್

ಅವರು ನಾಲ್ಕನೇ ಸುತ್ತಿನಲ್ಲಿ ಎರಡನೇ ಶ್ರೇಯಾಂಕದ ಎಜೆಮನ್ ಎಮಿಲಿಯಾ (ಪೋಲೆಂಡ್) ಅವರನ್ನು ಸೋಲಿಸಿದರು. ಪೋಲೆಂಡ್‌ನ ಟ್ರಿಜನ್‌ಸ್ಕಾ ಎಮಿಲಿಯಾ, ಕಜಕಸ್ತಾನದ ಮುರಟೊವಾ ಅಲಿಯಾ, ಅಮೆರಿಕದ ಲೌಸರ್ ಜೆಸಿಕಾ ಅವರು ತಲಾ ಮೂರು ಪಾಯಿಂಟ್ಸ್ ಪಡೆದು ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

ಸೋಮವಾರ ಎರಡು ಸುತ್ತಿನ ಪಂದ್ಯಗಳು ನಡೆದವು. ಮಂಗಳವಾರ ಟೂರ್ನಿಗೆ ವಿಶ್ರಾಂತಿಯ ದಿನ. ಇನ್ನೂ ನಾಲ್ಕು ಸುತ್ತುಗಳ ಆಟ ಬಾಕಿಯಿದೆ.

ವಿಶ್ವ ಜೂನಿಯರ್ (19 ವರ್ಷದೊಳಗಿನವರ) ವಿಭಾಗದಲ್ಲಿ ಹಾಲಿ ಚಾಂಪಿಯನ್, ಪೋಲೆಂಡ್‌ನ ರೇಸಿಸ್ ಮೈಕೆಲ್ (3.5) ಮುನ್ನಡೆಯಲ್ಲಿದ್ದಾರೆ. ಅವರು ಭಾರತದ ಜಾನ್ ಹ್ಯಾರಿಸ್ ಸುಜಿನ್ (2.5) ವಿರುದ್ಧ ಜಯಗಳಿಸಿದರು. ಇಬ್ಬರು– ಎರಡನೇ ಶ್ರೇಯಾಂಕದ ಸಾಲೊಮನ್ ಜೂಲಿಯಾ (ಪೋಲೆಂಡ್) ಮತ್ತು ಕಜಕಸ್ತಾನದ ಕುವಾನ್ಯಲಿ ನುರ್ಗಿಸ ತಲಾ ಮೂರು ಪಾಯಿಂಟ್ಸ್ ಗಳಿಸಿದ್ದು ಎರಡನೇ ಸ್ಥಾನದಲ್ಲಿದ್ದಾರೆ. ನುರ್ಗಿಸ, ಭಾರತದ ರಾಹುಲ್ ವಫೇಲಾ (1.5) ವಿರುದ್ಧ ಜಯಗಳಿಸಿದರು. ಜೂಲಿಯಾ, ಸ್ಲೊವೇನಿಯಾದ ಗ್ರಾಡಿಸೆಕ್ ಬೊರ್ (2.5) ಜೊತೆ ಡ್ರಾ ಮಾಡಿಕೊಂಡರು.

ಸೂರ್ಯವಂಶಿ ಮಿಂಚಿನ ಬ್ಯಾಟಿಂಗ್



ಚೆನ್ನೈ (ಪಿಟಿಐ): ಕೇವಲ 13 ವರ್ಷ ವಯಸ್ಸಿನ ವೈಭವ್ ಸೂರ್ಯವಂಶಿ (ಅಜೇಯ 81) ಸ್ಫೋಟಕ ಬ್ಯಾಟಿಂಗ್ ಪ್ರದರ್ಶನದ ನೆರವಿನಿಂದ 19 ವರ್ಷದೊಳಗಿನವರ 'ಅನೌಪಚಾರಿಕ' ಟೆಸ್ಟ್ ಪಂದ್ಯದಲ್ಲಿ ಭಾರತ ತಂಡ ಮೊದಲ ದಿನವಾದ ಸೋಮವಾರ ಆಸ್ಟ್ರೇಲಿಯಾ ವಿರುದ್ಧ ಉತ್ತಮ ಆರಂಭ ಮಾಡಿದೆ.

ಆಸ್ಟ್ರೇಲಿಯಾ ಮೊದಲ ಇನಿಂಗ್ಸ್‌ನಲ್ಲಿ 293 ರನ್ ಗಳಿಸಿ ಆಲೌಟ್ ಆಯಿತು. ವೇಗದ ಬೌಲರ್‌ಗಳಾದ ಮೊಹಮ್ಮದ್ ಇನಾನ್ ಮತ್ತು ಕರ್ನಾಟಕದ ಸಮರ್ಥ್ ನಾಗರಾಜ್ ಅವರು ತಲಾ ಮೂರು ವಿಕೆಟ್ ಪಡೆದು ಮಿಂಚಿದರು.

ಆಮೇಲೆ ವೈಭವ್ ಅವರ ಆಟದ ವೈಭವ ಗಮನಸೆಳೆಯಿತು. ಬಿಹಾರದ ಬಾಲಕ 47 ಎಸೆತಗಳಲ್ಲಿ 13 ಬೌಂಡರಿ, ಎರಡು ಸಿಕ್ಸರ್‌ಗಳನ್ನು ಬಾರಿಸಿ ತನ್ನ ಸ್ಟ್ರೋಕ್ ಮೇಕಿಂಗ್ ಸಾಮರ್ಥ್ಯ ಪ್ರದರ್ಶಿಸಿದ. ಮುರಿಯದ ಮೊದಲ ವಿಕೆಟ್‌ಗೆ ವೈಭವ್ ಮತ್ತು ವಿಹಾನ್ ಮಲ್ಹೋತ್ರಾ (ಔಟಾಗದೇ 29) 14 ಓವರುಗಳಲ್ಲಿ 103 ರನ್ ಸೇರಿಸಿ, ಆತಿಥೇಯ ತಂಡಕ್ಕೆ ಭದ್ರ ಬುನಾದಿ ಒದಗಿಸಿದ್ದಾರೆ.

ಇದಕ್ಕೆ ಮೊದಲು, ಏಡನ್ ಓ'ಕಾನರ್ 70 ಎಸೆತಗಳಲ್ಲಿ 61 ರನ್ ಬಾರಿಸಿ ಆಸ್ಟ್ರೇಲಿಯಾ ಪರ ಅತ್ಯಧಿಕ ಮೊತ್ತ ಗಳಿಸಿದರು. ಆರಂಭ ಆಟಗಾರ ರಿಲಿ ಕಿಂಗ್ಸೆಲ್ (53, 77ಎ) ಮತ್ತು ಕ್ರಿಸ್ಟಿಯನ್ ಹೋವ್ (48) ಸಹ ಉಪಯುಕ್ತ ಕೊಡುಗೆ ನೀಡಿದರು. ಕಾನರ್ ಮತ್ತು ಹೋವ್ ನಡುವಣ ಏಳನೇ ವಿಕೆಟ್‌ಗೆ 98 ರನ್‌ಗಳು ಹರಿದುಬಂದವು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ 19 ವರ್ಷದೊಳಗಿನವರ ತಂಡ: 71.4 ಓವರುಗಳಲ್ಲಿ 293 (ಏಡನ್ ಓ'ಕಾನರ್ 61, ಕ್ರಿಸ್ಟಿಯನ್ ಹೋವ್ 48, ರಿಲಿ ಕಿಂಗ್ಸೆಲ್ 53; ಮೊಹಮದ್ ಇನಾನ್ 48ಕ್ಕೆ3, ಸಮರ್ಥ್ ನಾಗರಾಜ್ 49ಕ್ಕೆ3); ಭಾರತ 19 ವರ್ಷದೊಳಗಿವರ ತಂಡ: 14 ಓವರುಗಳಲ್ಲಿ ವಿಕೆಟ್ ನಷ್ಟವಿಲ್ಲದೇ 103 (ವಿಹಾನ್ ಮಲ್ಹೋತ್ರಾ ಔಟಾಗದೇ 21)

ಭಾರತ ಕ್ರಿಕೆಟ್ 'ಶಕ್ತಿ' ವೃದ್ಧಿಸಿದ ಎನ್‌ಸಿಎ

ಶ್ರೇಷ್ಠತಾ ಕೇಂದ್ರದ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗಾಯಗೊಂಡ ಕ್ರಿಕೆಟಿಗರಿಗೆ ಆರೈಕೆ ನೀಡುವುದಷ್ಟೇ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ ಕಾರ್ಯ ಎಂಬ ತಪ್ಪುಕಲ್ಪನೆ ಜನರಲ್ಲಿದೆ. ಭಾರತದ ಕ್ರಿಕೆಟ್ ತಂಡದ ಬೆಂಚ್ ಶಕ್ತಿಯನ್ನು ಬಲಿಷ್ಠಗೊಳಿಸುವುದು ಮತ್ತು ವಿಶ್ವದರ್ಜೆಯ ಪೈಪೋಟಿಗೆ ಆಟಗಾರರ ಸಾಮರ್ಥ್ಯವನ್ನು ವೃದ್ಧಿಸುವ ಕಾರ್ಯ ಇಲ್ಲಿ ನಡೆಯುತ್ತಿದೆ '–



ವಿವಿಎಸ್ ಲಕ್ಷ್ಮಣ್ ಪ್ರಜಾವಾಣಿ ಚಿತ್ರ

ಎನ್‌ಸಿಎ ಮುಖ್ಯಸ್ಥ ವಿವಿಎಸ್ ಲಕ್ಷ್ಮಣ್ ಅವರ ಆತ್ಮವಿಶ್ವಾಸದ ನುಡಿಗಳು ಇವು. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸಮೀಪದಲ್ಲಿ ಉದ್ಘಾಟನೆಗೊಂಡ ಬಿಸಿಸಿಐ ಶ್ರೇಷ್ಠತಾ ಕೇಂದ್ರ (ಎನ್‌ಸಿಎಯನ್ನು ಮರುನಾಮಕರಣ ಮಾಡಲಾಗಿದೆ) ದಲ್ಲಿ ಭಾನುವಾರ ಅವರು ಸುಮಾರು 45 ನಿಮಿಷ ಮಾಧ್ಯಮದವರೊಂದಿಗೆ ನಡೆಸಿದ ಸಂವಾದದಲ್ಲಿ ಮಾಹಿತಿ ನೀಡಿದರು. ಕಳೆದ 3 ವರ್ಷಗಳಿಂದ ಅವರು ಎನ್‌ಸಿಎ ಮುಖ್ಯಸ್ಥರಾಗಿದ್ದಾರೆ. ಅವರಿಗಿಂತ ಮುನ್ನ ರಾಹುಲ್ ದ್ರಾವಿಡ್ ಅವರು ಮುಖ್ಯಸ್ಥರಾಗಿದ್ದರು.

'ಎನ್‌ಸಿಎನಲ್ಲಿ ಪುರುಷ ಮತ್ತು ಮಹಿಳಾ ಕ್ರಿಕೆಟಿಗರಿಗೆ ಪುನಃಶ್ಚೇತನ, ತರಬೇತಿ ಮತ್ತು ಕೌಶಲವೃದ್ಧಿಯ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಜೂನಿಯರ್, ಸೀನಿಯರ್ ಮತ್ತು ಈಗಾಗಲೇ ಭಾರತ ತಂಡದಲ್ಲಿ ಆಡುತ್ತಿರುವ ಎಲ್ಲ ಆಟಗಾರರಿಗೂ ಇಲ್ಲಿ ಕಾರ್ಯಕ್ರಮಗಳಿವೆ. ಅವುಗಳನ್ನು ನಿರ್ವಹಿಸಲು ವಿಷಯ ಪರಿಣತ ತರಬೇತುದಾರರು ಇದ್ದಾರೆ. ಆಟಗಾರರಷ್ಟೇ ಅಲ್ಲ. ಕೋಚ್‌ಗಳನ್ನು ತರಬೇತುಗೊಳಿಸುವ ಕಾರ್ಯಕ್ರಮಗಳು ನಮ್ಮಲ್ಲಿವೆ. ಬೌಲಿಂಗ್, ಬ್ಯಾಟಿಂಗ್, ಫೀಲ್ಡಿಂಗ್, ಕ್ರೀಡಾ ವಿಜ್ಞಾನ, ಫಿಸಿಯೊಥೆರಪಿ, ಕ್ರೀಡಾ ಮನಃಶಾಸ್ತ್ರ ಮತ್ತಿತರ ವಿಭಾಗಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಇದರ ಫಲವಾಗಿ ಮುಂದಿನ ಒಂದು ದಶಕಕ್ಕಿಂತಲೂ ಹೆಚ್ಚು ಅವಧಿಯವರೆಗೆ ಭಾರತ ತಂಡದ ಬೆಂಚ್ ಶಕ್ತಿ ಬಲಿಷ್ಠವಾಗಿಯೇ ಇರಲಿದೆ' ಎಂದರು.

'ನಮ್ಮಲ್ಲಿಗೆ ಬರುವ ಆಟಗಾರರು ಹೊರಗಿನ ಅಕಾಡೆಮಿಗಳಲ್ಲಿರುವ ಕೋಚ್‌ಗಳಿಂದ ಬಹಳಷ್ಟು ಕೌಶಲಗಳನ್ನು ಕಲಿತಿರುತ್ತಾರೆ. ನಮ್ಮಲ್ಲಿ ಬಂದಾಗ ಕಲಿಸುವ ಕೆಲವು ಕೌಶಲಗಳು ಅವರಿಗೆ ಗೊಂದಲ ಮೂಡಿಸಬಹುದು. ಅದಕ್ಕಾಗಿ ನಮ್ಮಲ್ಲಿ ಕಲಿತಿದ್ದೇ ಕಡ್ಡಾಯ ಎಂದು ನಾವು ಹೇಳುವುದಿಲ್ಲ. ಆಟಗಾರರು ತಮ್ಮ ಅನುಕೂಲಕ್ಕೆ ತಕ್ಕಂತೆ ಆಯ್ಕೆ ಮಾಡಿಕೊಳ್ಳಬಹುದು. ಮನೋವಿಜ್ಞಾನ ಪರಿಣತರ ಪಾತ್ರವೂ ಇಲ್ಲಿ ಬಹಳ ಮುಖ್ಯವಾಗಿದೆ' ಎಂದು ವಿವರಿಸಿದರು.

ಶೂಟಿಂಗ್: ಭಾರತಕ್ಕೆ ಮತ್ತೆರಡು ಕಂಚು

ನವದೆಹಲಿ (ಪಿಟಿಐ): ಭಾರತದ ರೈಫಲ್ ಮತ್ತು ಪಿಸ್ತೂಲ್ ಶೂಟರ್‌ಗಳು, ಪೆರು ರಾಜಧಾನಿ ಲಿಮಾದಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವ ಚಾಂಪಿಯನ್‌ಷಿಪ್‌ನ 10ಮೀ. ಮಿಶ್ರ ತಂಡ ಸ್ಪರ್ಧೆಯಲ್ಲಿ ಭಾನುವಾರ ಎರಡು ಕಂಚಿನ ಪದಕ ಗೆದ್ದುಕೊಂಡಿದ್ದಾರೆ.

ಭಾರತ ಐದು ಪದಕಗಳನ್ನು ಗೆದ್ದುಕೊಂಡಂತೆ ಆಗಿದೆ. ರೈಫಲ್ ಶೂಟಿಂಗ್‌ನಲ್ಲಿ ಗೌತಮಿ ಭಾನೋಟ್ ಮತ್ತು ಅಜಯ್ ಮಲಿಕ್ ಜೋಡಿ ತಂಡ ಕಂಚು ಗೆದ್ದಿತು. ಮಿಶ್ರ ಪಿಸ್ತೂಲ್ ವಿಭಾಗದಲ್ಲಿ ಲಕ್ಷಿತಾ ಮತ್ತು ಪ್ರಮೋದ್ ಕಂಚಿನ ಪದಕ ಗೆದ್ದುಕೊಂಡರು.

ಇರಾನಿ ಕಪ್‌ಗೆ ಸರ್ಫರಾಜ್, ಧ್ರುವ

ಕಾನ್ಪುರ (ಪಿಟಿಐ): ಸರ್ಫರಾಜ್ ಖಾನ್, ಧ್ರುವ ಜುರೇಲ್ ಮತ್ತು ಯಶ್ ದಯಾಳ್ ಅವರನ್ನು ಇರಾನಿ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾಗವಹಿಸಲು ಭಾರತ ಟೆಸ್ಟ್ ತಂಡದಿಂದ ಸೋಮವಾರ ಮುಕ್ತಗೊಳಿಸಲಾಗಿದೆ.

ಲಖನೌನಲ್ಲಿನ ಏಕನಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ಮಂಗಳವಾರ ಇರಾನಿ ಕಪ್ ಟೂರ್ನಿ ಆರಂಭವಾಗಲಿದೆ. ಮೊದಲ ಪಂದ್ಯದಲ್ಲಿ ರಣಜಿ ಟ್ರೋಫಿ ಚಾಂಪಿಯನ್ ಮುಂಬೈ ಮತ್ತು ಭಾರತ ಇತರರ ತಂಡಗಳು ಮುಖಾಮುಖಿಯಾಗಲಿವೆ.

ಅಜಿಂಕ್ಯ ರಹಾನೆ ಮುಂಬೈ ತಂಡವನ್ನು ಮುನ್ನಡೆಸಿದರೆ, ಋತುರಾಜ್ ಗಾಯಕವಾಡ್ ಅವರು ಭಾರತ ಇತರರ ತಂಡದ ನಾಯಕರಾಗಿದ್ದಾರೆ. ಭಾರತ ಇತರರ ತಂಡಕ್ಕೆ ಧ್ರುವ್, ಯಶ್ ದಯಾಳ್; ಮುಂಬೈ ತಂಡಕ್ಕೆ ಸರ್ಫರಾಜ್ ಖಾನ್ ಆಡಲಿದ್ದಾರೆ.

ಅಥ್ಲೆಟಿಕ್ಸ್: ದೀಕ್ಷಿತಾಗೆ ಚಿನ್ನದ ಪದಕ



ದೀಕ್ಷಿತಾ

ಬೆಂಗಳೂರು: ಕರ್ನಾಟಕದ ದೀಕ್ಷಿತಾ ಅವರು ಪಟ್ನಾದಲ್ಲಿ ನಡೆಯುತ್ತಿರುವ ನಾಲ್ಕನೇ ಇಂಡಿಯನ್ ಓಪನ್ (23 ವರ್ಷದೊಳಗಿನವರ) ಅಥ್ಲೆಟಿಕ್ಸ್‌ನ ಮಹಿಳೆಯರ 400 ಮೀ ಹರ್ಡಲ್ಸ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು.

ದೀಕ್ಷಿತಾ 1 ನಿಮಿಷ 00.40 ಸೆಕೆಂಡ್‌ನಲ್ಲಿ ಗುರಿ ತಲುಪಿದರು. ಮಹಾರಾಷ್ಟ್ರದ ನೇಹಾ ವಿಶಾಲ್ (1ನಿ.00.77ಸೆ), ಪಶ್ಚಿಮ ಬಂಗಾಳದ ಮೌಮಿ ಜಾನಾ (1ನಿ.1.14ಸೆ) ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು.

ಕರ್ನಾಟಕದ ತುಷಾರ್ ವಸಂತ್ ಭೇಕಾನೆ (1ನಿ.51.97ಸೆ) ಮತ್ತು ಲೋಕೇಶ್ ಕೆ. (1ನಿ.53.23ಸೆ) ಅವರು ಪುರುಷರ 800 ಮೀಟರ್ ಓಟದಲ್ಲಿ ಕ್ರಮವಾಗಿ ಬೆಳ್ಳಿ ಮತ್ತು ಕಂಚು ಗೆದ್ದರು. ರಾಜಸ್ಥಾನದ ಶಕೀಲ್ (1ನಿ.51.90) ಚಿನ್ನ ಜಯಿಸಿದರು.

ಪುರುಷರ ಹೈಜಂಪ್ ನಲ್ಲಿ ಸುದೀಪ್ 2.11 ಮೀಟರ್ ಎತ್ತರ ಜಿಗಿದು ಬೆಳ್ಳಿ ಗೆದ್ದರು. ಕೇರಳದ ಜೋಮನ್ ಜಾಯ್ (2.17 ಮೀಟರ್) ಕೂಟ ದಾಖಲೆ ಯೊಂದಿಗೆ ಚಿನ್ನ ಗೆದ್ದರು. 2023ರಲ್ಲಿ ಚಂಡೀಗಢದ ಮೊಹಮ್ಮದ್ ಅಶ್ರಫ್ ಅಲಿ (2.15ಮೀ) ಅವರು ನಿರ್ಮಿಸಿದ್ದ ದಾಖಲೆಯನ್ನು ಜೋಮನ್ ಮುರಿದರು.

ಮಹಿಳೆಯರ ಲಾಂಗ್ ಜಂಪ್ ಸ್ಪರ್ಧೆಯಲ್ಲಿ ದಿಶಾ ಗಣಪತಿ 5.86 ಮೀಟರ್ ಸಾಧನೆಯೊಂದಿಗೆ ಕಂಚು ಗೆದ್ದರು. ಪಶ್ಚಿಮ ಬಂಗಾಳದ ಮೌಮಿತಾ ಮೊಂಡಲ್ (6.27ಮೀ) ಮತ್ತು ಆಂಧ್ರ ಪ್ರದೇಶದ ಲಕ್ಷ್ಮಿ ಗೆಮ್ಮೆಲ (5.91ಮೀ) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಜಯಿಸಿದರು.

ಮಂಡಿ ನೋವಿನಿಂದ ಪಂದ್ಯ ಕಳೆದುಕೊಂಡ ಸಮಿತ್ ದ್ರಾವಿಡ್

ಚೆನ್ನೈ (ಪಿಟಿಐ): ಮೊಣಕಾಲಿನ ನೋವಿನಿಂದಾಗಿ ಕರ್ನಾಟಕದ ಸಮಿತ್ ದ್ರಾವಿಡ್, ಭಾರತ ಮತ್ತು ಆಸ್ಟ್ರೇಲಿಯಾ ನಡುವಣ 19 ವರ್ಷದೊಳಗಿನವರ ಮೊದಲ 'ಅನೌಪಚಾರಿಕ' ಟೆಸ್ಟ್ ಕ್ರಿಕೆಟ್ ಪಂದ್ಯ ಕಳೆದುಕೊಂಡರು. ಅವರು ಸರಣಿಯ ಎರಡನೇ ಪಂದ್ಯದಲ್ಲಿ ಆಡುವ ಸಾಧ್ಯತೆಯೂ ಕ್ಷೀಣವಾಗಿದೆ.



ಸಮಿತ್ ದ್ರಾವಿಡ್

ಮೊದಲ ಪಂದ್ಯ ಸೋಮವಾರ ಇಲ್ಲಿ ಆರಂಭವಾಗಿದೆ. ಸಮಿತ್, ಪುದುಚೇರಿಯಲ್ಲಿ ನಡೆದ ಏಕದಿನ ಸರಣಿಯಲ್ಲಿ ಪದಾರ್ಪಣೆ ಮಾಡುವ ನಿರೀಕ್ಷೆಯಿತ್ತು. ಆದರೆ ಅವರು ಯಾವುದೇ ಪಂದ್ಯದಲ್ಲಿ ಆಡಿರಲಿಲ್ಲ.

ಗೆಲುವಿನೊಂದಿಗೆ ಕಿಕ್‌ಸ್ಟಾರ್ಟ್ ಸೆಮಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಭಿಷೇಕ್ ಶಂಕರ್ ಪವಾರ್ ಮತ್ತು ಸೈಖೋಮ್ ಬೋರಿಶ್ ಸಿಂಗ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಕಿಕ್‌ಸ್ಟಾರ್ಟ್ ತಂಡವು ಇಲ್ಲಿ ನಡೆಯುತ್ತಿರುವ ಸಿ. ಪುಟ್ಟಯ್ಯ ಸ್ಮಾರಕ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ 7–2ರಿಂದ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವನ್ನು ಸುಲಭವಾಗಿ ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಮೈದಾನದಲ್ಲಿ ಸೋಮವಾರ ನಡೆದ 'ಬಿ' ಗುಂಪಿನ ಕೊನೆಯ ಪಂದ್ಯದಲ್ಲಿ ಕಿಕ್‌ಸ್ಟಾರ್ಟ್ ತಂಡವು ಈ ಗೆಲುವಿನೊಂದಿಗೆ ನಾಲ್ಕರ ಘಟ್ಟಕ್ಕೆ ಮುನ್ನಡೆಯಿತು.

ಕಿಕ್‌ಸ್ಟಾರ್ಟ್ ಪರ ಅಭಿಷೇಕ್ (12ನೇ, 42ನೇ ಮತ್ತು 88ನೇ ನಿಮಿಷ), ಸೈಖೋಮ್ (44ನೇ, 57ನೇ ಮತ್ತು 60ನೇ) ತಲಾ ಮೂರು ಗೋಲು ಗಳಿಸಿದರೆ, ಲೇನಾಲ್ಡ್ ಕ್ಯಾರಲ್ ಮಾರ್ಕ್ (63ನೇ) ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು. ಸ್ಟೂಡೆಂಟ್ಸ್ ಯೂನಿಯನ್ ಪರ ಹೇಮಂತ್ ಕುಮಾರ್ (13ನೇ) ಮತ್ತು ಅಂಕಿತ್ ಸಿಂಗ್ (45 + 5ನೇ) ತಲಾ ಒಂದು ಗೋಲು ತಂದಿತ್ತರು.

ಮತ್ತೊಂದು ಪಂದ್ಯದಲ್ಲಿ ರೂಟ್ಸ್ ಎಫ್‌ಸಿ ತಂಡವು 2–1 ಗೋಲುಗಳಿಂದ ಎಎಸ್‌ಸಿ ಅಂಡ್ ಸೆಂಟರ್ ಎಫ್‌ಸಿ ತಂಡವನ್ನು ಸೋಲಿಸಿತು. ರೂಟ್ಸ್‌ನ ಮೊಹಮ್ಮದ್ ತಮೀಮ್ ಟಿ.ಕೆ. (23ನೇ) ಮತ್ತು ಗಾಡ್ವಿನ್ ಜಾನ್ಸನ್ (88ನೇ) ತಲಾ ಒಂದು ಗೋಲು ಗಳಿಸಿದರು. ಎಎಸ್‌ಸಿ ಪರ ಏಕೈಕ ಗೋಲನ್ನು ನೀರಜ್ ಸಿಂಗ್ (79ನೇ) ದಾಖಲಿಸಿದರು.



ಕಿಕ್‌ಸ್ಟಾರ್ಟ್ ತಂಡದ ಅಭಿಷೇಕ್ ಶಂಕರ್ ಪವಾರ್ (ಎಡದಿಂದ ಎರಡನೇಯವರು) ಚೆಂಡಿಗೆ ಕಿಕ್ ನೀಡಿದರು –ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.

ಸಬ್ ಜೂನಿಯರ್ ರಾಷ್ಟ್ರೀಯ ಡಾಜ್‌ಬಾಲ್ ಚಾಂಪಿಯನ್‌ಷಿಪ್

ಕರ್ನಾಟಕದ ಬಾಲಕಿಯರಿಗೆ ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಬಾಲಕಿಯರ ತಂಡವು 3ನೇ ಸಬ್ ಜೂನಿಯರ್ ರಾಷ್ಟ್ರೀಯ ಡಾಜ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ಪುದುಚೇರಿಯ ರಾಜೀವ್‌ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ಮುಕ್ತಾಯಗೊಂಡ ಕೂಟದಲ್ಲಿ ಕರ್ನಾಟಕದ ಬಾಲಕರ ತಂಡವು ಚತುರ್ಥ ಸ್ಥಾನ ಪಡೆಯಿತು.

ಬಾಲಕಿಯರ ಫೈನಲ್‌ನಲ್ಲಿ ದೀಪ್ಸಿಖಾ ಗದ್ದಮ್ ನೇತೃತ್ವದ ಕರ್ನಾಟಕ ತಂಡವು ಮಹಾರಾಷ್ಟ್ರ ತಂಡವನ್ನು ಮಣಿಸಿ ಚಾಂಪಿಯನ್ ಆಯಿತು. ಗುಜರಾತ್ ಮತ್ತು ಆತಿಥೇಯ ಪುದುಚೇರಿ ಕ್ರಮವಾಗಿ ಮೂರನೇ ಮತ್ತು ನಾಲ್ಕನೇ ಸ್ಥಾನ ಪಡೆದವು.

ಬಾಲಕರ ವಿಭಾಗದಲ್ಲಿ ತಮಿಳುನಾಡು ತಂಡ ಚಾಂಪಿಯನ್ ಆದರೆ, ಹರಿಯಾಣ ಮತ್ತು ಪುದುಚೇರಿ ತಂಡಗಳು ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದವು.

ಕೂಟದಲ್ಲಿ 24 ತಂಡಗಳು ಭಾಗವಹಿಸಿದ್ದವು. ಕರ್ನಾಟಕದ ವರ್ಷರಾಜ್ ಅತ್ಯುತ್ತಮ ಆಟಗಾರ್ತಿ ಮತ್ತು ತಮಿಳುನಾಡಿನ ಗೋಕುಲ್ ಅತ್ಯುತ್ತಮ ಆಟಗಾರನಾಗಿ ಹೊರಹೊಮ್ಮಿದರು.



ಪ್ರಶಸ್ತಿಯೊಂದಿಗೆ ಕರ್ನಾಟಕ ಬಾಲಕಿಯರ ತಂಡ. (ನಿಂತಿರುವವರು) ಎಡದಿಂದ ಅಮೃತಾ ಆರ್, ಪೂರ್ವಿ ಶೆಣೈ, ಲೀಶಾ ಡಿ. ಚೌಹಾಣ್, ದೀಪ್ಸಿಖಾ ಗದ್ದಮ್, ಆಧ್ಯಾಶ್ರೀ, ವರ್ಷಿತಾ ಎನ್, ತನುಶ್ರೀ ಕೆ, ಪಾವನಿ ಸಿ.ಎಚ್; (ಮಂಡಿಯೂರಿದವರು) ಲೌಕ್ಯಾ ಆರ್, ವರ್ಷರಾಜ್, ಆಶ್ರಿತಾ, ಧ್ರುವಿ ಎಸ್

ಸ್ಯಾಫ್: ಭಾರತ ಚಾಂಪಿಯನ್

ಥಿಂಪು (ಪಿಟಿಐ): ಭಾರತ ತಂಡವು 17 ವರ್ಷದೊಳಗಿನವರ ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಫೈನಲ್‌ನಲ್ಲಿ 2–0 ಗೋಲುಗಳಿಂದ ಬಾಂಗ್ಲಾದೇಶವನ್ನು ಮಣಿಸಿ ಪ್ರಶಸ್ತಿಯನ್ನು ಉಳಿಸಿಕೊಂಡಿತು.

ಇಲ್ಲಿನ ಚಾಂಗ್ಲಿಮಿಥಾಂಗ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಭಾರತ ದ್ವಿತೀಯಾರ್ಧದಲ್ಲಿ ಅಮೋಘ ಆಟ ಪ್ರದರ್ಶಿಸಿತು. ಮೊಹಮ್ಮದ್ ಕೈಫ್ 58ನೇ ನಿಮಿಷದಲ್ಲಿ ಭಾರತಕ್ಕೆ ಮುನ್ನಡೆ ಒದಗಿಸಿದರು.

ಪಂದ್ಯ ಮುಗಿಯಲು ಕೆಲವೇ ನಿಮಿಷ ಬಾಕಿ ಇರುವಾಗ ಮೊಹಮ್ಮದ್ ಅರ್ಬಾಶ್ (90 + 5ನೇ ನಿ) ಚೆಂಡನ್ನು ಗುರಿ ಸೇರಿಸಿ ಗೆಲುವಿನ ಅಂತರವನ್ನು ಹೆಚ್ಚಿಸಿದರು.

ಇ.ಸಿ. ಸದಸ್ಯರ ವಿರುದ್ಧ ಉಷಾ ಕಿಡಿ

ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ನ ಪದಕ ವಿಜೇತರನ್ನು ಗೌರವಿಸುವಲ್ಲಿ ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಕಾರ್ಯಕಾರಿ ಸಮಿತಿ ಸದಸ್ಯರು ವಿಫಲವಾಗಿರುವುದು ತೀವ್ರ ಕಳವಳಕಾರಿ ವಿಚಾರ ಎಂದು ಸಂಸ್ಥೆಯ ಅಧ್ಯಕ್ಷೆ ಪಿ.ಟಿ.ಉಷಾ ಟೀಕಿಸಿದ್ದಾರೆ.

ಒಲಿಂಪಿಕ್ಸ್‌ಗೆ ಸಿದ್ಧತೆ ನಡೆಸಲು ಅಥ್ಲೀಟುಗಳಿಗೆ ನೀಡಲು ಉದ್ದೇಶಿಸಿದ್ದ ಆರ್ಥಿಕ ನೆರವನ್ನು ಹಣಕಾಸು ಸಮಿತಿ ತಡೆಹಿಡಿದಿತ್ತು ಎಂದು ಉಷಾ ಆರೋಪಿಸಿದ್ದಾರೆ. ಉಷಾ ಮತ್ತು ಇ.ಸಿ. ಸದಸ್ಯರ ನಡುವೆ ಅಂತಃಕಲಹ ಮುಂದುವರಿದಂತಾಗಿದೆ.

ಭಾರತದ ಕ್ರೀಡಾಪಟುಗಳು, ಒಲಿಂಪಿಕ್ಸ್‌ನಲ್ಲಿ ಆರು ಪದಕಗಳನ್ನು ಪಡೆದಿದ್ದರು. ಮನು ಭಾಕರ್ ಒಂದೇ ಒಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನು ಗೆದ್ದು ಐತಿಹಾಸಿಕ ಸಾಧನೆ ದಾಖಲಿಸಿದ್ದರು. 'ಕಾರ್ಯಕಾರಿ ಸಮಿತಿ ಅವರ ಯಶಸ್ಸನ್ನು ಆಚರಿಸಲು ಬಯಸುತ್ತಿಲ್ಲ. ಇದು ತಮಗೆ ಅತೀವ ಬೇಸರ ಮೂಡಿಸಿದೆ' ಎಂದು 'ಪಯ್ಯೋಳಿ ಎಕ್ಸ್‌ಪ್ರೆಸ್' ಖ್ಯಾತಿಯ ಉಷಾ ಹೇಳಿದ್ದಾರೆ.